ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 41

ರೂ. 5/-

ಅಕ್ಟೋಬರ್ 11, 2009

ಕನ್ನಡ ವಾರಪತ್ರಿಕೆ




ತುತ್ತಿನ ಚೀಲ ಬರಿದೋ ಬರಿದು



ಅಪಾರ ಮಳೆ ಕೈಕಟ್ಟಿ ಕುಂತ ಸರ್ಕಾರ





ದಕ್ಷಿಣ ಕನ್ನಡ: ಭ್ರಷ್ಟಾಚಾರದ ಮೂರು ಮುಖಗಳು

'ಭಾರತ-ಭಾರತಿ' ಪುಸ್ತಕಗಳು !! 'ಭಗತ್ ಸಿಂಗ್'ನಲ್ಲಿ 'ಕ್ರಾಂತಿ' ಇಲ್ಲ 'ಅಂಬೇಡ್ಕರ್'ರಲ್ಲಿ 'ಮನು' ಇಲ್ಲ

ಚೀನಾ ವಿರೋಧಿ ಹುಯಿಲಿನ ಹಿಂದೆ ಕಾರ್ಪೊರೇಟ್ ಕೈಗಳು

ಸಂದರ್ಶನ

ಸಂಗಾತಿ ಜಯರಾಂ.. ಸಿ.ಐ.ಟಿ.ಯು. ನ ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷರಾಗಿ ಸುದೀರ್ಘ ಹದಿನೇಳು ವರ್ಷಗಳ ಕಾಲ ಹಲವಾರು ಹೋರಾಟಗಳನ್ನು ಸಂಘಟಿಸಿದ್ದಾರೆ. ಮೈಸೂರಿನಲ್ಲಿ ಕಾರ್ಮಿಕ ಚಳುವಳಿ ವಿಸ್ತಾರಗೊಳ್ಳುತ್ತಿದ್ದು, ಹೊಸ ಹೊಸ ವಿಭಾಗಗಳು ಸಿಐಟಿಯುನ ತೆಕ್ಕೆಗೆ ಬರುತ್ತಿವೆ. ಈ ಸಂದರ್ಭದಲ್ಲಿ ಜಿಲ್ಲೆಯ ಕಾರ್ಮಿಕ ಚಳುವಳಿ ನಡೆದು ಬಂದ ದಾರಿ, ವಹಿಸಬೇಕಾದ ಜವಾಬ್ದಾರಿ, ಭವಿಷ್ಯದ ಕಣ್ಣೋಟದ ಕುರಿತು ಸಂಗಾತಿ ಜಯರಾಂ ಜೊತೆ ಮಾತನಾಡಿದಾಗ...



'ವರ್ಗ ಪ್ರಜ್ಞೆ ಮೂಡಿಸುವ ಹೊಣೆ ನಮ್ಮ ಮೇಲಿದೆ'

ಜಯರಾಂ

ಪ್ರ: ಮೈಸೂರಿನ ಕಾರ್ಮಿಕ ಚಳುವಳಿಯ ಇತಿಹಾಸ ಕುರಿತು?


ಜಯರಾಂ: ಮೈಸೂರಿನ ಕಾರ್ಮಿಕ ಚಳುವಳಿಯ ಇತಿಹಾಸವನ್ನು ಜ್ಞಾಪಿಸಿಕೊಳ್ಳುವಾಗ ತಕ್ಷಣ ಕಣ್ಮುಂದೆ ಬರುವವರು ಸಂಗಾತಿ ಉಗ್ರಪ್ಪ. ಈ ಭಾಗದಲ್ಲಿ ದಮನಿತರ ಪರವಾಗಿ ದಶಕಗಳ ಕಾಲ ಜೀವ ಸವೆಸಿದ ಸಂ. ಉಗ್ರಪ್ಪನವರು ಮೈಸೂರಿನ ಪೌರ ಕಾರ್ಮಿಕರು, ಬೀಡಿ ಕಟ್ಟುವವರು, ಅರಮನೆ ನೌಕರರು, ರೇಷ್ಮೆ ಕಾರ್ಖಾನೆಯ ಕಾರ್ಮಿಕರು ಸಂಘಟಿತರಾಗಿ ಕೆಂಬಾವುಟದ ಅಡಿಯಲ್ಲಿ ಅಣಿನೆರೆಯಲು ಕಾರಣೀಕರ್ತರಾದರು. ನಮಗೆ ನೆನಪಿರುವ ಹಾಗೆ ಮೈಸೂರಿನ ಪೌರ ಕಾರ್ಮಿಕರು ಸಾಲಪ್ಪ ವರದಿಯ ಜಾರಿಗೆ ಆಗ್ರಹಿಸಿ ನಡೆಸಿದ ಹೋರಾಟ ಅವಿಸ್ಮರಣೀಯವಾದುದು. ಮಾಜಿ ಅರಮನೆ ನೌಕರರ ಸಂಘಕ್ಕೆ ಅಂದಿನ ಮಹಾರಾಜರು ನಾನ್ನೂರು ಎಕರೆ ಭೂಮಿಯನ್ನು ನೀಡಿದ್ದರು. ನಿವೇಶನಗಳಿಗಾಗಿ ನೀಡಿದ್ದ ಈ ಭೂಮಿಯನ್ನು ಸಂಘವು ಅಂದಿನ ಮೈಸೂರು ನಗರ ಸುಧಾರಣೆ ವಿಶ್ವಸ್ತ ಮಂಡಳಿಗೆ ಕೇವಲ 1 ರೂ.ಗೆ ಬರೆದುಕೊಟ್ಟು ಬಡಾವಣೆಯಾಗಿ ನಿರ್ಮಿಸಿ, ಮೂಲೆ ನಿವೇಶನಗಳನ್ನು ಹರಾಜು ಮೂಲಕ ಹಂಚುವ ಅಧಿಕಾರ ನೀಡಿ ಒಪ್ಪಂದ ಮಾಡಿಕೊಂಡಿತು. ಕೆಲ ರಾಜಕಾರಣಿಗಳು, ಶ್ರೀಮಂತರು ಯಾವ ಕಾರಣಕ್ಕೂ ಇಷ್ಟು ಬೆಲೆ ಬಾಳುವ ಭೂಮಿ ಕಾರ್ಮಿಕರಿಗೆ ಸಿಗಬಾರದೆಂದು ಸಂಚು ಮಾಡಿ ಲಲಿತ್‌ಮಹಲ್ ಪಕ್ಕದಲ್ಲಿ ಕೊಳಗೇರಿ ನಿರ್ಮಾಣವಾಗುತ್ತಿದೆ ಎಂದು ನೆಪಹೇಳಿ ತಪ್ಪಿಸಲು ಯತ್ನಿಸಿದರು. ಈ ಶಕ್ತಿಗಳ ವಿರುದ್ಧ ಹೋರಾಟ ಮಾಡಿ ಅರಮನೆ ಮಾಜಿ ನೌಕರರು ನಿವೇಶನಗಳನ್ನು ಪಡೆದುಕೊಂಡರು. ಹೋರಾಟದ ನಾಯಕತ್ವವನ್ನು ಅಂದು ಸಂ. ಉಗ್ರಪ್ಪ, ತಿಮ್ಮೇಗೌಡ, ಕುಂಜುಮೆನ್, ಪುಟ್ಟಯ್ಯ ವಹಿಸಿದ್ದರು. ಮಾಲೀಕರ ಶೋಷಣೆ ವಿರುದ್ಧ ದಾಸ್‌ಪ್ರಕಾಶ್ ಹೋಟೆಲ್ ಕಾರ್ಮಿಕರು ನಡೆಸಿದ ಹೋರಾಟವೂ ಮಹತ್ವದ್ದಾಗಿದೆ. ಸಂ. ಮೋಹನ್‌ಕುಮಾರ್ ಈ ಹೋರಾಟದ ನಾಯಕತ್ವ ವಹಿಸಿದ್ದರು. ಸುದೀರ್ಘ ಹೋರಾಟಕ್ಕೆ ಮಾಲೀಕರು ಮಣಿಯಲೇ ಬೇಕಾಯಿತು.

1979ರಲ್ಲಿ ವಿಕ್ರಾಂತ್ ಟೈರ್ಸ್ ಸ್ಥಾಪನೆಯಾದ ನಂತರ ಸಿಐಟಿಯುಗೆ ಕೈಗಾರಿಕಾ ಕಾರ್ಮಿಕರು ದೊಡ್ಡಸಂಖ್ಯೆಯಲ್ಲಿ ಸೇರ್ಪಡೆಯಾದರು.

ಪ್ರಶ್ನೆ : ವಿಕ್ರಾಂತ್ ಕಾರ್ಖಾನೆ ಕಾರ್ಮಿಕರ ಹೋರಾಟದ ಯಾಕೆ ನಡೆಯಿತು?

ಜಯರಾಂ: ವಿಕ್ರಾಂತ ಕಾರ್ಖಾನೆಯ

ವಿಕ್ರಾಂತ್ ಕಾರ್ಮಿಕರ ಹೋರಾಟ - ಕಾಂ. ಸೂರಿ, ಜಯರಾಂ ಮತ್ತಿತರರು



ಕಾರ್ಮಿಕರು ಹಲವಾರು ಧೀರೋದಾತ್ತ ಹೋರಾಟಗಳನ್ನು ಮಾಡುವ ಮೂಲಕ ತಮ್ಮ ವರ್ಗ ಪ್ರಜ್ಞೆಯನ್ನು ಕಾಲಕಾಲಕ್ಕೆ ಸಾದಪಡಿಸಿದ್ದಾರೆ. ರಜೆ ಘೋಷಣೆಯಾದ 1981 ಮೇ 1 ರಂದು ಕೆಲಸ ಮಾಡಬೇಕೆಂದು ಒತ್ತಾಯಿಸಿದ ಆಡಳಿತ ವರ್ಗದ ವಿರುದ್ಧ ಕೆಲಸವನ್ನು ಬಹಿಷ್ಕರಿಸುವ ಮೂಲಕ ಹೋರಾಟದ ಮೊದಲ ಪಾಠವನ್ನು ತಿಳಿಸಿದರು. ಮೇ ದಿನಾಚರಣೆಯ ಮೆರವಣಿಗೆಯಲ್ಲಿ ಭಾಗವಹಿಸಿದರು. ಆನಂತರದ್ದು ಇತಿಹಾಸ. ಕಾರ್ಖಾನೆಯನ್ನು ದಕ್ಷತೆಯಿಂದ ನಡೆಸಬೇಕೆಂದು ಕಾರ್ಮಿಕರೇ ಹೋರಾಟಕ್ಕಿಳಿದ ಸಂದರ್ಭಗಳೂ ಇವೆ. 1996ರಲ್ಲಿ ದುಡಿಯುವ ಬಂಡವಾಳದ ಕೊರತೆಯಿಂದ ಷೇರುಗಳನ್ನು ಜೆ.ಕೆ.ಟೈರ್ಸ್‌ನ ಸಿಂಘಾನಿಯಾಗೆ ಮಾರುವ ಮೂಲಕ ಖಾಸಗಿ ಪಾಲುದಾರಿಕೆಗೆ ಅವಕಾಶ ನೀಡಲಾಯಿತು. ಇದನ್ನು ವಿರೋಧಿಸಿ ಕಾರ್ಮಿಕರು ಒಂದು ದಿನದ ಮುಷ್ಕರ ಹೂಡಿದರು. ಖಾಸಗಿ ಮಾಲೀಕರ ದೌರ್ಜನ್ಯ, ಕೆಲಸ ಕಡಿತ ವಿರೋಧಿಸಿ ಜನವರಿ 20, 2001 ರಂದು ಅನಿರ್ದಿಷ್ಟ ಮುಷ್ಕರಕ್ಕೆ ಕರೆ ನೀಡಲಾಯಿತು. ಮೈಸೂರಿನ ಎಲ್ಲರ ಮನೆ, ಮನವನ್ನು ಮುಟ್ಟಿದ ಹೋರಾಟಕ್ಕೆ ಇಡೀ ನಗರ ಸ್ವಯಂ ಪ್ರೇರಿತ ಬಂದ್ ಆಚರಿಸುವ ಮೂಲಕ ಬೆಂಬಲಿಸಿತು. ಭಯಬೀತವಾದ ಆಡಳಿತ ವರ್ಗ ತಲೆಬಾಗಲೇ ಬೇಕಾಯಿತು. ಉನ್ನತ ತಂತ್ರಜ್ಞಾನದ ರೇಡಿಯಲ್ ಟೈರ್‌ನ ಉತ್ಪಾದನೆ ಮೊತ್ತಮೊದಲು ಪ್ರಾರಂಭವಾಗಿದ್ದು, ಕಾರ್ಖಾನೆ ಸಾರ್ವಜನಿಕ ರಂಗದಲ್ಲಿ ದ್ದಾಗ, ಈಗ ಕೋಲ್ ಇಂಡಿಯಾ, ಬಿಇಎಂಎಲ್ ಜೊತೆ ಒಪ್ಪಂದವಾಗಿ ಭಾರಿ ಗಾತ್ರದ ಒಟಿಆರ್ ಟೈರ್‌ಗಳನ್ನು ಉತ್ಪಾದಿಸಲಾಗುತ್ತಿದೆ. ವಿಕ್ರಾಂತ್ ಕಾರ್ಮಿಕರು ತಮ್ಮ ಸಂಘಕ್ಕೆ ಒಂದು ಸ್ವಂತ ಕಛೇರಿಯನ್ನು ಹೊಂದಿದ್ದಾರೆ.

ಪ್ರ: ಮೈಸೂರಿನ ಕೈಗಾರಿಕಾ ಸ್ಥಿತಿಗತಿ ಏನು?

ಜಯರಾಂ: ಮೈಸೂರಿನಲ್ಲಿ ಹಲವಾರು ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಗಳು ಇವೆ. ಬೆಮೆಲ್ ಇದೆ. ಹಳೆಯ ಜಾವಾ, ಸುಜಾತಾ ಟೆಕ್ಸ್‌ಟೈಲ್ಸ್ ಮುಚ್ಚಿವೆ. ಮಹೀಂದ್ರಾ ಮೋಟರ್ಸ್ ಕರ್ನಾಟಕ ಬಾಲ್ ಬೇರಿಂಗ್‌ಗಳು ಆಡಳಿತವರ್ಗದ ಅಸಮರ್ಥತೆಯಿಂದ, ಕೌಟುಂಬಿಕ ವಾಜ್ಯ ಗಳಿಂದ



ಮುಚ್ಚಿಹೋಗಿವೆ. ವಿಕ್ರಾಂತ್ ಕಾರ್ಮಿಕ ಸಂಘ
ಸ್ಥಾಪನೆಯ ನಂತರವಷ್ಟೇ ಸಣ್ಣ ಕೈಗಾರಿಕೆಗಳ
ಜಾಗ್ರತೆ ಮೂಡಿ ಸಂಘಗಳು ರಚನೆಯಾಗಿ
ಇಂದಿಗೂ ಹತ್ತು ಗಂಟೆಗಳ ದುಡಿಮೆ ಇ
ಇಎಸ್‌ಐ, ಸೌಲಭ್ಯ ಭವಿಷ್ಯನಿಧಿ ಇಲ್ಲ. ಇದೊಂ
ಸವಾಲು, ನವ-ಉದಾರೀಕರಣದ ಪರಿಣಾಮವ
ಹಲವಾರು ಸಣ್ಣ ಕೈಗಾರಿಕೆ ಗಳು ಸಂಕಷ್ಟದಲ್ಲಿವೆ

**ಪ್ರ: ನಂಜನಗೂಡಿನಲ್ಲಿ ಕಾರ್ಮಿಕರ ಶೋಷ
ಹಾಗೂ ಸಿಐಟಿಯು ಹೋರಾಟಗಳ ಬ
ಏನನ್ನಿಸುತ್ತದೆ?**

ಜಯರಾಂ: ನಂಜನಗೂಡಿನಲ್ಲಿ ಕೈಗಾರಿಕೆಗ
ತೀವ್ರ ರೀತಿಯಲ್ಲಿ ಬರುತ್ತಿವೆ. ಬಹುತೇಕವು ಬೃಹ
ಹಾಗೂ ಮಧ್ಯಮ ಕೈಗಾರಿಕೆಗಳು. ಅಲ್ಲಿನ ಬಹುತ
ಕಾರ್ಖಾನೆಗಳಲ್ಲಿ ಸಿಐಟಿಯು ಸಂಘಟನೆ ಅಸ್ತಿತ್ವಕ
ಬಂದಿದೆ. ಬಹುತೇಕ ಕಾರ್ಮಿಕರು ಗ್ರಾಮಿ
ಪ್ರದೇಶದಿಂದ ಬಂದವರಾಗಿದ್ದಾರೆ. ಜ
ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯ
ಹೊಂದಿದ್ದಾರೆ. ಅಲ್ಲಿ ನಿರುದ್ಯೋಗದ ಪ್ರಮಾ
ಮಿತಿಮೀರಿದ್ದು, ಅತಿ ಕಡಿಮೆ ಕೂಲಿಗೂ ದುಡಿಯ
ಸಿದ್ಧರಾಗಿದ್ದಾರೆ. ಕಾರ್ಮಿಕರ ಈ ಸಹ
ಸಂದರ್ಭವನ್ನು ಮಾಲೀಕ ವರ್ಗ ಮತ್ತು
ರಾಜಕೀಯ ಪಕ್ಷಗಳು ಬಳಸುತ್ತಿರುವುದು ಉಂಟ
ಈ ಎಲ್ಲವನ್ನೂ ಮೀರಿದ ವರ್ಗಪ್ರಜ್ಞೆಯನ್ನು ನೀಡ
ಮಹತ್ತರ ಜವಾಬ್ದಾರಿ ಸಿಐಟಿಯು ಸಂಘಟನೆಗಿ
ಹಲವಾರು ಹೋರಾಟಗಳನ್ನು ಸಂಘಟಿಸಿ ಕನಿ
ಸೌಲಭ್ಯಗಳನ್ನು ದೊರಕಿಸಿಕೊಡಲು ಸಾಧ್ಯವಾಗಿ
ಎಲ್ಲ ಸಂಘಗಳನ್ನು ಪ್ರಜಾಪ್ರಭುತ್ವ ರೀತಿಯ
ನಡೆಸುವ ಪ್ರಾಮಾಣಿಕ ಪ್ರಯತ್ನಗಳಾಗುತ್ತಿವೆ.

**ಪ್ರ: ಅಸಂಘಟಿತ ಕ್ಷೇತ್ರದ ಕಾರ್ಮಿಕರ
ಸಂಘಟಿಸುವ ಪ್ರಯತ್ನಗಳೇನು?**

ಜಯರಾಂ: ಕಾರ್ಖಾನೆ ಕಾರ್ಮಿಕರ ಹೊರತ
ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸ
ಪ್ರಯತ್ನಗಳು ಸಾಲದು. ಅಗರಬತ್ತಿ, ಕಟ್ಟ
ಕಾರ್ಮಿಕರು, ಬೀಡಿ ಕಟ್ಟುವವರು, ಸಾ
ಕ್ಷೇತ್ರದಲ್ಲಿರುವವರು ಕಾರ್ಮಿಕ ಸಂಘ
ಪರಿಧಿಯಿಂದ ಹೊರಗುಳಿದಿದ್ದಾರೆ. ಜಿಲ್ಲ
ಬಹುತೇಕ ಕಾರ್ಖಾನೆಗಳಲ್ಲಿ ಗುತ್ತಿಗೆ ಕಾರ್ಮಿಕ
ಸಹಸ್ರಾರು ಸಂಖ್ಯೆಯಲ್ಲಿ ದುಡಿಯುತ್ತಿದ್ದಾ
ಇವರೆಲ್ಲರನ್ನೂ ಸಂಘಟಿಸುವ ತುರ್ತು ಅವಶ್ಯ
ಇದೆ.

ಪ್ರ: ಮೈಸೂರಿನ ಕೈಗಾರಿಕೆಗಳ ಮೇಲೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳ ಬಗ್ಗೆ ಹೇಳ್ತಿರಾ?

ಜಯರಾಂ: ಜಾಗತಿಕ ಆರ್ಥಿ
ಬಿಕ್ಕಟ್ಟಿನಿಂದಾಗಿ ಮೈಸೂರು ಜಿಲ್ಲೆಯ ಕೈಗಾರಿಕೆ
ಪೈಕಿ ಆಟೋಮೊಟಿವ್ ಆಕ್ಸಲ್ ತೀ
ಪರಿಣಾಮವನ್ನು ಎದುರಿಸುತ್ತಿ
ನಂಜನಗೂಡಿನ ರಫ್ತು ಆಧಾರಿತ ಉದ್ದಿಮೆಗ
ಉತ್ಪಾದನೆ ಗಣನೀಯವಾಗಿ ಕುಸಿದಿದೆ.
ಅಂಡ್ ಎಸ್ ಕೂಡ ಸಂಕಷ್ಟದಲ್ಲಿದೆ.

ಸಂದರ್ಶಕರು

■ ಎನ್.ವಿಜಯಕುಮಾ

ಸಂಪಾದಕೀಯ

ಅಪಾರ ಮಳೆ ಹಾನಿ:
ಕೈಕಟ್ಟಿ ಕುಂತ ಸರ್ಕಾರ

ಹುಚ್ಚು ಹೊಳೆಯಾಗಿ ಸುರಿದ ವಿಪರೀತ ಮಳೆಯಿಂದಾಗಿ ಇಡೀ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ನಡು ನೀರಿನಲ್ಲಿ ನಿಂತಿದೆ. ಜನರ ಜೀವಜೀವನ, ಜಾನುವಾರು ಆಸ್ತಿಪಾಸ್ತಿ ಮುಳುಗೇಳುತ್ತಿದೆ. ಮಳೆಯ ನೀರ ರಭಸಕ್ಕೆ ಎಲ್ಲವೂ ಕೊಚ್ಚಿಯೇ ಹೋಗುತ್ತಿರುವುದು ಅತ್ಯಂತ ದುರಂತದ ಸನ್ನಿವೇಶವೇ ಆಗಿದೆ. ಇಲ್ಲಿಯವರೆಗೆ ಮಳೆಯ ರೌದ್ರ ನರ್ತನಕ್ಕೆ ಬಲಿಯಾದವರಲ್ಲಿ ಲೆಕ್ಕಕ್ಕೆ ಸಿಕ್ಕವರು 81. ಅಲ್ಲದೆ ರಕ್ಷಣಾ ಕಾರ್ಯದಲ್ಲಿದ್ದ 10 ಜನ ನೀರಿನಲ್ಲಿ ಮುಳುಗಿದ್ದಾರೆ. ಇದ್ದಬದ್ದ ಬೆಳೆ ಪೂರ್ಣ ಹಾನಿಯಾಗಿದೆ. ಆಹಾರದ ವಸ್ತುಗಳು ಕೊಚ್ಚಿಹೋಗಿ, ಒಲೆ ಹಚ್ಚಲೂ ಆಗದೇ ಆಹಾರ, ನೀರು ಸಿಗದ ಸ್ಥಿತಿಯಿದೆ. ಅಲ್ಲಲ್ಲಾ ಕಂದಮ್ಮಗಳು ಆಕ್ರಂದಿಸುತ್ತಿರುವುದು ವರದಿಯಾಗಿದೆ. ಜನರ ಪರಿಸ್ಥಿತಿಯೂ ಇದಕ್ಕಿಂತ ಹೊರತಲ್ಲ. ರಸ್ತೆಗಳು, ಹಾಳಾಗಿ ನೀರಿನಲ್ಲಿ ಮುಳುಗಿ ಸಂಪರ್ಕವೂ ಸಾಧ್ಯವಾಗದ ಸ್ಥಿತಿಯೂ ಇದೆ. ಆಗಿರುವ ನಷ್ಟದ ಅಂದಾಜು ಮಾಡುವವರೇ ಇಲ್ಲವಾಗಿದೆಯೆಂದರೂ ನೂರಾರು ಕೋಟಿ ರೂಪಾಯಿಗಳ ಹಾನಿ ತಗುಲಿರುವುದಂತೂ ಸ್ಪಷ್ಟ. ಇದು ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ರಾಯಚೂರು, ಗುಲಬರ್ಗಾ, ವಿಜಾಪುರ, ಗದಗ, ಳಗಾವಿಗಳಲ್ಲಿ ಅಧಿಕ

ಮಳೆಯಿಲ್ಲದೆ ಬರದ ಬಾಧೆಯಲ್ಲಿದ್ದ ಜನ, ಇಂತಹ ಮಳೆಯಿಂದಲೂ ಅಪಾರ ಹಾನಿಗೀಡಾಗಿ ತತ್ತರಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ತುರ್ತಾಗಿ ಜನರನ್ನು ರಕ್ಷಿಸುವಂತಹ ಕ್ರಮ ತೀವ್ರಗೊಳಿಸಬೇಕು. ಆಹಾರ, ನೀರು ಒದಗಿಸುವದಲ್ಲದೇ ಉಡುಪು, ಹೊದಿಕೆಯಂತಹ ವ್ಯವಸ್ಥೆಗೂ ಮುಂದಾಗಬೇಕು. ಮನೆ ಕಳೆದುಕೊಂಡವರು ಬೀದಿಯ ಮೇಲೆ ನಿಂತಿದ್ದು ವಸತಿ ವ್ಯವಸ್ಥೆ ಆಗಬೇಕು. ಅಲ್ಲಿ ಗಂಜಿಕೇಂದ್ರ ಆರಂಭವಾಗಬೇಕು.

ಆದರೀಗ ಅಲ್ಪಸ್ವಲ್ಪ ಪರಿಹಾರದ ಕೆಲಸಗಳು ಆರಂಭವಾಗಿವೆ ಎಂದರೂ ಹಾನಿಯ ಪ್ರಮಾಣಕ್ಕೆ ಹೋಲಿಸಿದರೆ ಅತ್ಯಲ್ಪವಾಗಿದೆ. ಪ್ರಕೃತಿ ವಿಕೋಪದ ಈ ಸ್ಥಿತಿಗಳನ್ನು ಎದುರಿಸುವಲ್ಲಿ ಸರ್ಕಾರದ ಆಡಳಿತ ವಹಿಸಬೇಕಾಗಿದ್ದ ಎಚ್ಚರ, ಮುಂಜಾಗರೂಕತ ಕ್ರಮಗಳ ಕೊರತೆಯೂ ಎದ್ದುಕಾಣುತ್ತಿದೆ. ದುರಂತವೆಂದರೆ ಈ ಸನ್ನಿವೇಶವನ್ನು ಎದುರಿಸಲು ಪೂರ್ಣ ಪ್ರಮಾಣದಲ್ಲಿ ತೊಡಗಿ ಕಾರ್ಯ ಪರಿಶೀಲಿಸುತ್ತಾ ಅಗತ್ಯ ನೆರವು, ಮಾರ್ಗದರ್ಶನ ನೀಡಿ ಆಡಳಿತ ಹಾಗೂ ಸರ್ಕಾರ ಮತ್ತು ಜನರ ನಡುವೆ ಸಂಯೋಜನೆ ಮಾಡಬೇಕಾಗಿದ್ದ ರಾಜ್ಯದ ಮುಖ್ಯಮಂತ್ರಿ, ಎಲ್ಲಾ ಸಚಿವರು ಮೈಸೂರಿನಲ್ಲಿ ಸಂಘ ಪರಿವಾರದ ಬೈಠಕ್‌ನಲ್ಲಿಯೇ ತಲ್ಲೀನರಾಗಿ ಮೈಮರೆತಿದ್ದರು. ಪ್ರಕೃತಿ ವಿಕೋಪದ ಅಬ್ಬರವೂ ಜನರ ಆಕ್ರಂದನವೂ ಅವರನ್ನು ಕದಲಿಸಲಿಲ್ಲವೆಂದರೆ ಅದು ಅತ್ಯಂತ ಅಮಾನವೀಯ ಕ್ರೌರ್ಯವಾಗಿದೆ. ಊರಿಗೆ ಊರೇ ಬೆಂಕಿಯಲ್ಲಿ ಬೇಯುತ್ತಿರುವಾಗ ಪಿಟೀಲು ಕುಯ್ಯುತ್ತಿದ್ದ ನೀರೋ ಪ್ರಭುವಿನಂತೆ ನಮ್ಮ ರಾಜ್ಯದ ಬಿಜೆಪಿ ಮುಖ್ಯಮಂತ್ರಿ ಯಡಿಯೂರಪ್ಪ ಜನವಿರೋಧಿಯಾಗಿ ವರ್ತಿಸಿದ್ದಾರೆ. ಹೀಗೆ ಹೊಣೆಗೇಡಿತನದಿಂದ ವರ್ತಿಸಿರುವ ಇಡೀ ಸಚಿವ ಸಂಪುಟ, ಸರ್ಕಾರದ್ದು ಖಂಡನೀಯ ಮಾತ್ರವಲ್ಲ ದಂಡನೀಯ ಅಪರಾದವೂ ಆಗಿದೆ.


ಈಗ ಸಂಭವಿಸಿರುವ ಹಾನಿಯ ಅಂದಾಜು ನಡೆಯುವಾಗಲೇ ಬರೀ ತಂಡಗಳ ವೀಕ್ಷಣೆಯ ಪ್ರದರ್ಶನಗಳನ್ನು ಬಿಟ್ಟು ಪರಿಹಾರದ ಕಾರ್ಯಕ್ಕೆ ದುಮುಕಬೇಕು. ಕೇಂದ್ರದ ನೆರವು ಸಿಗಬೇಕು. ಇದಕ್ಕಾಗಿ ಮನವಿ ಸಲ್ಲಿಸಿ ಕಾಯದೇ ಕೂಡಲೇ ತನ್ನ ಸಂಪನ್ಮೂಲ ಕ್ರೋಡೀಕರಿಸಿ ರಾಜ್ಯ ಸರ್ಕಾರ ಕಾರ್ಯ ತತ್ಪರವಾಗಬೇಕು. ಪರಿಹಾರವೆಂಬುದು ಎಷ್ಟೋ ಸಣ್ಣ ಪಾಲಿರುತ್ತದೆ. ಅದರ ಬದಲು ಪೂರ್ಣ ಹಾನಿ ಭರಿಸುವ ನಿಟ್ಟಿನಲ್ಲಿ ಕಾರ್ಯನೀತಿ ರೂಪಿಸಬೇಕು. ಸಚಿವರು, ಉನ್ನತ ಅಧಿಕಾರಿಗಳೂ ಹಾಗೂ ಸ್ಥಳೀಯ ಆಡಳಿತ ಇದರ ಉಸ್ತುವಾರಿ ವಹಿಸಬೇಕು. ಬಹುತೇಕ ಮನೆ ಕಳೆದುಕೊಂಡವರು ಅತ್ಯಂತ ಕಡುಬಡವರು. ಮಣ್ಣಿನ ಮನೆವಾಸಿಗಳು, ಇಲ್ಲವೇ ಗುಡಿಸಲು ನಿವಾಸಿಗಳು. ವಸತಿ ಬಗ್ಗೆ ಬೊಗಳೆ ಭಾಷಣ ಮಾಡುವ ಬದಲು ವಾಸ್ತವದಲ್ಲಿ ಅವರ ನೆರವಿಗೆ ಬರಬೇಕು. ಯೋಜನೆ, ನೀತಿಗಳು ಈ ದಿಶೆಯಲ್ಲಿ ಪುನರ್ ರೂಪಿತವಾಗಬೇಕು.

ಇದು ಎಲ್ಲರೂ ಕಾರ್ಯವೆಸಗಬೇಕಾದ ಕಾಲ. ಹಾನಿಗೀಡಾದವರಿಗೆ ನೆರವಿನ ಹಸ್ತ ಚಾಚಬೇಕಾದ ಸಂದರ್ಭ. ಆದರೆ ಎಲ್ಲವನ್ನೂ ನಿರ್ವಹಿಸಿ, ನಿಭಾಯಿಸಬೇಕಾದ ಸರ್ಕಾರ ಗರಬಡಿದಂತೆ ಅಲ್ಪವೇ ಮಿಸುಕಾಡುತ್ತಿರುವುದೇ ಅದರ ರಾಜಕೀಯ ಇಚ್ಛಾಶಕ್ತಿಹೀನತೆಯ ದ್ಯೋತಕ. ಕೆಲಸ ಮಾಡಿದಂತೆ ನಟಿಸುತ್ತಾ ಕಾಲಹರಣ ಮಾಡುವವರನ್ನು ಬಡಿದೆಬ್ಬಿಸಬೇಕಾದ್ದು ಜನತೆಯೇ.



ಕೃಪೆ: ಪ್ರಜಾವಾಣಿ

ಸಂಘ ಪರಿವಾರದ 'ಹಿಂಬಾಗಿಲ' ಕಸರತ್ತು



'ನನಗೆ ಯಾರು ಬೇಕಾದರೂ ಸಲಹೆ ಸೂಚನೆಗಳನ್ನು ನೀಡಬಹುದು. ಅವುಗಳನ್ನು ಪರಿಗಣಿಸಿ ಆಡಳಿತ ನಡೆಸುತ್ತೇನೆ' ಎಂದು ಮುಖ್ಯಮಂತ್ರಿ ಯಡಿಯೂರಪ್ಪನವರು ಸುತ್ತೂರು ಮಠದಲ್ಲಿ ಪ್ರಾತಃ ಕಾಲದ ಪ್ರಸಾದ ಸ್ವೀಕರಿಸಿದ ನಂತರ ಹೇಳಿದ್ದಾರೆ. ಆದರೆ ಸಚಿವ ಸ್ಥಾನದ ವ್ಯಸನಿಯಾಗಿರುವ ಶಾಸಕ ಸಿಟಿ ರವಿ 'ಈ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸಿರುವ ವಿರೋಧ ಪಕ್ಷಗಳನ್ನು, ನಾಯಕರನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು' ಎಂದು ಖಾರಿಕೊಂಡಿದ್ದಾನೆ. ಆತನ ಸದ್ದು ಇರುವುದು ಸಂಘ ಪರಿವಾರದ ತರಬೇತಿಯನ್ನು ವಿರೋಧಿಸಿರುವುದಕ್ಕೆ. ಇಂತಹ ಉಗ್ರ ವಿರೋಧದಿಂದ ಚೆಡ್ಡಿ ಕೇಂದ್ರ ಸಂತುಷ್ಟಗೊಂಡು ಏನನ್ನಾದರೂ ದಯಪಾಲಿಸಬಹುದೆಂಬ ಆಶೆ ಈತನಿಗೆ! ಒಂದರ್ಥದಲ್ಲಿ ಈ ಸರ್ಕಾರದ ಮೇಲೆ ಸಂಘಕ್ಕೆ ಇರುವ ಹಿಡಿತದ ಸೂಚನೆಯೂ ಇದು ಹೌದು. ಮಹಾ ಪ್ರಜಾಪ್ರಭುತ್ವವಾದಿಯಂತೆ ಮಾತನಾಡಿದ್ದ ಸಿ.ಎಂ. ತನ್ನ ಶಿಷ್ಯರು ಮಾಡಿದ ವಿರೋಧಪಕ್ಷಗಳ ಬಗೆಗಿನ ಉದ್ಧಟತನದ ಮಾತುಗಳಿಗೆ ಆ ಕಾರದ ಆಕ್ಷೇಪವೇ ಇಲ್ಲದಿರುವುದು ಅವರ ಆತ್ಮಘಾತುಕತೆ ಹಾಗೂ ವಂಚನೆಯ ನಿದರ್ಶನವಷ್ಟೆ.

ಎಂತಹ ಪಾಠಗಳು ?

ಈಗಲೂ ಅಲ್ಲಿ ಅದೇ ಆಗಿದೆ. ದಕ್ಷ ಆಡಳಿತ ನಡೆಸಲು ಕರ್ನಾಟಕದ ಸಚಿವರಿಗೆ ತರಬೇತಿ ನೀಡಲೆಂದು ಮೈಸೂರಿನ ಸುತ್ತೂರು ಮಠದಲ್ಲಿ ಏರ್ಪಡಿಸಿದ್ದ ಸಹಚಿಂತನ ಶಿಬಿರದ್ದೂ ಅದೇ ವಂಚನೆ. ಸರ್ಕಾರಕ್ಕೂ ಮತ್ತು ಸಾರ್ವಜನಿಕರಿಗೂ ಯಾವುದೇ ಬಾಧ್ಯತೆಯಾಗಲಿ, ನೈತಿಕ ಸಂಬಂಧವೂ ಇಲ್ಲದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಾಯಕರಿಂದ, ನರಹಂತಕ, ಫ್ಯಾಸಿಸ್ಟ್ ವೈರಸ್ ಎಂದೇ ಕುಖ್ಯಾತಿಯಾಗಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯಂತಹವರಿಂದ ಮೂರು ದಿನಗಳ ಪಾಠದ ಏರ್ಪಾಡು ರಾಜ್ಯದ ಇತಿಹಾಸದಲ್ಲಿಯೇ ಒಂದು ಕರಾಳ ಅಧ್ಯಾಯವಾಗಿದೆ. ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವದ ಸಂವಿಧಾನಾತ್ಮಕ ಮೂಲಭೂತ ತತ್ವಗಳಿಗೆ ಬದ್ಧವಾಗಿಯೇ ಇರಬೇಕಾದ ಸರ್ಕಾರದ ಇಡೀ ಸಚಿವರು ಜಾತಿಯೊಂದರ ಮಠದಲ್ಲಿ ಸಕಲ ಸೌಲಭ್ಯ ಪಡೆದು ತಿಂದುಂಡು ಮಲಗಿದ್ದು, ಎಷ್ಟು ಸರಿ? ರಾಜ್ಯದಲ್ಲಿ ಇಂತಹ ಕೆಲವು ಮಹಾಮಠಾಧೀಶರು ಹಲವಾರು ವಿವಾದಗಳಿಗೆ ಒಳಗಾದವರಿದ್ದಾರೆ. ಕಾನೂನು ಮೀರಿದ ಕೆಲವು ಕೃತ್ಯಗಳಿಂದ (ಭೂಕಬಳಿಕೆ ಇತ್ಯಾದಿ) ದಂಡನೀಯ ಕ್ರಮಗಳಿಗೆ ಅರ್ಹರೂ ಆಗಿರುವ ಹಲವು ನಿದರ್ಶನಗಳು ನಮ್ಮೆದುರು ಇವೆ. ಅಂತಹವರ ಮೇಲೆ ಕಾನೂನಿಗೆ ಬದ್ಧ ಆಡಳಿತ ಕೈಗೊಳ್ಳಬೇಕಾದ ಸರ್ಕಾರವೇ ಅಂತಹ ಮಠಾಧೀಶರಿಗೆ 'ಶರಣು ಶರಣಾರ್ಥ' ಹಾಕಿ 'ಶಿವಲಿಂಗ ತೃಪ್ತಿ' ಪಡಿಸಿದರೆ ಉಳಿಯುವುದಾದರೂ ಏನು? ಆಡಳಿತ ಯಂತ್ರದ ಚಕ್ರ ಒಂದು ಸುತ್ತಾದರೂ ಉರುಳೀತೇ? ಮೇಲಾಗಿ ಅಧಿಕಾರಸ್ಥರು ಮತ್ತು ಕೆಲವು ಮಠಾಧೀಶರ ನಡುವಿನ ನಂಟು 'ಭಕ್ತಿ'ಯ ಗಡಿಯಾಚೆ ಸಂಪನ್ಮೂಲಗಳ ವಿನಿಮಯ, ರಕ್ಷಣೆವರೆಗೂ ಹೋಗಿರುವುದರ ಬಗ್ಗೆ ಪ್ರಜ್ಞಾವಂತ ಮಠಾಧೀಶರು ಟೀಕಿಸಿದ್ದಾರೆ. ಇದು ಒಂದೆಡೆಯಾದರೆ ಆರ್.ಎಸ್.ಎಸ್. ನಿಂದ ಸಚಿವರು ಕಲಿತದ್ದಾದರೂ ಏನು? ಚುನಾಯಿತ ಸರ್ಕಾರದ ಸಚಿವರಿಗೆ ಪಾಠ ಹೇಳಲು ಈ ಸಂಘಕ್ಕೆ ಇರುವ ಅಧಿಕಾರವಾದರೂ ಏನು?

ಯಡ್ಡಿಯ ಚೆಡ್ಡಿ ನಿಷ್ಠೆ!

'ವಾಜಪೇಯಿಯಂತೆ ನಾನೂ ಸಂಘದ ಸೇವಕ' ಎಂದು ಯಡಿಯೂರಪ್ಪ ಸಮಜಾಯಿಷಿ ನೀಡಿದ್ದಾರೆ. ಆದರೆ ಈ 'ಸಂಘ ನಿಷ್ಠೆ'ಯನ್ನು ಅವರ ವೈಯಕ್ತಿಕ ಎಂದು ಹೇಳಲೂ ಸಾಧ್ಯವಿಲ್ಲ. ಯಾಕೆಂದರೆ ಈ ಸಂಘಕ್ಕೆ ಮೂಲಭೂತವಾಗಿ ಪ್ರಜಾಪ್ರಭುತ್ವ ದಲ್ಲಾಗಲಿ, ಸಂವಿಧಾನದ ಮೇಲಾಗಲೀ ಎಳ್ಳುಕಾಳಿನಷ್ಟು ವಿಶ್ವಾಸವಿಲ್ಲ, ಬದಲಾಗಿ ಅತ್ಯಂತ ಉಗ್ರ ದ್ವೇಷವೇ ಇದೆ. ಬಿಜೆಪಿ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾಗಿ ಚಾತುರ್ವರ್ಣ್ಯದ ಅಮಾನವೀಯ 'ಮನುಸ್ಮೃತಿ'ಯನ್ನು ಸಂವಿಧಾನವನ್ನಾಗಿಸಲು ಹಲವು ಹುನ್ನಾರಗಳನ್ನೇ ನಡೆಸಿದ್ದು ಯಾರೂ ಮರೆತಿಲ್ಲ. ಇಡೀ ಅದರ ಜೀವಿತಾವಧಿಯುದ್ದಕ್ಕೂ ಅಂತಹುದೇ ಬುಡಮೇಲು ಕೃತ್ಯಗಳನ್ನೆಸಗುತ್ತಲೇ ಬಂದಿದೆ. ಆಧುನಿಕ ಪ್ರಜಾಸತ್ತಾತ್ಮಕ ಭಾರತಕ್ಕೆ ಎದುರಾಗಿ ಹಿಟ್ಲರ್ ಪ್ರಣೀತ 'ಹಿಂದುತ್ವ'ದ ಕೋಮುವಾದಿ ಫ್ಯಾಸಿಸ್ಟ್ ಮಾದರಿಯನ್ನು ಮುಖಾಮುಖಿ ಯಾಗಿಸಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳಲಿಲ್ಲ ಮಾತ್ರವಲ್ಲ, ಬ್ರಿಟಿಶರ ಒಡೆದಾಳುವ ನೀತಿಯನ್ನು ಜಾರಿಗೆ ತರಲು ಅಹೋರಾತ್ರ ಕೆಲಸ ಮಾಡಿದೆ. ಧರ್ಮ ಹೆಸರಲ್ಲಿ ದ್ವೇಷದ ವಿಭಜನೆ ಹುಟ್ಟುಹಾಕುತ್ತಲೇ ಬಂದಿದೆ. ದೇಶದಲ್ಲಿ ನಡೆದ ಬಹುತೇಕ ಕೋಮುಗಲಭೆಗಳಲ್ಲಿ ಈ ಸಂಘದ ಕೈವಾಡ, ಪ್ರಚೋದನೆ ಇರುವುದನ್ನು ಹಲವಾರು ವಿಚಾರಣಾ ಆಯೋಗಗಳು ಬಯಲಿಗಿಟ್ಟಿವೆ. ಮಹಾತ್ಮ ಗಾಂಧಿಯವರನ್ನು ಹತ್ಯೆಗೈದ ಕುಖ್ಯಾತಿಯ ಕಾರಣದಿಂದ ಸಂಘವು ನಿಷೇಧಕ್ಕೂ ಒಳಗಾಗಿತ್ತು. ಆಗ ತಾನೊಂದು

ಪುಟ 14 ಕ್ಕೆ

ಅಮೆರಿಕದೊಂದಿಗೆ ಅಣು ಒಪ್ಪಂದವೆಂದರೆ ಅದು ಸುಮ್ಮನೆ ಏನಲ್ಲ. ಅದರ ಬೆನ್ನ ಹಿಂದೆ ಭಾರತದ ಕೃಷಿಯನ್ನೇ ಕಬಳಿಸಿ ಬಹುರಾಷ್ಟ್ರೀಯ ಕಂಪನಿಗಳ ಕೈಗಿಡುವ ಹುನ್ನಾರಗಳಿವೆ. ಸಾಕ್ಷಿ ಬೇಕಾ? ದೇಶದ ಕೃಷಿ ರಂಗದಲ್ಲಿ ಏನಾಗುತ್ತಿದೆ?.... ಈ ಬರಹ ಓದಿ...

ರೈತರ ಕೊಳ್ಳೆ ಹೊಡೆಯುವ 'ಕೃಷಿ ವ್ಯಾಪಾರ'

ಕೇಂದ್ರ ಸರ್ಕಾರ "ಎರಡನೆ ಹಸಿರು ಕ್ರಾಂತಿ"ಯ ಬಗ್ಗೆ ಬೊಬ್ಬೆ ಹೊಡೆಯುತ್ತಿದೆ. ಈ ಬೊಬ್ಬೆಯ ಹಿಂದೆ "ಭಾರತ-ಅಮೇರಿಕ ಕೃಷಿ ಜ್ಞಾನ ಮುತುವರ್ಜಿಗಳು"(ಎಕೆಐ) ಎಂಬ ಕಡಿವಾಣವಿಲ್ಲದ ಹುನ್ನಾರ ಅಸ್ತಿತ್ವಕ್ಕೆ ಬಂದಿದೆ. ಮೊನ್ಸಾಂಟೊ ಎಂಬ ಕಂಪನಿಯೂ ಇದರ ಮಂಡಳಿಯಲ್ಲಿದೆ. ಹೊಸ ಬೀಜ ನೀತಿಯ ಹೆಸರಿನಲ್ಲಿ 1988 ರಲ್ಲಿ ದೇಶದೊಳಕ್ಕೆ ಅಡಿಯಿರಿಸಿದ ಈ ಕಂಪನಿಗಳು ವಿಲೀನ ಮತ್ತು ವಶೀಕರಣಗಳ ಮೂಲಕ ಬಾರತದ ಬಹುತೇಕ ಬೀಜ ಕಂಪನಿಗಳನ್ನು ನುಂಗಿ ಹಾಕಿವೆ. ಈ ಕಂಪನಿಗಳು ತನ್ಮೂಲಕ ಏಕಸ್ವಾಮ್ಯತೆ ಸಾಧಿಸಿವೆ. ಇಂದಿನ ನೀತಿಗಳು ಬೀಜ ಮತ್ತು ಕೃಷಿ ರಾಸಾಯನಿಕಗಳ ಕ್ಷೇತ್ರದಲ್ಲಿ ಶೇ.100 ರಷ್ಟು ವಿದೇಶೀ ನೇರ ಹೂಡಿಕೆಗೆ ಅವಕಾಶ ನೀಡುತ್ತವೆ. ಭಾರತದ ರೈತ ಈ ಕಂಪನಿಗಳ ನೇರ ಹಿಡಿತಕ್ಕೆ ಸಿಲುಕುವಂತೆ ಇದು ಮಾಡಿದೆ.

ಹಿಂದೆ ಭಾರತದ ಬುದ್ಧಿವಂತ ರೈತ ಮತ್ತು ಸರ್ಕಾರಿ ವಲಯದ ಬೀಜ ಕಂಪನಿಗಳ ಹಿಡಿತದಲ್ಲಿದ್ದ ಬೀಜ ಪೂರೈಕೆ ಈಗ ಮೊನ್ಸಾಂಟೊದಂತಹ ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಜಾರಿದೆ. ಈ ಕಂಪನಿಗಳಿಗೆ ಅಪಾರ ಪ್ರಮಾಣದ ರಾಯಲ್ಟಿ ಹಣ ಸಂದಾಯವಾಗುತ್ತಲಿದೆ. ಬೆಳೆಯ ಇಳುವರಿಯ ಪ್ರಮಾಣ ಮತ್ತು ಗುಣಮಟ್ಟವನ್ನು ನಿರ್ಧರಿಸುವ ಬೀಜಗಳು ಈಗ ಈ ಬಹುರಾಷ್ಟ್ರಿಯ ಕಂಪನಿಗಳ 'ಭೌದ್ಧಿಕ ಆಸ್ತಿಗಳು'. ಬೀಜೋತ್ಪಾದನಾ ಕ್ಷೇತ್ರದಿಂದ ಸರ್ಕಾರ ಹಿಂದೆ ಸರಿದಿರುವುದರಿಂದ ಈ ಗುತ್ತೆದಾರಿತನ ಬೆಳೆದು ಬಂದಿದೆ. ಕೆಳಗಿನ ಆರು ಬಹುರಾಷ್ಟ್ರೀಯ ಕಂಪನಿಗಳು ಈ ಕ್ಷೇತ್ರಕ್ಕೆ ಲಗ್ಗೆ ಇಟ್ಟಿವೆ: ಮೊನ್ಸಾಂಟೊ, ಡು ಪಾಂಟ, ಮಿಟ್ಸುಯಿ, ಸಿಂಜಂಟಾ, ಎವಂಟಿಸ್ ಮತ್ತು ಢೌ. ಈ ಕಂಪನಿಗಳು ವಿಶ್ವ ಬೀಜ ಮಾರುಕಟ್ಟೆಯ ಶೇ. 98 ರಷ್ಟನ್ನು ಆಕ್ರಮಿಸಿಕೊಂಡಿವೆ.

ಜಿಎಮ್ ಬೆಳೆಗಳ (ಪರಿವರ್ತಿತ ವಂಶವಾಹಿನಿ ಬೆಳೆಗಳು) ಬಗೆಗೆ ಮುಗಿಯದ ಚರ್ಚೆ/ ವಿವಾದ ನಡೆಯುತ್ತಲೆ ಇದೆ. ಯುರೋಪಿನ ಒಕ್ಕೂಟ ಅಮೇರಿಕದ ಈ ಬೆಳೆಗಳಿಗೆ ತಮ್ಮಲ್ಲಿ ಜಾಗವಿಲ್ಲೆಂದು ಒದ್ದೋಡಿಸಿವೆ. ಭಾರತದ ರೈತರು ಬಿಟಿ ಹತ್ತಿ ಬೆಳೆಯುವ ಅನಿವಾರ್ಯತೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ. ಮೊನ್ಸಾಂಟೊ ತನ್ನ ವಿತರಕರ ಮೂಲಕ ಬೀಜಗಳ ಬೆಲೆಗಳನ್ನು ವಿಪರೀತ ಏರಿಸಿ ಹಣ ಬಾಚಿಕೊಳ್ಳುತ್ತಿದೆ. ವಂಶವಾಹಿ ತಂತ್ರಜ್ಞಾನ ಅನುಮೊದನಾ ಸಮಿತಿ ಅದಕ್ಕೆ ಅನುಮೊದನೆ ನೀಡಿದ ಮೇಲೆ ವಿಪರೀತ ಬೆಲೆ ಏರಿಸಿ ಬೀಜವನ್ನು ಮಾರಾಟ ಮಾಡಿತು. ಆಂಧ್ರ ಪ್ರದೇಶದ "ರೈತು ಸಂಘಮ್" ನೀಡಿದ ದೂರಿನ ಮೇಲೆ ಆಂಧ್ರ ಸರ್ಕಾರ ಗುತ್ತೆದಾರಿ ಮತ್ತು ವ್ಯಾಪಾರ ಕಮಿಷನ್ನಿಗೆ ದೂರು ನೀಡಿತು. ಕಮಿಷನ್ನು ಇಂತಹ ವ್ಯಾಪಾರ ಸರಿಯಲ್ಲವೆಂದು ತೀರ್ಮಾನ ನೀಡಿತು. ಆದರೂ ಮೊನ್ಸಾಂಟೊ ತನ್ನ ಚಾಳಿಯನ್ನು ಬಿಟ್ಟಿಲ್ಲ. ಬೀಜದ ದರ ಮತ್ತು ರಾಯಲ್ಟಿ ಗಗನದಲ್ಲೆ ಇವೆ.

ಈಗಿನ ನಿಯಮಗಳಂತೆ ತಂತ್ರಜ್ಞಾನ ವರ್ಗಾವಣೆಯ ಮೊತ್ತ ಇಪ್ಪತ್ತು ಲಕ್ಷ ಅಮೇರಿಕನ್ ಡಾಲರ್ ಮೀರಿದರೆ ಅಥವಾ ಆಂತರಿಕ ಮಾರಾಟದ ಮೇಲಿನ ಶೇ 5 ರಷ್ಟನ್ನು ಮೀರಿದರೆ ಅಥವಾ ರಫ್ತು ಮಾರಾಟದ ಮೇಲಿನ ಶೇ 8 ರಷ್ಟನ್ನು ಮೀರಿದರೆ ಕಡ್ಡಾಯವಾಗಿ ಅನುಮೋದನೆ ಬೇಕು. ಇಂತಹ ಅನುಮೋದನೆಯ ಅವಶ್ಯಕತೆಯನ್ನೆ ತಗೆದು ವಿದೆಶೀ ನೇರ ಹೂಡಿಕೆಯನ್ನು ಮುಕ್ತಗೊಳಿಸುವ ವಿಚಾರ ಕೇಂದ್ರದ ವಾಣಿಜ್ಯ ಮಂತ್ರಾಲಯದ ಮುಂದಿದೆಯಂತೆ. ಗುತ್ತೆದಾರಿಕೆ ತಡೆಯುವ ಕಮಿಷನ್ನಿನ ಅಧಿಕಾರ ಮೊಟಕುಗೊಳಿಸಿರುವ ಹಿನ್ನಲೆಯಲ್ಲಿ ಈಗಿರುವ ಪ್ರತಿಬಂಧಗಳು ಅತ್ಯಾವಶ್ಯಕವೆನಿಸಿವೆ.

ಭಾರತ ಸರ್ಕಾರ ಮತ್ತು ಪೇಟೆಂಟ್ ವಿನ್ಯಾಸ ಮತ್ತು ವ್ಯಾಪಾರ ಚಿನ್ಹೆಗಳ ಕಂಟ್ರೋಲರ್ ಜನರಲ್ ಅವರನ್ನು ಈ ಗುತ್ತೆದಾರಿ ಆಚರಣೆಗಳನ್ನು ನಿಯಂತ್ರಿಸುವಂತೆ ಆಗ್ರಹಿಸುತ್ತದೆ. ಬೆಲೆ, ರಾಯಲ್ಟಿಗಳ ಮೇಲೆ ಮಿತಿಗಳನ್ನು ವಿಧಿಸಬೇಕು. ರೈತರಿಗೆ ಬೀಜಗಳು ಕೈಗೆಟಕುವ ಸಹನೀಯ ಬೆಲೆಗಳಲ್ಲಿ ಲಭ್ಯವಾಗಬೇಕು. ಕೃಷಿ-ಬಯೊ ತಂತ್ರಜ್ಞಾನ ಹತೋಟಿ ಪ್ರಾಧಿಕಾರ ಸ್ಥಾಪಿಸಬೇಕು. ಇದಲ್ಲದೆ ಕೃಷಿ ಮಂತ್ರಾಲಯ ರೈತ ಮತ್ತು ವಿಜ್ಞಾನ ಸಮುದಾಯ ಸಸ್ಯ ಸಂಪನ್ಮೂಲ ಅಭಿವೃದ್ಧಿಪಡಿಸುವಂತೆ ಪ್ರೋತ್ಸಾಹ ನೀಡಬೇಕೆಂದು ಒತ್ತಾಯಿಸುತ್ತದೆ.

ನಾಳಿನ ಕಾರ್ಯಕ್ರಮಗಳ

- **ಅಕ್ಟೋಬರ್ 9, 2009** ಚಿತ್ರ ಸಮು ಉದ್ಘಾಟನೆ.ನಯನ ಸಭಾ ಬೆಂಗಳೂರು.
- **ಅಕ್ಟೋಬರ್ 7-11,** ಆಟೋ ರಿ ಬಣ್ಣ ಬದಲಾವಣೆ ನಿರ್ಧಾರ ವಾ ಮತ್ತಿತರ ಬೇಡಿಕೆಗಳಿಗಾಗಿ ಒತ ಆಟೋ ರಿಕ್ಷಾ ಚಾಲಕರ ಸಂಘ ಉಪವಾಸ ಮುಷ್ಕರ ಬೆಂಗಳೂರು
- **ಅಕ್ಟೋಬರ್ 11,** ಸಮುದಾಯದಿಂದ ರಾಜ್ಯವ ವಿಚಾರಸಂಕಿರಣ. ಹಸಿವು Vs ಯುವನಿಕ, ಬೆಂಗಳೂರು
- **ಅಕ್ಟೋಬರ್ 12** ಬೆಂಗಳೂರಿನಲ್ಲಿ ಮುಷ್ಕರ
- **ಅಕ್ಟೋಬರ್ 15,2009** ರೊಳಗೆ ನಾ ಸೌಲಭ್ಯಗಳ ಕೊರತೆ ವಿರುದ್ಧ 'ನಾ ರಂಗ' ದಿಂದ ಬೆಂಗಳೂರು ಮಹಾ ಪಾಲಿಕೆ ವ್ಯಾಪ್ತಿಯ 8 ವಲಯ ಪ್ರತಿಭಟನೆ
- **ಅಕ್ಟೋಬರ್ 15,2009** ಅಸಂಘ ಬೇಡಿಕೆಗಳಿಗಾಗಿ ಜಿಲ್ಲೆಗಳಲ್ಲಿ ಹೋರ
- **ಅಕ್ಟೋಬರ್ 21, 2009** ಬೆಲೆ ವಿರುದ್ಧ ಕಾರ್ಮಿಕರ ಹಕ್ಕುಗಳಿಗಾಗಿ ಕಾ ಸಂಘಟನೆಗಳ ಜಂಟಿಸಮಿತಿ (JCTU ರಾಜ್ಯ ಸಮಾವೇಶ, ಬೆಂಗಳೂರು.
- **ಅಕ್ಟೋಬರ್ 26,2009** ಬೆಲೆ ಆಹಾರದ ಪ್ರಶ್ನೆಗಳ ಆಧಾರದಲ್ಲಿ ಎಡ ರಾಜ್ಯಮಟ್ಟದ ಸಮಾವೇಶ, ಬೆಂಗಳ

ಜ್ಞಾನೋದಯ ಪ್ರಶ್ನೆ ಮಾಲಿಕೆ

ಕ್ಯಾತೆ

● ಶ್ರೀ

ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಶ್ರೀ ಯಡಿಯೂರಪ್ಪನವರಿಗೆ ಚೀನಾದಲ್ಲಿ ಜ್ಞಾನೋದಯ ಆಯಿತಂತೆ! ವಿರೋಧ ಪಕ್ಷದವರು ವ್ಯಂಗ್ಯವಾಗಿ ಹೇಳಿದ್ದನ್ನು ಸನ್ಮಾನ್ಯ ಮು.ಮಂ.ಗಳು ಸೀರಿಯಸ್ಸಾಗೇ ತೆಗೆದುಕೊಂಡು 'ಹೌದು ಜ್ಞಾನೋದಯ ವಾಗಿದೆ' ಎಂದು ಹೇಳಿ ಕೊಂಡು ತಿರುಗಾಡುತ್ತಿದ್ದಾರೆ. ಜ್ಞಾನೋದಯದ ಬಿಸಿ ಇನ್ನೂ ಆರಿಲ್ಲವಾದ ಕಾರಣ ಇದು ದಿನೇ ದಿನೇ ಅನೇಕ ಪ್ರಶ್ನೆಗಳಿಗೆ ಕಾರಣವಾಗಿದೆ.

ಮೊದಲನೆಯದಾಗಿ ಯಡಿಯೂರಪ್ಪನವರೊಂದಿಗೆ ಅವರ ಸಂಸಾರ ಪರಿವಾರವೆಲ್ಲಾ ಹೋಗಿದ್ದರೂ ಇವರೊಬ್ಬರಿಬ್ಬರಿಗೇ ಜ್ಞಾನೋದಯವಾಗಿದ್ದು ಹೇಗೆ? ಚೀನಾದಲ್ಲಿ ಜ್ಞಾನೋದಯವಾಗಿದೆ ಅಂತ ಹೇಳುತ್ತಿದ್ದಾರೆ. ಆದರೆ ಚೀನಾದಲ್ಲಿ ಇವರಿಗೆ ಜ್ಞಾನೋದಯವಾದ ನಿರ್ದಿಷ್ಟ ಸ್ಥಳವಾದರೂ ಯಾವುದು? ಯಾವುದಾದರೂ ಮರದ ಕೆಳಗೋ? ಶಾಪಿಂಗ್ ಕಾಂಪ್ಲೆಕ್ಸ್ ಒಳಗೋ? ಹೋಟೆಲ್ ಒಳಗೋ? ಬಾತ್ ರೂಂ ಶವರ್ ಕೆಳಗೋ? ಸನ್ಮಾನ್ಯ ಮು.ಮಂ.ಗಳಿಗೆ ಜ್ಞಾನೋದಯವಾದ ಸ್ಥಳದಲ್ಲಿ ಅವರ ಪ್ರತಿಮೆಯನ್ನೇನಾದರೂ ಸ್ಥಾಪಿಸುವ ಯೋಚನೆಯೇನಾದರೂ ಇದೆಯೇ? ಅದರ ಸ್ಮರಣಾರ್ಥ ಇಲ್ಲೇ ವಿಧಾನ ಸೌಧದ ಎದುರು ಪ್ರತಿಮೆ ಸ್ಥಾಪಿಸುವ ಉದ್ದೇಶವಿದೆಯೇ?

ಚೀನಾದಲ್ಲಿ ಜನಸಂಖ್ಯೆ ನಿಯಂತ್ರಿಸಲಾಗುತ್ತಿದೆ ಎಂದು ನಾವುಗಳು ಪ್ರಾಥಮಿಕ ಶಾಲೆಯಲ್ಲಿಯೇ ಓದಿದ ನೆನಪು. ಅಂಥ ವಿಚಾರ ಈಗ ಅದೂ ಚೀನಾಕ್ಕೆ ಹೋದಮೇಲೆ ನಮ್ಮ ಮು.ಮಂ.ಗಳಿಗೆ ಈಗ ಹೊಳೆದುದಕ್ಕೆ 'ಜ್ಞಾನೋದಯವಾಗಿದೆ' ಎನ್ನಬಹುದೇ? ಚೀನಾದಲ್ಲಿ ಇನ್ನೂ ಅನೇಕಾನೇಕ ಉತ್ತಮ ಸುಗತಿಗಳು ಇರುವಾಗ ಜನಸಂಖ್ಯೆಯ ವಿಷಯವೊಂದಕ್ಕೇ ಸೀಮಿತ 'ಜ್ಞಾನೋದಯ'ವಾದದ್ದು ಏಕೆ? ಚೀನಾ ಜ್ಞಾನೋದಯದ ಹೆಸರಲ್ಲಿ ಅಲ್ಪಸಂಖ್ಯಾತರ ಮೇಲೆ ಜನಸಂಖ್ಯೆ ನಿಯಂತ್ರಣ ಹೇರುವ ವಾಸನೆ ಏಕೆ ಬರುತ್ತಿದೆಯಲ್ಲಾ ಏನಿದು? ಎರಡಕ್ಕಿಂತ ಹೆಚ್ಚು ಮಕ್ಕಳಿರುವವರಿಗೆ ಸರ್ಕಾರಿ ಸೌಲಭ್ಯಗಳಿಲ್ಲ ಎಂಬ ಕಾನೂನನ್ನು ಪ್ರತಿಪಕ್ಷಗಳು ಒಪ್ಪಿದರೆ ಒಂದೇ ದಿನದಲ್ಲಿ ತರುತ್ತೇನೆ ಎಂದು ವೀರಾವೇಶದಿಂದ ಹೇಳಿದ್ದಾರೆ ಮುಖ್ಯಮಂತ್ರಿ. ಸರ್ಕಾರಿ ಸೌಲಭ್ಯಗಳು ಎಂದರೆ ಬಡಬಗ್ಗರಿಗೆ ಕೊಡುವ ಸಕ್ಕರೆ, ಸೀಮೆ ಎಣ್ಣೆ, ಅಕ್ಕಿ, ಗೋಧಿಗಳು ಮಾತ್ರವೇ?

ಮುಖ್ಯಮಂತ್ರಿ ಪದವಿ, ಲೋಕಸಭಾ ಸದಸ್ಯ ಸ್ಥಾನ ಮುಂತಾದುವು ಬರುವುದಿಲ್ಲವೇ? ಹಾಗೇನಾದರೂ ಇದಕ್ಕೂ ಅನ್ವಯವಾದರೆ ಎರಡರ ಎರಡಷ್ಟಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ತಮಗೂ ಅನ್ವಯವಾಗುವುದೇ? ಹಾಗೇನಾದರೂ ಅನ್ವಯವಾದರೆ ತಾವು ಹಾಗೂ ತಮ್ಮ ಪುತ್ರ- ಇವರಲ್ಲಿ ಸ್ಥಾನ ಮಾನ ಕಳೆದುಕೊಳ್ಳುವವರು ಯಾರು? ಅಥವಾ ಇಬ್ಬರೂ? ಹಾಗೆಯೇ ವಿರೋಧ ಪಕ್ಷಗಳು ಒಪ್ಪಿದರೆ ಎಂದು ಸಡ್ಡು ಹೊಡೆದದ್ದೇಕೆ? ಎಲ್ಲ ಮಸೂದೆ, ಕೆಲಸಗಳು ಕಾನೂನುಗಳನ್ನು ವಿರೋಧ ಪಕ್ಷ ಒಪ್ಪಿದರೆ ಮಾತ್ರ ಮಾಡಿದ್ದೀರಾ ಅಥವಾ ಮಾಡುತ್ತೀ

ಬಂಡವಾಳ ತರಲು ಹೋದವ ಜ್ಞಾನೋದಯ ಮಾಡಿಕೊಂಡು ಬಂ ಬಂಡವಾಳದ ಗತಿಯೇನು? ಎಷ್ಟು ಬಂಡವ ತಂದಿರಿ ಎಂಬುದರ ಬಗ್ಗೆ ಸುದ್ದಿಯೇ ಇಲ್ಲವ ಹೀಗೆ ತಾವು ಹೋದಲ ಜ್ಞಾನೋದಯವಾಗುತ್ತಿದ್ದರೆ ಗತಿಯೇನ ಜ್ಞಾನೋದಯಾರ್ಥವಾಗಿಯೇ ತಾವು ವಿದೇಶ ಸಂಸಾರ ಪರಿವಾರ ಸಮೇತ ಪ್ರವಾಸ ಹೊರ ರಾಜ್ಯದ ಗತಿಯೇನು? ಎಲ್ಲಕ್ಕಿಂತ ಮು ಪ್ರಶ್ನೆಯೊಂದಿದೆ. ಸನ್ಮಾನ್ಯ ಮು.ಮಂ. ಯಡಿಯೂರಪ್ಪನವರಿಗೆ. ಅಸಲಿಗೆ ನಿಜ 'ಜ್ಞಾನೋದಯ' ವಾಗಿದೆಯೇ? ಏಕೆಂದರೆ ಅ ನಡೆ ನುಡಿಗಳಲ್ಲಿ ಜ್ಞಾನದ ಯಾವ ಲಕ್ಷಣಗಳ ಸುಳುಹುಗಳು ಕೊಂಚವಾದರೂ ಕಾಣುತ್ತಿ ನಮ್ಮದೇಶದ, ರಾಜ್ಯದ ಸಮಸ್ಯೆಗಳಿಗೆಲ್ಲಾ ಕಾರಣ ಅಂತ ಮತ್ತೆ ಜನರನ್ನೇ ದೂಷಿಸ ಜನಸಂಖ್ಯೆ ಹೆಚ್ಚಳವೇ ಕಾರಣ ಅ ಕಂಡುಕೊಂಡರಲ್ಲ ಇದೇ 'ಜ್ಞಾನೋದಯ' ಹೇಗೆ?

ರ ಲೋಕಸಭಾ ಚುನಾವಣೆಗಳಲ್ಲಿ ನೀರೀಕ್ಷೆಗೂ
ಸೋಲನುಭವಿಸಿದ ಕಾಂಗ್ರೆಸ್ ಪಕ್ಷ ತದನಂತರ
ರ ಎಲ್ಲಾ ಉಪಚುನಾವಣೆಗಳಲ್ಲಿ ಸ್ವತಃ
ಲುತ್ತಲೆ ಇದೆ. ಕರ್ನಾಟಕದಲ್ಲಿ ಕಾಂಗ್ರೆಸ್ಸಿನ
ಲಿಗೆ ಬಹುತೇಕ ಕಾಂಗ್ರೇಸ್ಸಿಗರೇ ಕಾರಣವೇ
ತು ಬೇರೇ ಯಾರು ಅಲ್ಲಾ. ಕಾಂಗ್ರೆಸ್ಸಿನ
ತ್ಯಾ ರಾಜಕಾರಣ 2008 ರಲ್ಲಿ ನಡೆದ
ನಸಭಾ ಚುಣಾವಣೆಯಿಂದಲೇ
ಭವಾಯ್ತು. ಅವರೊಳಗಿನ ಗುಂಪುಗಾರಿಕೆ
ಗಳ ಮತ್ತು ಕಾಲೆಳಿಯುವ ರಾಜಕಾರಣವೆ
ನ್ನು ಸತತವಾಗಿ ಸೋಲಿಸುತ್ತಿವೆ. ಕಳೆದ
ನಸಭಾ ಚುನಾವಣೆಯಲ್ಲಿ ಅವರ ಆತ್ಮಹತ್ಯಾ
ಕಾರಣದಿಂದಾಗಿಯೇ ಕನಿಷ್ಟ 20 ರಿಂದ 30
ಳಲ್ಲಿ ಸೋತರು. ಅದರ ನಂತರ ನಡೆದ ಎಲ್ಲಾ
ವಣೆಗಳಲ್ಲಿ ಸತತವಾಗಿ ಸೋಲುತ್ತಲೆ
ವುದರಿಂದ ಕಾಂಗ್ರೆಸ್ಸಿಗೆ ಚೇತರಿಸಿಕೊಳ್ಳಲು
ಲೇ ಆಗುತ್ತಿಲ್ಲಾ. ಕಾಂಗ್ರೆಸ್‌ಗೆ ಒಂದು ರಾಷ್ಟ್ರೀಯ
ಕೀಯ ಪಕ್ಷವಾಗಿ ಹೇಗೆ ನಡೆದುಕೊಳ್ಳಬೇಕೆಂಬ
ತಿಳುವಳಿಕೆಯೂ ಇಲ್ಲ ಶೋಚನೀಯ ಸ್ಥಿತಿ
ರ್ಣವಾಗಿದೆ.

ರು 'ನೇತಾ'?

ಂದು ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ
ಕರಾರು? ಇದೊಂದು ದೊಡ್ಡ ಪ್ರಶ್ನೆಯಾಗಿ
ು ಬಂದಿದೆ. ಅಧ್ಯಕ್ಷರೇ? ಕಾರ್ಯಾಧ್ಯಕ್ಷರೇ?
ಸ್ಸಿನ ಶಾಸಕಾಂಗ ಪಕ್ಷದ ಮುಖಂಡರೆ?
ಲ್ಲಿ ಯಾರ ಮಾತನ್ನು ಯಾರು ಕೇಳುತ್ತಾರೆ?
ಪ್ರಶ್ನೆಗಳು ಅವರನ್ನೇ ಕಾಡುತ್ತಿವೆ. ಇಲ್ಲಿನ
ಸ್ಸಿಗೆ ಶಕ್ತಿ ತುಂಬಲು ಅವರ ಕೇಂದ್ರ ನಾಯಕತ್ವ
ಲೋಕಸಭಾ ಚುಣಾವಣೆಯ ನಂತರ
ತೆಯಿಲ್ಲದಿದ್ದರೂ 4 ಜನರಿಗೆ ಕೇಂದ್ರದಲ್ಲಿ
ಸ್ಥಾನಗಳನ್ನು ಕೊಟ್ಟರು. ಇದಾದ ನಂತರ ನಡೆದ
ಚುಣಾವಣೆಯಲ್ಲಿ ಕೇಂದ್ರ ಮಂತ್ರಿಗಳ ಮಗನೆ
ಲುವುದರ ಮುಖಾಂತರ ಕಾಂಗ್ರೆಸ್ಸಿಗೆ ತೀವ್ರ
ಮುಗರ ಉಂಟಾಯಿತು. ಮುಖಭಂಗ
ನವಿಸಿದಂತಾಯ್ತು. ಇದಾದ ನಂತರ ನಡೆದ
ನಸಭಾ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಪಾತ್ರವು
ಾಮುಕಾರಿ ಇರಲಿಲ್ಲ. ಇದರೆಲ್ಲರ
ಾಮದಿಂದಾಗಿ ಕೆಂಗಟ್ಟ ಕಾಂಗ್ರೆಸ್ ಪಕ್ಷ ತನ್ನ
ುಮಾನಕ್ಕೆ ಒಗ್ಗದ ಹೋರಾಟದ ಬಗ್ಗೆ
ನಾಡತೊಡಗಿದೆ ಮತ್ತು 26-9-09 ಕ್ಕೆ
ನಸೌಧದ ದಿಗ್ಬಂದನ ಹಾಕಲು ತೀರ್ಮಾನಿಸಿತು.

ಕೆ ಹೋರಾಟ?

6-09-2009 ದಿಗ್ಬಂಧನದಕ್ಕೆ ಕಾಂಗ್ರೆಸ್ ಎತ್ತಿದ
ಳೇನು? ರಾಜ್ಯದ ಜನರ ಮುಂದಿಟ್ಟ ಸಮಸ್ಯೆ
ವುದು? ಕಾಂಗ್ರೆಸ್‌ಗೆ ಸ್ಪಷ್ಟತೆ ಇದೆಯಾ?
ಗಳಲ್ಲಿ ಸಾಕಷ್ಟು ಪ್ರಚಾರ ಗಿಟ್ಟಿಸಲಾಯಿತು.
ದ ಜನತೆ ಬಹಳ ಕುತೂಹಲದಿಂದ
9-2009 ನ್ನು ನೋಡಿದರು. ಆದರೆ ಆ ದಿವಸ
ಸ್ ಮಾಡಿದ ಹೋರಾಟವನ್ನು ಕಾಂಗ್ರೆಸ್
ಕರು, ಕಾರ್ಯಕರ್ತರ ಬಂಧನದ ಪರಿಸ್ಥಿತಿ
ಅದಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆಗಳು ನೋಡಿ


ಮುಖ್ಯವಿರೋಧ ಪಕ್ಷ ಕಾಂಗ್ರೆಸ್ ತನ್ನ ಪ್ರತಿಭಟನೆ ಯಾಕೆ ಎಂಬುದನ್ನೇ ಜನರಿಗೆ ವಿವರಿಸಿ ಹೇಳಲಿಲ್ಲ! ಸ್ವತಃ ಕಾಂಗ್ರೆಸ್‌ಗೆ ಅದು ಸ್ಪಷ್ಟವಿರಲಿಲ್ಲ. ಹೀಗಿರುವಾಗ ದಾರಿತಪ್ಪಿರುವ ರಾಜ್ಯ ಬಿಜೆಪಿ ಸರ್ಕಾರದ ನೀತಿಯನ್ನು ಅದು ಪ್ರತಿಭಟಿಸುವುದೆಂತು?

ಕಂಗೆಟ್ಟ ಕಾಂಗ್ರೆಸ್ ದಿಕ್ಕೆಟ್ಟ ಬಿಜೆಪಿ

ಜಿ.ವಿ. ಶ್ರೀರಾಮರೆಡ್ಡಿ
ಮಾಜಿ ಶಾಸಕರು

ಜನತೆಗೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲಾ. ವಿಧಾನಸೌದಕ್ಕೆ ದಿಗ್ಬಂದನ ಹಾಕುವುದನ್ನು ಸುಮ್ಮನೇ ನೋಡಿಕೊಂಡು ಯಾವ ಸರ್ಕಾರವು ಕೂತಿರಲಾರದು ಎಂಬ ಸಾಮಾನ್ಯ ಪ್ರಜ್ಞೆ ಇಷ್ಟು ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದ ನಾಯಕರಿಗೆ ಇಲ್ಲವೆಂದರೆ ಅದು ಬಾಲಿಶವಾಗುತ್ತದೆ. ಆ ಬಂಧನಕ್ಕೆ ಕಾಂಗ್ರೆಸ್ ಪ್ರತಿಕ್ರಿಯೆ ಬಹಳ ಮುಖ್ಯವಾಗಿ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರ ಪ್ರತಿ ಕ್ರಿಯೆ ಮತ್ತು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರ ಪ್ರಕ್ರಿಯೆಗಳು ಮಾತ್ರ ನಗೆಪಾಟಲಾಗಿತ್ತು. ರ್‍ಯಾಸ್ಕಲ್‌ಗಳ ಸರ್ಕಾರ ಎಂಬ ಹೇಳಿಕೆ ಸಿದ್ದರಾಮಯ್ಯನವರಿಗೆ ಮತ್ತು ಅವರ ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಶೋಭೆ ತರುವ ವಿಚಾರವಲ್ಲ. ಅದರೆ ಅವಹೇಳನಕಾರಿ ವಿಷಯವೆಂದರೆ ಉಗ್ರಪ್ಪನವರ ಹತಾಶೆಯ ಪರಿಸ್ಥಿತಿ. 'ನೋಡಿ ಸ್ವಾಮಿ ನಮ್ಮನ್ನು ನಾಯಿಗಳ ಹಾಕುವ ಜಾಗದಲ್ಲಿ ಹಾಕಿ ಬಂಧಿಸಿದ್ದಾರೆ ಬೆಳಿಗ್ಗೆಯಿಂದ ನಮ್ಮದು ನಾಯಿಪಾಡಾಗಿದೆ' ಎಂದು ಹೇಳಿದ್ದು ಇವರ ಹೋರಾಟದ ಟೊಳ್ಳುತನ ಮತ್ತು ಇವರ ಹತಾಶಯ ಸ್ಥಿತಿ ತೋರಿಸುತ್ತದೆ.

ಇಷ್ಟಕ್ಕೂ ಯಾವ ಸಮಸ್ಯೆಗಾಗಿ ಇವರು ಹೋರಾಟ ನಡೆಸಿದರು ಎಂಬುದು ರಾಜ್ಯದ ಜನಕ್ಕಂತೂ ತಿಳಿಯಲೇ ಇಲ್ಲಾ. ನನಗೆ ಪರಿಚಯವಿರುವ ಕೆಲವು ಪತ್ರಕರ್ತರನ್ನು ಕೇಳಿದರೆ 'ಸರ್ ಅವರು ಏಕೆ ಹೋರಾಟ ಮಾಡಿದರೆಂದು ನಮಗೆ ಅರ್ಥವಾಗಲಿಲ್ಲ. ನಾವು ಗೊಂದಲಕ್ಕೆ ಸಿಕ್ಕಿದ್ದೀವಿ' ಎಂದರು. ಇನ್ನು ಯಾವುದೇ ಪತ್ರಿಕೆ ಅಥವಾ ಟಿ.ವಿ.ಗಳು ಸಹಾ ಕಾಂಗ್ರೆಸ್ ಪಕ್ಷ ಇಂತಹ ನಿರ್ದಿಷ್ಟ ವಿಷಯಕ್ಕೆ ಹೋರಾಟ ನಡೆಸಿದರೆಂದು ಬರೆಯಲೇ ಇಲ್ಲಾ. ರಾಜ್ಯದಲ್ಲಿ ಜನರನ್ನು ಬಾಧಿಸುವ ಹಲವಾರು ಜ್ವಲಂತ ಸಮಸ್ಯೆಗಳಾದ ಕನಿಷ್ಟ ಕೂಲಿ, ರೇಷನ್ ಕಾರ್ಡ್ ಅವ್ಯವಸ್ಥೆ, ವಿದ್ಯುತ್ ಸಮಸ್ಯೆ, ಅತಿವೃಷ್ಟಿ, ಅನಾವೃಷ್ಟಿ, ಎಷ್ಟೆಲ್ಲಾ ಗಂಭೀರ ಪರಿಸ್ಥಿತಿ ಮತ್ತು ಪ್ರಶ್ನೆಗಳಿವೆ. ಆದರೆ ಇವು ಯಾವುದೇ ಸಮಸ್ಯೆ ಮತ್ತು ಪ್ರಶ್ನೆಗಳು ಕಾಂಗ್ರೆಸ್ಸಿಗೆ ಕಾಣಲಿಲ್ಲ. ರಾಜ್ಯದ ಆರ್ಥಿಕ ಸ್ಥಿತಿ ಗಂಭೀರವಾಗಿದೆ. ಕಳೆದ ವಾರ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಳಕ್ಕೆ ಯಾವುದೋ ಕಾರ್ಯಕ್ರಮಕ್ಕೆ ಬಂದಿದ್ದ ಭಾರತೀಯ ರಿಸರ್ವ ಬ್ಯಾಂಕ್‌ನ ಅಧ್ಯಕ್ಷರು ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಸಮಕ್ಷಮದಲ್ಲೆ ರಾಜ್ಯದ ಆರ್ಥಿಕ ನಿರ್ವಹಣೆ ಸರಿ ಇಲ್ಲವೆಂದು ಹೇಳಿದ್ದಾರೆ. ರಾಜ್ಯದ ಸಾಲದ ಮೊತ್ತ 86 ಸಾವಿರ ಕೋಟಿಗೆ ಹೋಗಿದೆ. 10 ಸಾವಿರ ಕೋಟಿ ಖೋತಾ ಬಡ್ಜಟ್ ಇದೆ. ಸಂಪನ್ಮೂಲಗಳ ಕ್ರೋಢೀಕರಣ ಅರ್ಧದಷ್ಟು



ನಡೆಯುತ್ತಿಲ್ಲಾ. ಇವು ಯಾವುದಾದರು ಒಂದು ನಿರ್ದಿಷ್ಟ ಸಮಸ್ಯೆಯನ್ನು ಕಾಂಗ್ರೆಸ್ ಹೋರಾಟದ ವಸ್ತುವಾಗಲಿಲ್ಲ. ಇದು ಕಾಂಗ್ರೆಸ್ಸಿನ ರಾಜಕೀಯ ಟೊಳ್ಳುತನ ಮತ್ತು ಅದು ತಾತ್ವಿಕವಾಗಿ ಎಷ್ಟು ಪ್ರಪಾತಕ್ಕೆ ಹೋಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಇಂತಹ ಪ್ರಧಾನ ವಿರೋಧ ಪಕ್ಷದವರಿಂದ ರಾಜ್ಯದ ಜನತೆ ಏನನ್ನು ನಿರೀಕ್ಷೀಸಲು ಸಾಧ್ಯ? ಯಾವುದೇ ಜನಪರ ವಿಚಾರಗಳಿಗೆ ಮತ್ತು ಸಮಸ್ಯೆಗಳಿಗೆ ಗಮನ ಕೊಡದೆ ಈಗ ತನ್ನ ಅಸ್ತಿತ್ವವೇ ಹೋಗುತ್ತಿದೆ ಎಂಬ ಕಠೋರ ಸತ್ಯವನ್ನು ಅರಗಿಸಿಕೊಳ್ಳಲಾರದ ಕಾಂಗ್ರೆಸ್ ಪಕ್ಷ ಕೆಂಗಟ್ಟ ಸ್ಥಿತಿಯನ್ನು ತಲುಪಿದೆ.

ಹೊಣೆಗೇಡಿ ಬಿಜೆಪಿ

ಇನ್ನೂ ಆಡಳಿತರೂಢ ಬಿ.ಜೆ.ಪಿ. ಸರ್ಕಾರ ಕಾಂಗ್ರೆಸ್ಸಿನ ಹೋರಾಟಕ್ಕೆ ನೀಡಿದ ಪ್ರತಿಕ್ರಿಯೆ ಹೊಣೆಗೇಡಿತನದ್ದು ಮತ್ತು ಅಪ್ಪಟ ಫ್ಯಾಸಿಸ್ಟ್ ಮನೋಭಾವದ್ದು. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡುವ ಹಕ್ಕು ಪ್ರತಿ ಒಬ್ಬ ವ್ಯಕ್ತಿ ಮತ್ತು ಸಂಘಟಣೆಗಳಿಗೆ ಸಂವಿಧಾನದತ್ತವಾಗಿ ಬಂದಿರುವ ಹಕ್ಕು. ಇದನ್ನು ನಿರಾಕರಿಸುವುದು ಮತ್ತು ದಮನ ಮಾಡುವುದು ಸಂವಿಧಾನ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನಿಲುವಾಗಿದೆ. ಅನವಶ್ಯಕವಾಗಿ ಕಾಂಗ್ರೆಸ್ಸಿನ ಮುಖಂಡರನ್ನು ಬಂಧಿಸಿ ದೊಡ್ಡ ಯುದ್ದದಲ್ಲಿ ಜಯಗಳಿಸಿದ ರೀತಿಯಲ್ಲಿ ಭಾವಿಸುತ್ತದೆ. ಅವರನ್ನು ಬಂಧನ ಮಾಡುವ ಅವಶ್ಯಕತೆ ಇತ್ತಾ? ಅವರಿದ್ದಿದ್ದೆ 350 ರಿಂದ 400 ಜನ. ಯಾಕೆ ಬಂಧಿಸಬೇಕಿತ್ತು. ಕೂತಿದ್ದರೆ ಅಲ್ಲೇ ಧರಣಿ ಕೂರುತ್ತಿದ್ದರು. ಅದಕ್ಕೆ ಸಾವಿರ ಗಟ್ಟಲೆ ಪೋಲಿಸರನ್ನು ಜಮಾಯಿಸಿ ಪ್ರಜಾಪ್ರಭುತ್ವದ ಪವಿತ್ರ ಕೇಂದ್ರವಾದ ವಿಧಾನಸೌಧದ ಸುತ್ತಲು ಪೋಲಿಸರನ್ನು ನಿಲ್ಲಿಸಿ ಪ್ರಜಾಪ್ರಭುತ್ವವನ್ನೇ ಅವಹೇಳನ ಮಾಡಿತು. ಇದನ್ನು ನೋಡಿದರೆ ಬಿ.ಜೆ.ಪಿ. ಸರ್ಕಾರ ತಾನು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಬಗ್ಗೆ ತಾನೆಷ್ಟು ಅಸಹಿಷ್ಣುತೆ ಹೊಂದಿದ್ದೇನೆಂಬುದನ್ನ ಪ್ರದರ್ಶಿಸಿದೆ. ಸೆಪ್ಟೆಂಬರ್ 15 ರಂದು ನಡೆದ ಅಸಂಘಟಿತ ಕಾರ್ಮಿಕರ ಮೇಲೆ ಅದು ನಡೆಸಿದ ದಬ್ಬಾಳಿಕೆ ಮತ್ತು ನಡೆದುಕೊಂಡ ಅನಾಗರೀಕ ರೀತಿಯನ್ನು ನೋಡಿದರೆ ಇದೆಷ್ಟು ಅನಾಗರೀಕ ಸರ್ಕಾರ ಮತ್ತು ಹತಾಶಯ ಸರ್ಕಾರವೆಂಬುದು ತಿಳಿಯುತ್ತದೆ.

ಗೊಂದಲಗಳ ಮೇಳ

ರಾಜ್ಯ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷದಲ್ಲೇ ಜನ ಹಿತದ ದೃಷ್ಟಿಯಿಂದ ತಾನೊಂದು ನಿಷ್ಪ್ರಯೋಜಕ ಸರ್ಕಾರವೆಂದು ತೋರಿಸಿದೆ. ಮತ್ತು ಒಂದು ರಾಜ್ಯ ಸರ್ಕಾರವನ್ನು ಯಾವ ರೀತಿಯಲ್ಲಿ ನಡೆಸಬೇಕೆಂಬ ಕನಿಷ್ಟ ಪ್ರಜ್ಞೆಯು ಇದ್ದಂತಿಲ್ಲಾ. ಯಾವುದೇ ಸಣ್ಣ ಸಮಸ್ಯೆಯನ್ನು ಸಮರ್ಪಕವಾಗಿ ನಿಭಾಯಿಸಲು ಇದಕ್ಕೆ ಸಾಧ್ಯವಾಗುತ್ತಿಲ್ಲ. ಮಂತ್ರಿಗಳ ಮಧ್ಯೆ ಹೊಂದಾಣಿಕೆ ಇಲ್ಲ. ಯಾವ ಮಂತ್ರಿ ಏನು ಹೇಳುತ್ತಾನೆಂದು ತಿಳಿಯದೆ ಒಬ್ಬರ ಹೇಳಿಕೆ ಇನ್ನೊಬ್ಬರ ಹೇಳಿಕೆಗೆ ತದ್ವಿರುದ್ಧವಾಗಿ ಹೊರ ಬೀಳುತ್ತಿರುತ್ತದೆ. ಮುಖ್ಯಮಂತ್ರಿಗಳ ಹೇಳಿಕೆಗೂ ಅವರ ಸಹೂದ್ಯೋಗಿ ಮಂತ್ರಿಗಳ ಹೇಳಿಕೆಗಳಿಗೂ ಸಂಬಂಧವೇ ಇರುವುದಿಲ್ಲ. ಮಂತ್ರಿಗಳು ಸಾಮೂಹಿಕ ಜವಾಬ್ದಾರಿಯನ್ನೇ ಮರೆತು ಮಾತನಾಡುತ್ತಾರೆ. ಮಂತ್ರಿ ಯಾರೋ, ಮುಖ್ಯಮಂತ್ರಿ ಯಾರೋ

ಪುಟ 6 ಕ್ಕೆ

ರಾಷ್ಟ್ರೀಯ ಹೆದ್ದಾರಿ 17 ರ ದುರವಸ್ಥೆಯ ವಿರುದ್ಧ ಹೋರಾಟ



ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಇತರ ರಸ್ತೆಗಳ ಹೆಚ್ಚಿನ ಭಾಗಗಳಲ್ಲಿ ದೊಡ್ಡ ಹೊಂಡಗಳಾಗಿದ್ದು, ವಾಹನಗಳು ಚಲಿಸುವ ಹಾಗೂ ಜನಸಾಮಾನ್ಯರು ಪ್ರಯಾಣ ನಡೆಸುವುದು ಕಷ್ಟವಾಗಿದೆ. ಮಳೆ ನಿಂತಲ್ಲಿ ಧೂಳು, ಆರೋಗಕ್ಕೆ ಹೆಚ್ಚಿನ ಹಾನಿ ಆಗುವ ಸಾಧ್ಯತೆ. ಗರ್ಭಿಣಿ ಮಹಿಳೆಯರು ವಾಹನಗಳಲ್ಲಿ ಕುಳಿತರೆ ಸುಲಭದಲ್ಲಿ ಹೆರಿಗೆ ಆಗುವ ಪರಿಸ್ಥಿತಿ. ರೋಗಿಗಳನ್ನು ವಾಹನಗಳಲ್ಲಿ ಕರೆದುಕೊಂಡು ಹೋಗುವಾಗ ಕಾಯಿಲೆ ಹೆಚ್ಚಾಗುವ ಭೀತಿ.

ಅದಿರು ಲಾರಿಗಳು, ವಿಪರೀತ ಮಳೆ ಸುರಿದುದರಿಂದ, ಸರ್ಕಾರದ ನಿರ್ಲಕ್ಷ್ಯ ಹಾಗೂ ಇಲಾಖೆಯ ಅಧಿಕಾರಿಗಳ ಮೊಂಡತನದಿಂದಾಗಿ ಹೆದ್ದಾರಿಯ ಹೆಚ್ಚಿನ ಭಾಗಗಳು ನಾಶವಾಗಿವೆ. ವಿಪರೀತ ಮಳೆ ಬಂದಾಗ ರಸ್ತೆ ಯಾವುದು ಎಂದು ತಿಳಿಯುವುದು ಕಷ್ಟ. ಹಲವಾರು ಅಪಘಾತಗಳು ನಡೆದು ಕೆಲವರು ಸತ್ತಿರುತ್ತಾರೆ. ಹಲವಾರು ವಾಹನಗಳು ಜಖಂಗೊಂಡಿದೆ. ಈ ಹಿಂದೆ ಯಾವುದೇ ಸಂದರ್ಭದಲ್ಲಿ ಹೀಗಾಗದ ಸ್ಥಿತಿ ಇಂದು ಉಂಟಾಗಿದೆ.

ರಾಷ್ಟ್ರೀಯ ಹೆದ್ದಾರಿ 17ರ ದುರಾವಸ್ಥೆಯ ವಿರುದ್ಧ ಸತತ ಹೋರಾಟ ನಡೆಸುತ್ತಿರುವ 'ರಾಷ್ಟ್ರೀಯ ಹೆದ್ದಾರಿ-17 ಉಳಿಸಿ ಹೋರಾಟ ಸಮಿತಿ'ಯು ತನ್ನ ಹೋರಾಟಕ್ಕೆ ಸೂಕ್ತ ಫಲ ಕಾಣದೆ ಇದೀಗ ನ್ಯಾಯಾಲಯದ ಮೆಟ್ಟಲೇರಲು ನಿರ್ಧರಿಸಿದೆ. ಈ ಸಮಿತಿಯಲ್ಲಿ ಎಲ್ಲಾ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳಿರುತ್ತಾರೆ.

ಕಳೆದೆರಡು ವರ್ಷಗಳಿಂದ ಸಮಿತಿಯು ಹತ್ತಾರು ಬಾರಿ ಮನವಿ ಪತ್ರ ಆಗ್ರಹ, ಧರಣಿಗಳನ್ನು ನಡೆಸಿಯೂ ತಮ್ಮ ಬೇಡಿಕೆಗೆ ಬೆಲೆ ಸಿಗದೇ ಇರುವುದರಿಂದ ಬೇರೆ ದಾರಿ ಇಲ್ಲದೆ ಹೆದ್ದಾರಿ ಇಲಾಖೆಯ ವಿರುದ್ಧ ರಾಜ್ಯ ಹೈಕೋರ್ಟ್‌ನಲ್ಲಿ 'ಸಾರ್ವಜನಿಕ ಹಿತಾಸಕ್ತಿ ದಾವೆ' ಹೂಡುವುದಕ್ಕೆ ಸಿದ್ಧತೆಗಳನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಬೈಂದೂರಿನಿಂದ ಉಪ್ಪುಂದದವರೆಗೆ 6 ಕಿ.ಮೀ. ಮರವಂತೆಯಿಂದ ತ್ರಾಸಿವರೆಗೆ 3 ಕಿ.ಮೀ. ತಲ್ಲೂರಿನಿಂದ ಕುಂದಾಪುರದವರೆಗೆ ಶಾಸ್ತ್ರೀ ಸರ್ಕಲ್‌ವರೆಗೆ 3 ಕಿ.ಮೀ. ಸಸ್ತಾನದಿಂದ ಸಂತೆಕಟ್ಟೆಯವರೆಗೆ 13 ಕಿ.ಮೀ. ಹಾಗೂ ಮುಲ್ಕಿಯಿಂದ ಕೋಲ್ನಾಡ್‌ವರೆಗೆ 11 ಕಿ.ಮೀ.ವರೆಗೆ ಸಂಪೂರ್ಣ ಜರ್ಝರಿತವಾಗಿದೆ. ಈ ಭಾಗವನ್ನು ದುರಸ್ತಿ ಮಾಡುವಲ್ಲಿ ಇಲಾಖೆ ತೀವ್ರ ನಿರ್ಲಕ್ಷ್ಯ ವಹಿಸುತ್ತಿದೆ.



6 ಕೋಟಿಯಿಂದ 9 ಕೋಟಿಗೆ ಏರಿದೆ:

ಸಾಸ್ತಾನ ಸಂತೆ ಕಟ್ಟೆವರೆಗೆ 13 ಕಿ.ಮೀ. ಮತ್ತೂ ಮುಲ್ಕಿ-ಕೊಲ್ಯಾಡ್‌ವರೆಗೆ 11 ಕಿ.ಮೀ. ಪ್ರದೇಶಕ್ಕೆ ಕನಿಷ್ಠ ಕಾಲಾವಧಿ ದುರಸ್ತಿಯನ್ನಾದರೂ ಮಾಡಬೇಕು ಎಂದು ಒತ್ತಾಯಿಸಿ 6.32ಕೋಟಿ ರೂಗಳ ಅಂದಾಜು ಪಟ್ಟಿಯನ್ನು ರಾ.ಹೆ. ವಿಭಾಗಕ್ಕೆ ಸಲ್ಲಿಸಲಾಗಿತ್ತು. ಆದರೆ ಅಧಿಕಾರಿಗಳ ಮೊಂಡುತನದಿಂದ ಹಣ ಬಿಡುಗಡೆಯಾಗಿಲ್ಲ. ಈಗ ಯೋಜನಾ ವೆಚ್ಚ 9 ಕೋಟಿ ರೂಪಾಯಿಗೆ ಏರಿದೆ. ಈ ಮಧ್ಯೆ ಈ ಹೆದ್ದಾರಿಯು ಚತುಷ್ಪಥಗೊಳ್ಳುವುದರಿಂದ ತಾತ್ಕಾಲಿಕ ದುರಸ್ತಿಗೆ ಹಣ ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಚತುಷ್ಪಥ ಕಾಮಗಾರಿ ಸದ್ಯ 4-5 ವರ್ಷಗಳಲ್ಲಿ ನಡೆಯುವ ಸಾಧ್ಯತೆಗಳಿಲ್ಲದಿರುವುದರಿಂದ ಅಲ್ಲಿಯವರೆಗೆ ಈ ನಾಶವಾಗಿರುವ ಹೆದ್ದಾರಿಯನ್ನು ಸಂಪೂರ್ಣ ದುರಸ್ತಿಗೊಳಿಸಲೇಬೇಕಾಗಿದೆ. ಆದುದರಿಂದ ಅಧಿಕಾರಿಗಳನ್ನು ಮಣಿಸಲು ನ್ಯಾಯಾಲಯದ ಮೊರೆ ಹೋಗಬೇಕಾಗುತ್ತಿದೆ ಎಂದು ಸಮಿತಿಯು ಹೇಳಿದೆ. ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಮೇಲೆ ಕ್ರಮವಹಿಸಬೇಕಾಗಿದೆ.

ಹೆದ್ದಾರಿ ಒಂದು ವರ್ಷದೊಳಗೆ ನಾಶ

ಸಮಿತಿಯ ಹೋರಾಟದ ಫಲವಾಗಿ 2008ರಲ್ಲಿ ಹೆದ್ದಾರಿ ಇಲಾಖೆಯು ಸಾಸ್ತಾನದಿ[ಂದ] ಸಂತೆಕಟ್ಟೆಯವರೆಗೆ ಆಯಾ 9 ಕಡೆಗಳಲ್ಲಿ ಸುಮಾ[ರು] 2 ಕೋಟಿ ರೂಪಾಯಿ ವೆಚ್ಚದಲ್ಲಿ ಹೆದ್ದಾರಿಯ[ನ್ನು] ಪುನರ್ ನಿರ್ಮಾಣ ಮಾಡಿತ್ತು. ಆದರೆ ವರ್ಷದೊ[ಳಗೆ] ಪುನರ್ ನಿರ್ಮಿತ ಹೆದ್ದಾರಿ ಸಂಪೂ[ರ್ಣ] ನಾಶವಾಗಿದೆ. ಆದುದರಿಂದ ಈ ಕ[...] ಕಾಮಗಾರಿಗಳನ್ನು ನಡೆಸಿದ ಗುತ್ತಿಗೆದಾರರ ಮೆ[...] ಕ್ರಮ ಕೈಗೊಳ್ಳಬೇಕು ಮತ್ತು ಅವರಿಂದ [...] ಉಚಿತವಾಗಿ ಹೆದ್ದಾರಿಯನ್ನು ದುರಸ್ತಿಗೊಳಿಸಬ[...] ಎಂದು ಸಮಿತಿ ಒತ್ತಾಯಿಸಿದೆ.

ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆ[...] ಸಂಪೂರ್ಣ ದುರಸ್ತಿಯಾಗಿ ಡಾಂಬರೀಕ[...] ಮಾಡದೇ ಅದಿರು ಲಾರಿಗಳನ್ನು ಚಲಿಸಲು ಬ[...] ಪುನಃ ರಸ್ತೆ ಜಖಂ ಆಗಲಿದೆ. ಈಗಿರುವ ರಾ[...] ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯಲ್ಲಿ ಅದಿರು [...] ಹೋದಲ್ಲಿ ಹೆಚ್ಚಿನ ಭಾರವನ್ನು ಹೊರಲಾರದೇ ಅ[...] 'ಧಾರಣಶಕ್ತಿ' ಇಲ್ಲದೇ ರಸ್ತೆಗಳು ಬ[...] ಜಖಂಗೊಳ್ಳುತ್ತವೆ. ಚತುಷ್ಪಥ ರಸ್ತೆಯಾದಾಗ [...] ಭಾರ ಹೊರುವಂತಾಗಿ 'ಧಾರಣ ಶಕ್ತಿ' ಹೆ[...] ಅನಾಹುತ ಕಡಿಮೆಯಾದೀತು.

20-30 ಟನ್ ಭಾರದ ವಾಹನಗಳು ರಸ್ತೆ[...] ಚಲಿಸಬೇಕಾದರೆ ಚತುಷ್ಪಥ ರಸ್ತೆಯಾಗಬೇ[...] ಅಲ್ಲಿವರೆಗೆ ಕಡಿಮೆ ಭಾರದ ವಾಹನಗಳಿಗೆ ಮ[...] ಅನುಮತಿಯನ್ನು ಜಿಲ್ಲಾಡಳಿತ ನೀಡಬೇಕಾಗು[...] ಈವಾಗ ಅದಿರು ಲಾರಿಗಳಿಗೆ ಚಲಿಸಲು ನಿ[...] ಮಾಡಲಾಗಿದೆ.

ಸಾರ್ವಜನಿಕರಲ್ಲಿ ಜಾಗೃತಿ ಬಂದ[...] ಒಗ್ಗಟ್ಟಿನಿಂದ ಪ್ರತಿಭಟಿಸಿದಾಗ ನಿರಂತರ[...] ಜಿಲ್ಲಾಡಳಿತ ಮತ್ತು ರಾಜ್ಯಾಡಳಿತ ಮೇಲೆ [...] ಹೇರಿದಾಗ ಆಡಳಿತಾತ್ಮಕ ಕೆಲಸ ಹಾ[...] ಕಾಮಗಾರಿಗಳನ್ನು ಮಾಡಿಸಲು ಸಾಧ್ಯ. ಅ[...] ಹೋರಾಟಗಳು ಬರುವುದು ಅವಶ್ಯವಿದೆ.

● ಕೆ.ಶಂ[...]

ಕಂಗೆಟ್ಟ ಕಾಂಗ್ರೆಸ್.....

ಪುಟ 5 ರಿಂದ

ಅರ್ಥವಾಗದ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ಅಭಿವೃದ್ದಿಗೆ ಇವರಲ್ಲಿ ಯಾವುದೇ ನಿರ್ಧಿಷ್ಟ ಕಾರ್ಯಕ್ರಮವಿಲ್ಲ. ಆದರೆ ರಾಜ್ಯದ ಅಭಿವೃದ್ದಿ ಬಗ್ಗೆ ದಿನಬೆಳಗಾದರೆ ಮುಖ್ಯಮಂತ್ರಿ ಜಪಮಾಡುತ್ತಾರೆ. ಇವರಲ್ಲಿ ಬಡತನ, ನಿರುದ್ಯೋಗ, ಉತ್ಪಾದನೆ ಹೆಚ್ಚಳ, ಸಂಪನ್ಮೂಲಗಳ ಕ್ರೋಢೀಕರಣ, ಉದ್ಯೋಗಳ ಸೃಷ್ಠಿಗೆ ಏನು ಕಾರ್ಯಕ್ರಮವಿದೆ? ಇಷ್ಟಕ್ಕೂ ಅಭಿವೃದ್ಧಿ ಬಗ್ಗೆ ಇವರ ತಿಳಿವಳಿಕೆ ದೋಷಪೂರ್ಣವಾಗಿದೆ. ಜನಸಾಮಾನ್ಯರ ಜೀವನ ಮಟ್ಟವನ್ನು ಉನ್ನತ ಮಟ್ಟಕ್ಕೆ ಏರಿಸದ ಯಾವುದೇ ಅಭಿವೃದ್ಧಿ ಜನವಿರೋಧಿಯಾಗಿರುತ್ತದೆ. ಕನಿಷ್ಟ ತಿಳಿವಳಿಕೆ ಇಲ್ಲ. ಒಂದೂವರೆ ವರ್ಷದಿಂದ ಬರೀ ಆಶ್ವಾಸನೆಗಳು ಕೊಟ್ಟಿದ್ದು ಬಿಟ್ಟರೆ ಯಾವುದನ್ನಾದರೂ ಒಂದು ಮಾಡಿ ತೋರಿಸಲಿಕ್ಕೆ ಆಗಲಿಲ್ಲ, ಒಂದೂವರೆ ವರ್ಷದಿಂದ ಬರೀ ಬಡಾಯಿ ಕೊಚ್ಚಿದಂತಾಯಿತು. ಈಗ ಏನು ಮಾಡಬೇಕೆಂಬುದು ರಾಜ್ಯದ ಬಿ.ಜೆ.ಪಿ. ಗೆ ತಿಳಿಯದಾಗಿ ದಿಕ್ಕು ತಪ್ಪಿದಂತಾಗಿದೆ. ಅದಕ್ಕೆ 29-09-2009 ರಿಂದ ಮೈಸೂರಿನ ಸುತ್ತೂರು ಮಠದಲ್ಲಿ ಗುಜರಾತಿನ ಮುಖ್ಯಮಂತ್ರಿ ನರಭಕ್ಷಕ ನರೇಂದ್ರ ಮೋದಿ ಯವರಿಂದ ರಾಜ್ಯದ ಮುಖ್ಯಮಂತ್ರಿಗೂ ಸೇರಿ ಎಲ್ಲಾ ಮಂತ್ರಿಗಳಿಗೆ ಪಾಠಮಾಡಿಸಿಲಿದ್ದಾರೆ. ಅಂದರೆ ಈ ರಾಜ್ಯದ ಮುಖ್ಯಮಂತ್ರಿಗೆ ಈ ನೆಲದ ಅಭಿವೃದ್ದಿ ಹೇಗೆ ಮಾಡಬೇಕೆಂಬುದು ಗೊತ್ತಿಲ್ಲ. ಅದಕ್ಕೆ ಗುಜರಾತಿನ ಮುಖ್ಯಮಂತ್ರಿ ಯಿಂದ ಪಾಠಮಾಡಿಸಿಕೊಳ್ಳುತ್ತಾರೆ. ಇದಕ್ಕಿಂತ ಕರ್ನಾಟಕ ರಾಜ್ಯಕ್ಕೆ ಅವಮಾನ ಬೇರೆ ಯಾವುದಿದೆ? ಇಂತಹ ಮುಖ್ಯಮಂತ್ರಿ ನಮ್ಮ ರಾಜ್ಯದಲ್ಲಿ ಮುಂದುವರೆಯಬೇಕಾ? ಎಂತಹ ನಾಚಿಕೆ ಗೇಡಿನಸ್ಥಿತಿ ಈ ರಾಜ್ಯದ್ದು! ದಿಕ್ಕು ತಪ್ಪಿದ ಬಿ.ಜೆ.ಪಿ.ಗೆ ನರೇಂದ್ರಮೋದಿ ಮತ್ತು ಆರ್. ಎಸ್.ಎಸ್. ನಾಯಕರು ಕಾರ್ಯಕ್ರಮವನ್ನು ರೂಪಿಸಲು ಈ ಮೈಸೂರಿನ ತರಬೇತಿ ಶಿಬಿರ ಖಂಡಿತಾ ಅಲ್ಲ. ನರೇಂದ್ರ ಮೋದಿ ಎಂಬ ನರಬಕ್ಷಕ ತನ್ನ ಪ್ರಿಯವಾದ ಫ್ಯಾಸಿಸ್ಟ್ ಧೋರಣೆಯಿಂದ ಅಲ್ಪಸಂಖ್ಯಾತರನ್ನು ಸಾಯಿಸಿದ, ಹೇಗೆ ಮುಗ್ಧರನ್ನು ತನ್ನ ವಿರೋದಿಗಳನ್ನು ಎನ್‌ಕೌಂಟರ್ ಹೆಸರಿನಲ್ಲಿ ಪೋಲಿಸರನ್ನು ಉಪಯೋಗಿಸಿ ಕೊಂದ.. ನೀವು ಕರ್ನಾಟಕ ರಾಜ್ಯದಲ್ಲಿ ಹೇಗೆ ವಿರೋಧಿಗಳನ್ನು ಧ[...] ಮಾಡಬೇಕು ಎಂಬುದನ್ನು ಹೇಳಿ ಇಡಿ ಕರ್ನಾಟ[ಕ] ಗುಜರಾತ್ ಮಾಡಿಸಿಲಿಕ್ಕೆ ಒಂದಿದ್ದಾನೆ [...] ಜೊತೆಯಲ್ಲೇ ಆರ್.ಎಸ್.ಎಸ್. ನಾಯ[...] ಬಿ.ಜೆ.ಪಿ. ಮಂತ್ರಿಗಳಿಗೆ ಪಾಠಹೇಳುತ್ತಿದ್ದಾರೆ. [...] ಏನುಪಾಠ ಹೇಳುತ್ತಾರೆಂದು ಜಗತ್ತಿಗೇ[...] ನರೇಂದ್ರ ಮೋದಿ ಮತ್ತು ಆತನ ಸಹೋದ[...] ಮಂತ್ರಿಗಳಿಂದ ಈ ರಾಜ್ಯ ಏನನ್ನು ನಿರೀಕ್ಷಿಸಬ[...] ತಮಗೆ ತಲೆಯಲ್ಲಿ ಸ್ವಂತ ಬುದ್ದಿ [...] ಆಲೋಚನಾಶಕ್ತಿ ಇಲ್ಲ, ತಮ್ಮ ಹತ್ತಿರ [...] ಕಾರ್ಯಕ್ರಮ ಇಲ್ಲ...ಎಂದು ರಾಜ್ಯ ಬಿ.ಜೆ.ಪಿ. [...] ಅವರ ಸರ್ಕಾರ ಜಗಜ್ಜಾಹಿರು ಗೊಳಿಸಿ[...] ಇಂತಹ ದಿಕ್ಕು ದಿಸೆ ಇಲ್ಲದ ಸರ್ಕಾರ ಈ ರಾಜ[್ಯಕ್ಕೆ] ಇರಬೇಕೆ ಎಂಬುದೇ ದೊಡ್ಡ ಪ್ರಶ್ನೆಯಾಗಿದೆ.

ಆಮ್ ಆದ್ಮಿ' ಯ ಅಂದರೆ ಜನಸಾಮಾನ್ಯರ ಹಿತಗಳನ್ನು ಬಲಿಗೊಟ್ಟು ಶ್ರೀಮಂತರ ಸೂಪರ್ ಲಾಭಗಳಿಗೆ ನುಕೂಲ ಕಲ್ಪಿಸುವ ವರ್ಗ ಪಕ್ಷಪಾತದಿಂದಾಗಿಯೇ ಬೆಲೆಯೇರಿಕೆಯ ಅಬ್ಬರಕ್ಕೆ ಹತೋಟಿ ಹಾಕಲಾಗಿಲ್ಲ. ದು ಹಬ್ಬದ ಸಡಗರವನ್ನು ತಣ್ಣಗಾಗಿಸಿತು. ಹಬ್ಬದ ದಿನಗಳು ಮುಗಿದಂತೆ ಈ ವರ್ಗ ಪಕ್ಷಪಾತವನ್ನು ಡುವಂತೆ ಮಾಡುವ ಜನಾಂದೋಲನಗಳು ಈಗ ಮೂಡಿ ಬರಬೇಕು.

ಜನಸಾಮಾನ್ಯರ ಹಿತಗಳ ಬಲಿ ಶ್ರೀಮಂತರಿಗೆ ಸೂಪರ್ ಲಾಭಗಳು

ತ್ತೀಚಿನ ಹಬ್ಬಗಳಲ್ಲಿ ಬೆಲೆ ಏರಿಕೆಯಿಂದ ಜನರಿಗೆ ಹಳ ಕಷ್ಟವಾಯಿತು.. ನಿರಂತರ ಬೆಲೆಯೇರಿಕೆ, ದರಲ್ಲೂ ಜೀವನಾವಶ್ಯಕ ವಸ್ತುಗಳ ವಿಪರೀತ ಲೆಯೇರಿಕೆ ಈ ಹಬ್ಬದ ಸಡಗರವನ್ನು ಬಹಳಷ್ಟು ಣ್ಣಗಾಗಿಸಿತು.

ಯುಪಿಎ ಸರಕಾರ ಈ ಬೆಲೆಯೇರಿಕೆಯ ಮೇಲೆ ತೋಟಿ ಹಾಕುವಲ್ಲಿ ಸಂಪೂರ್ಣ ವಿಫಲವಾಗಿದೆ. ಡಪಕ್ಷಗಳು ಈ ಬಗ್ಗೆ ಹಲವು ಕ್ರಮಗಳನ್ನು ೂಚಿಸಿದವು. ಅವನ್ನು ಜಾರಿಗೆ ತಂದಿದ್ದರೆ ಜನಗಳಿಗೆ ಲ್ಪ ಮಟ್ಟಿನ ಪರಿಹಾರವಾದರೂ ಸಿಗುತ್ತಿತ್ತು. ಆದರೆ ಗ ಈ ಸರಕಾರ ಈ ಬೆಲೆಯೇರಿಕೆಯಿಂದ ಅಪಾರ ಯೋಜನ ಪಡೆಯುತ್ತಿರುವ ವಿಭಾಗಗಳ ವಿರುದ್ಧ ಮ ಕೈಗೊಳ್ಳಬೇಕಾಗುತ್ತಿತ್ತು. ಇದು ಹೇಗೆ ತಾನೇ ಧ್ಯ? ಹೀಗೆ ಬೆಲೆಗಳನ್ನು ಹತೋಟಿಗೆ ತರುವಲ್ಲಿ ುಪಿಎ ಸರಕಾರದ ವಿಫಲತೆಗೆ ಮುಖ್ಯ ಕಾರಣ ದರ ವರ್ಗ ಪಕ್ಷಪಾತವೇ ಎಂಬುದರಲ್ಲೀಗ ಂದೇಹವಿಲ್ಲ. ಕಾಂಗ್ರೆಸ್ ಈಗ ಸದಾ 'ಆಮ್ ದ್ಮಿ'ಯ ಜಪ ಮಾಡುತ್ತಿದ್ದರೂ, ಅದೇ 'ಆಮ್ ದ್ಮಿ' ಯ ಅಂದರೆ ಜನಸಾಮಾನ್ಯರ ಹಿತಗಳನ್ನು ಲಿಗೊಟ್ಟು ಶ್ರೀಮಂತರ ಸೂಪರ್ ಲಾಭಗಳಿಗೆ ನುಕೂಲ ಕಲ್ಪಿಸುವ ವರ್ಗ ಪಕ್ಷಪಾತ ಇದು.

ಟ್ಟಾ ವಹಿವಾಟಿನಲ್ಲಿ ಾಭವೆಂದರೇನರ್ಥ?

ಬೆಲೆಗಳ ನಾಗಾಲೋಟಕ್ಕೆ ಒಂದು ಕಾರಣ ೇಶದಲ್ಲಿ ಸರಕು ಸಟ್ಟಾ ಮಾರುಕಟ್ಟೆಯಲ್ಲಿ ವಹಿವಾಟು ಪರೀತವಾಗಿ ಹೆಚ್ಚಿರುವುದು. ಭಾರತದ ಮುಂಗಡ ಾರುಕಟ್ಟೆ ಆಯೋಗ(ಫಾರ್ವರ್ಡ್ ಮಾರ್ಕೆಟ್ಸ್ ಮಿಶನ್ ಆಫ್ ಇಂಡಿಯಾ)ದ ವರದಿಗಳ ಪ್ರಕಾರ 008ರ ಎಪ್ರಿಲ್ 1 ಮತ್ತು ಜೂನ್ 30ರ ನಡುವೆ ವಾಯಿದಾ ವಹಿವಾಟಿನ ಮೊತ್ತ ೂ.11,15,326.99. 2009ರ ಇದೇ ಅವಧಿಯಲ್ಲಿ ದು ರೂ.15,64,114.96ಕ್ಕೆ ಜಿಗಿಯಿತು. ಷ್ಟೊಂದು ಪ್ರಮಾಣದಲ್ಲಿ ವಹಿವಾಟು ೆಚ್ಚಬೇಕಾದರೆ ಇದರಿಂದ ಭಾರಿ ಲಾಭ ರಲೇಬೇಕಲ್ಲವೇ? ಈ ವಹಿವಾಟಿನಲ್ಲಿ 'ಲಾಭ' ಂದರೇನು? ಯಾವ ಸರಕಿನ ಮೇಲೆ ಈ ಹಿವಾಟು ನಡೆಯುತ್ತದೆಯೋ ಆ ಸರಕನ್ನು ುಂದೊಂದು ದಿನ ಅದಕ್ಕೆ ಈಗಿರುವ ಬೆಲೆಗಿಂತ ೆಚ್ಚಿನ ಬೆಲೆಯಲ್ಲಿ ಮಾರಲಾಗುತ್ತದೆ ಎಂದೇ ಇದರ ರ್ಥ. ಅಂದರೆ ಈ ಜೂಜುಕೋರ ವ್ಯಾಪಾರಿಗಳಿಗೆ ಾಭ ಸಿಗುವುದು ಸಂಬಂಧಪಟ್ಟ ಸರಕಿನ ಬೆಲೆಗಳು ಏರುತ್ತಲೇ ಇರುವಂತಹ ಹುನ್ನಾರ ನಡೆಸಿದರೆ ಮಾತ್ರ. ಇದಕ್ಕಾಗಿ ಎಲ್ಲಾ ದಾರಿಗಳನ್ನೂ, ಕಾಳಸಂತೆ ಮತ್ತು ಕಳ್ಳ ದಾಸ್ತಾನುಗಳ ವಿಧಾನವನ್ನೂ ಅನುಸರಿಸಲು ಅವರು ಹಿಂಜರಿಯುವುದಿಲ್ಲ.

ಇದು ಕೇವಲ ಭಾರತದಲ್ಲಿ ಮಾತ್ರ ಕಂಡು ಬರುತ್ತಿರುವ ವಿದ್ಯಮಾನವಲ್ಲ. ವ್ಯಾಪಾರ ಮತ್ತು ಅಭಿವೃದ್ಧಿ ಕುರಿತಾದ ವಿಶ್ವಸಂಸ್ಥೆಯ ಸಮ್ಮೇಳನ(ಅಂಕ್ಟಾಡ್) ಇತ್ತೀಚೆಗೆ ಪ್ರಕಟಿಸಿದ 'ಜಾಗತಿಕ ಹೂಡಿಕೆ ವರದಿ' ಸಟ್ಟಾ ವ್ಯವಹಾರ ವಿಶ್ವಾದ್ಯಂತ ಆಹಾರ ವಸ್ತುಗಳ ಬೆಲೆಗಳನ್ನು ಮೇಲೋತ್ತುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಈ ಬೆಲೆಗಳ ಏರಿಕೆ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಇಲ್ಲ ಎಂಬ ಕಾರಣಕ್ಕಾಗಿ ಅಲ್ಲ; ಬದಲಿಗೆ, ಹಣಕಾಸು ಜೂಜುಕೋರರು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಚಟುವಟಿಕೆಗಳಿಂದಾಗಿಯೇ ಹೀಗಾಗುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕೃಷಿಯಲ್ಲಿ ಈ ಬಹುರಾಷ್ಟ್ರೀಯ ಕಂಪನಿಗಳ ಭಾಗವಹಿಸುವಿಕೆಯ ಅನುಭವಗಳನ್ನು ಚರ್ಚಿಸುತ್ತಾ ಈ ವರದಿ ಇದು 'ನಕಾರಾತ್ಮಕ ಪರಿಣಾಮಗಳನ್ನು ಉಂಟು ಮಾಡಬಹುದು' ಎನ್ನುತ್ತದೆ. ಇಂತಹ ಭಾಗವಹಿಸುವಿಕೆಯಿಂದ ಬೇರೆಯವರು ಈ ವ್ಯಾಪಾರದಲ್ಲಿ ಪ್ರವೇಶಿಸದಂತೆ ತಡೆಯುವಂತೆ ವರ್ತಿಸಬಹುದು, ರೈತರು ಬೀಜಗಳು ಮತ್ತು ಇತರ ಕೃಷಿ ಲಾಗುವಾಡುಗಳಿಗಾಗಿ ಈ ಬಹುರಾಷ್ಟ್ರೀಯ ಕಂಪನಿಗಳನ್ನೇ ಹೆಚ್ಚೆಚ್ಚಾಗಿ ಅವಲಂಬಿಸಬೇಕಾಗಬಹುದು, ಬೆಳೆ ವಿಧಾನಗಳು ಬದಲಾಗಿ ಪ್ರಧಾನ ಆಹಾರ ಬೆಳೆಗಳ ಅಭಾವ ಉಂಟಾಗಬಹುದು. ಬಿಟಿ ಹತ್ತಿ ಮತ್ತು ಇತರ ಬೀಜವಿಲ್ಲದ ತಳಿ ಬದಲಿಸಿದ ವಾಣಿಜ್ಯ ಬೆಳೆಗಳನ್ನು ಬೆಳೆಸುವಂತೆ ಆಮಿಷಕ್ಕೊಳಗಾದ ರೈತರ ಸಂಕಟಗಳ ನಮ್ಮ ಸ್ವಂತದ ಅನುಭವಗಳೇ ಇವೆ. ರೈತರು ಪ್ರಧಾನ ಆಹಾರ ಬೆಳೆಗಳ ಬದಲು ವಾಣಿಜ್ಯ ಬೆಳೆಗಳಿಗೆ ಬದಲಿಸುವಂತೆ ಆಮಿಷವೊಡ್ಡಿ, ಅಂತಿಮವಾಗಿ ಈ ಬಹುರಾಷ್ಟ್ರೀಯ ಕಂಪನಿಗಳು ಆಹಾರಧಾನ್ಯಗಳ ಉತ್ಪಾದನೆಯೇ ಕಡಿಮೆಯಾಗುವಂತೆ ಮಾಡಬಹುದು, ಅಮೂಲಕ ಆಹಾರ ಭದ್ರತೆಗೆ ಅಪಾಯವೊಡ್ಡಿ ಬೆಲೆಗಳು ಏರುವುದಕ್ಕೆ ನೇರವಾಗಿಯೇ ಕಾರಣವಾಗಬಹುದು. ಇವೆಲ್ಲವೂ ಭಾರತದಲ್ಲಿ ಈಗಾಗಲೇ ಸಂಭವಿಸುತ್ತಿವೆ.

ಎರಡಲಗಿನ ಕತ್ತಿ ಈ ಸಟ್ಟಾ ವಹಿವಾಟು

ಭಾರತದಲ್ಲಿ ಜೂಜುಕೋರ ವ್ಯಾಪಾರದ ಬಗ್ಗೆ ಮತ್ತೆ ನೋಡೋಣ. ಸಂಸತ್ತಿನಲ್ಲಿ ಆಮೂಲಾಗ್ರ ಚರ್ಚೆ ಮತ್ತು ಸಾರ್ವಜನಿಕ ಆಕ್ರೋಶದಿಂದಾಗಿ ಅಕ್ಕಿ, ಗೋಧಿ, ಉದ್ದು, ತೊಗರಿಬೇಳೆಯಂತಹ ಕೆಲವು ಸರಕುಗಳಲ್ಲಿ ವಾಯಿದಾ ವಹಿವಾಟ(ಭವಿಷ್ಯತ್ ವ್ಯಾಪಾರ) ನ್ನು ಸರಕಾರ ಜನವರಿ 2007ರಲ್ಲಿ ನಿಷೇಧಿಸಿತು. ಆಗ ಈ ಎರಡು ಬೇಳೆಗಳ ಬೆಲೆಗಳಲ್ಲಿ 20ಶೇ. ಇಳಿಕೆ ಕಂಡು ಬಂತು. ಈ ಮೂಲಕ ಈ ಜೂಜುಕೋರ ವಹಿವಾಟು ಮತ್ತು ಬೆಲೆಗಳ ಏರಿಕೆ



ನಡುವಣ ಸಂಬಂಧ ಸ್ಪಷ್ಟಗೊಂಡಿತು.

ಸೆಪ್ಟೆಂಬರ್ ಆರಂಭದಲ್ಲಿ, ದೇಶದಲ್ಲಿನ ಸೆಣಬು ಉದ್ದಿಮೆಯ ಪ್ರಧಾನ ಸಂಘಟನೆ ಭಾರತೀಯ ಸಣಬು ಗಿರಣಿಗಳ ಸಂಘ(ಇಂಡಿಯನ್ ಜೂಟ್ ಮಿಲ್ಸ್ ಅಸೋಸಿಯೇಶನ್) ಸೆಣಬಿನಲ್ಲಿ ಮುಂಗಡ ಮತ್ತು ವಾಯಿದಾ ವಹಿವಾಟುಗಳನ್ನು ನಿಷೇಧಿಸುವಂತೆ ಆಗ್ರಹಿಸಿತು. ಈ ಸಂಘ ಬೆಲೆಗಳ ಮೇಲೆ ವಾಯಿದಾ ವಹಿವಾಟಿನ ಪ್ರಭಾವವನ್ನು ಅಧ್ಯಯನ ಮಾಡಲು ಒಂದು ಮ್ಯಾನೇಜ್‌ಮೆಂಟ್ ಸಲಹಾ ಕಂಪನಿಯನ್ನು ನೇಮಿಸಿತು. ಅದರ ವರದಿಯ ಪ್ರಕಾರ ವಾಯಿದಾ ವಹಿವಾಟು ಕಚ್ಚಾ ಸೆಣಬಿನ ಬೆಲೆಗಳನ್ನು ಅಸಾಮಾನ್ಯ ಮಟ್ಟದಲ್ಲಿ ಏರಿಸಿದೆ. ಇದರ ಹೆಚ್ಚಿನ ಪ್ರಯೋಜನಗಳು ಮಧ್ಯವರ್ತಿಗಳಿಗೆ ಮತ್ತು ವ್ಯಾಪಾರಿಗಳಿಗೆ ಹೋಯಿತು; ಸೆಣಬು ಬೆಳೆಗಾರರಿಗೆ ಏನೂ ಸಿಗಲಿಲ್ಲ. 2008-09ರಲ್ಲಿ ರೈತರಿಗೆ ಸಿಕ್ಕಿದ್ದು ಸರಾಸರಿ ಟನ್ನಿಗೆ ರೂ.14780. ಆದರೆ ಮಾರುಕಟ್ಟೆಯಲ್ಲಿ ಅದರ ಮಾರಾಟ ಬೆಲೆ ರೂ. 20350. ಅಂದರೆ ಟನ್ನಿಗೆ ರೂ.5570ರ ಅಂತರ. ಹೀಗೆ ಸಟ್ಟಾ ವ್ಯವಹಾರ ಜನಗಳನ್ನು ಎರಡು ಕಡೆಗಳಿಂದಲೂ ತಿವಿಯುವಂತದ್ದು. ಒಂದೆಡೆ ರೈತರಿಗೆ ಅನ್ಯಾಯ, ಇನ್ನೊಂದೆಡೆ, ರೈತರೂ ಸೇರಿದಂತೆ ಪ್ರತಿಯೊಬ್ಬರಿಗೂ ಏರುಬೆಲೆಗಳ ಹೊರೆ.

ಜನಾಂದೋಲನಗಳ ಮೂಲಕವೇ

ಸಕ್ಕರೆ ಉತ್ಪಾದನೆ ಸರಾಸರಿಗಿಂತ ಕಡಿಮೆಯಿದ್ದು ಅದರಿಂದಾಗಿ ಸಕ್ಕರೆ ಬೆಲೆಗಳು ತೀವ್ರವಾಗಿ ಏರುತ್ತಿರುವಾಗ ಸಕ್ಕರೆಯನ್ನು ರಫ್ತು ಮಾಡುವುದರ ವಿರುದ್ಧ ಸಾರ್ವಜನಿಕ ಆಕ್ರೋಶ ವ್ಯಕ್ತಗೊಂಡಾಗ ಸರ್ಕಾರ ಮೇ26ರಿಂದ ಈ ವರ್ಷದ ಡಿಸೆಂಬರ್ ವರೆಗೆ ಸಕ್ಕರೆ ರಫ್ತನ್ನು ಮತ್ತು ಅದರಲ್ಲಿ ವಾಯಿದಾ ವಹಿವಾಟನ್ನು ನಿಷೇಧಿಸಿತು. ಆದರೆ ಉದ್ದು ಮತ್ತು ತೊಗರಿಬೇಳೆಯ ವಿಷಯದಲ್ಲಾದಂತೆ ಮಾರುಕಟ್ಟೆ ಬೆಲೆಗಳು ಇಳಿಯಲಿಲ್ಲ. ಇದರರ್ಥ ಸಕ್ಕರೆಯ ಬೆಲೆಗಳ ಮೇಲೆ ಜೂಜುಕೋರ ವಹಿವಾಟಿನ ಪ್ರಭಾವ ಇಲ್ಲವೆಂದೇನಲ್ಲ. ಇದಕ್ಕೆ ಕಾರಣ ಸಕ್ಕರೆ ರಫ್ತಿಗೆ ಸಂಬಂಧಪಟ್ಟಂತೆ ಒಂದು ಹಣಕಾಸು ಹಗರಣದ ಮೊಕದ್ದಮೆ. ಭಾರತೀಯ ಸಕ್ಕರೆ ಆಮದು-ರಫ್ತು ನಿಗಮ(ಐಎಸ್‌ಇಸಿ), ಭಾರತದಲ್ಲಿನ ಅತಿ ದೊಡ್ಡ ವಿದೇಶಿ ಬ್ಯಾಂಕ್ ಸ್ಟಾಂಡರ್ಡ್ ಚಾರ್ಟರ್ಡ್ ಮತ್ತು ನಾಲ್ಕು ದೊಡ್ಡ ಮ್ಯುಚುವಲ್ ಫಂಡ್ ಕಂಪನಿಗಳು ಈ ಹಗರಣದಲ್ಲಿ ಇವೆ. ಈ ಹಣಕಾಸು ವ್ಯವಹಾರದಲ್ಲಿ ಐಎಸ್‌ಇಸಿ ಗೆ 50 ಕೋಟಿ ರೂ.ಗಳ ನಷ್ಟವಾಗಿದೆ. ಈ ನಷ್ಟಕ್ಕೆ ಹೊಣೆ ಯಾರು ಎಂದು ನ್ಯಾಯಾಲಯ ನಿರ್ಧರಿಸುತ್ತದೆ. ಆದರೆ ಬಲಿಷ್ಠ ಸಕ್ಕರೆ ಕೂಟ ಬೆಲೆಗಳು ಇಳಿಯಲು ಬಿಡುವುದಿಲ್ಲ. ಏಕೆಂದರೆ ಇದರಿಂದ ಅದರ ನಷ್ಟಗಳು ಇನ್ನಷ್ಟು ಹೆಚ್ಚುತ್ತವೆ. ಜನಗಳ ಮಟ್ಟಿಗೆ ಇನ್ನೂ ಹೊಲಸೆಂದರೆ ದೇಶದಲ್ಲಿ ಸಕ್ಕರೆಯ ಸರಾಸರಿ ವಾರ್ಷಿಕ ಬಳಕೆ ಸರಾಸರಿ 2.3 ಕೋಟಿ ಟನ್‌ಗಳಿರುವಾಗ, ಈ ವರ್ಷ ನಿರೀಕ್ಷಿತ ಬೆಳೆಯ ಪ್ರಮಾಣ 1.5 ಕೋಟಿ ಟನ್ ಗಳಿಗಿಂತ ಕಡಿಮೆಯಿರುವ ಸಂದರ್ಭದಲ್ಲಿ ಹೀಗಾಗುತ್ತಿದೆ. ಇದರ ಒಟ್ಟು ಪರಿಣಾಮವೆಂದರೆ, ಚಿಲ್ಲರೆ ಬೆಲೆ ಕಳೆದ ವರ್ಷದ ಈ ಅವಧಿಯ ಹೋಲಿಕೆಯಲ್ಲಿ ಇಮ್ಮಡಿಗೊಂಡು ಕೆ.ಜಿ.ಗೆ ಈಗಾಗಲೇ 30ರೂ. ದಾಟಿದೆ.

ಇಂತಹ ಸನ್ನಿವೇಶದಲ್ಲಿ ಯುಪಿಎ ಸರಕಾರ ತಕ್ಷಣವೇ ಎಲ್ಲಾ ಆವಶ್ಯಕ ಸರಕುಗಳಲ್ಲಿ ವಾಯಿದಾ ವಹಿವಾಟನ್ನು ನಿಷೇಧಿಸುವುದು ಅನಿವಾರ್ಯವಾಗುತ್ತದೆ. ಇದರ ಜೊತೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅಂದರೆ ಪಡಿತರ ಪದ್ಧತಿಯನ್ನು ಬಲಪಡಿಸಬೇಕು. ಈಗಿರುವಂತೆ ಕೇವಲ ಅಕ್ಕಿ, ಗೋಧಿ ಮತ್ತು ಸೀಮೆ ಎಣ್ಣೆಗಷ್ಟೇ ಪಡಿತರವನ್ನು ಸೀಮಿತಗೊಳಿಸದೆ ಎಲ್ಲಾ ಜೀವನಾವಶ್ಯಕ ಸರಕುಗಳನ್ನು ಈ ಜಾಲವನ್ನು ಬಲಗೊಳಿಸಿ ಅದರ ಮೂಲಕ ಹಂಚಬೇಕು.

ಈ ಹಬ್ಬದ ದಿನಗಳು ಕಳೆದಂತೇ ಈ ಕ್ರಮಗಳನ್ನು ಜಾರಿಗೆ ತರಲು ಯುಪಿಎ-2 ಸರಕಾರದ ಮೇಲೆ ಒತ್ತಡ ತರಲು ಜನಾಂದೋಲನಗಳನ್ನು ಬಲಗೊಳಿಸಬೇಕು.

ಅಗತ್ಯವಸ್ತುಗಳ ಬೆಲೆಗಳು ಏರುತ್ತಿವೆ. ಜನರ ಕೈಗೆಟಕದಂತಾಗುತ್ತಿವೆ. ಇದು ಬರಿ ಬೆಲೆ ಏರಿಕೆಯಲ್ಲ. ಅನ್ನಕ್ಕಾಗಿ ಆಹಾಕಾರವೇಳುವ ಪರಿಸ್ಥಿತಿಯತ್ತ ದೇಶ ನಡೆಯುತ್ತಿದೆ. ರಾಜ್ಯವೂ ಇದರಲ್ಲಿ ಹಿಂದೆ ಬಿದ್ದಿಲ್ಲ.

ಬರಿಯ ಬೆಲೆ ಏರಿಕೆಯಲ್ಲ ಅನ್ನಕ್ಕಾಗಿ ಆಹಾಕಾರ

2008ರ ಆರಂಭದಿಂದ ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಎಲ್ಲೆಡೆ ಹಿಂದೆಂದೂ ಕಾಣದ ಪ್ರಮಾಣದಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಆಯಿತು. ಬೆಂಗಳೂರಿನಲ್ಲಿ ಅಧಿಕೃತ ಮೂಲಗಳ ಪ್ರಕಾರವೇ ಆರು ತಿಂಗಳುಗಳಲ್ಲಿ (ಮಾರ್ಚ್ 08 ರಿಂದ ಅಕ್ಟೋಬರ್ 08) ಅಕ್ಕಿಯ ಬೆಲೆ ಕೆ.ಜಿ.ಗೆ ರೂ.12 ರಿಂದ ರೂ.17 ಕ್ಕೇರಿದೆ(ಸುಮಾರು ಶೇ.42 ರಷ್ಟು), ಅದರ ಹಿಂದಿನ 12 ತಿಂಗಳುಗಳಲ್ಲಿ (ಮೇ 07 ರಿಂದ ಏಪ್ರಿಲ್ 08) ದೇಶದ 18 ನಗರಗಳ ಅಕ್ಕಿ ಬೆಲೆ ಏರಿಕೆ ಸರಾಸರಿ ಸುಮಾರು ಶೇ.22 ಇತ್ತು. ಅದೇ ಅವಧಿಯಲ್ಲಿ ಸಾಸಿವೆ ಎಣ್ಣೆ (ಹಲವು ಉತ್ತರ ಮತ್ತು ಪೂರ್ವ ಭಾರತದಲ್ಲಿ ಸಾಮಾನ್ಯ ಅಡುಗೆ ಎಣ್ಣೆ) ಶೇ.28 ರಷ್ಟು, ವನಸ್ಪತಿ ಶೇ.22 ರಷ್ಟು, ತೊಗರಿ ಬೇಳೆ ಶೇ.16 ಸರಾಸರಿ ಬೆಲೆ ಏರಿಕೆ ಕಂಡಿದೆ.


ಒಟ್ಟಾರೆಯಾಗಿ ಆಹಾರ ಬೆಲೆಗಳು ವಿಪರೀತವಾಗಿ ಏರುತ್ತಿವೆ. ಸಾಮಾನ್ಯ ಕುಟುಂಬ ಆಹಾರಕ್ಕೆ ಮಾಡಬೇಕಾದ ಖರ್ಚು ಸತತವಾಗಿ ಏರುತ್ತಿದೆ. ಸಾಮಾನ್ಯವಾಗಿ ತಮ್ಮ ಆದಾಯದ ಅರ್ಧಕ್ಕೂ ಹೆಚ್ಚು ಆಹಾರದ ಮೇಲೆ ಖರ್ಚು ಮಾಡುತ್ತಿರುವ ಬಡ ಕುಟುಂಬಗಳು, ಆಹಾರದ ಪ್ರಮಾಣ ಕಡಿತ ಮಾಡಬೇಕಾಗಿ ಬಂದಿದೆ. ಕಳೆದ 2-3 ವರ್ಷಗಳಿಂದ ಆಹಾರ ವಸ್ತುಗಳ ಬೆಲೆ ಏರುತ್ತಿವೆ. ಈ ವರ್ಷದ ಮೊದಲ ತಿಂಗಳುಗಳಲ್ಲಿ ಸ್ವಲ್ಪ ಸೀಮಿತಕ್ಕೆ ಬಂದಿದ್ದ ಬೆಲೆಗಳು ಪುನಃ ತಮ್ಮ ನಾಗಾಲೋಟ ಆರಂಭಿಸಿವೆ. ಇತ್ತೀಚಿನ ತಿಂಗಳುಗಳಲ್ಲೇ ಅಕ್ಕಿ, ಗೋಧಿ, ಅಡುಗೆ ಎಣ್ಣೆ ಮತ್ತು ಉಪ್ಪಿನ ಬೆಲೆ ಶೇ.12 ರಿಂದ 20 ರಷ್ಟು ಹೆಚ್ಚಿದೆ. ಕೆಲವು ತರಕಾರಿಗಳ ಬೆಲೆ ಇಮ್ಮಡಿ ಆಗಿವೆ. ಬೇಳೆಕಾಳುಗಳ ಬೆಲೆ ಇಮ್ಮಡಿಗಿಂತ ಹೆಚ್ಚಾಗಿದೆ. ತೊಗರಿ ಬೇಳೆ ಮೊದಲ ಬಾರಿಗೆ ಕಿಲೋಗೆ ರೂ.100 ದಾಟಿ ಸೆಂಚುರಿ ಬಾರಿಸಿದೆ. ಕಿಲೋಗೆ ರೂ.30ಕ್ಕೆ ಏರಿದ ಸಕ್ಕರೆ ಎಂದೂ ಇಷ್ಟು ಕಹಿಯಾಗಿರಲಿಲ್ಲ. ಆಹಾರ ವಸ್ತುಗಳ ಬೆಲೆ ಏರಿಕೆಯ ಆಘಾತ ಸಾಲದು ಎಂಬಂತೆ ಆಗಸ್ಟ್ (2009) ಮಧ್ಯದ ಹೊತ್ತಿಗೆ 246 ಜಿಲ್ಲೆಗಳಲ್ಲಿ ಬರ ಬಂದು ಕೋಟ್ಯಾಂತರ ಬಡ ಕುಟುಂಬಗಳನ್ನು ಅಪ್ಪಳಿಸಿದೆ.

ಕೆಲವು ಬೆಳವಣಿಗೆಗಳು ಮತ್ತು ಸಂಗತಿಗಳಿಂದ ಇದು ಬರಿಯ ತಾತ್ಕಾಲಿಕ ಬೆಲೆ ಏರಿಕೆಯಲ್ಲ, ಗಂಭೀರವಾದ ಜಾಗತಿಕ ಆಹಾರ ಬಿಕ್ಕಟ್ಟು ಎಂಬ ನಿರ್ಧಾರಕ್ಕೆ ಬರಬೇಕಾಗಿದೆ.

1. ಜಾಗತೀಕವಾಗಿ ಒಂದೇ ಕಾಲದಲ್ಲಿ ತೀವ್ರ ಅಭೂತಪೂರ್ವ ಬೆಲೆ ಏರಿಕೆಯಾಗಿ ಹಲವು ಕಡೆ ಆಹಾರ ದಂಗೆಗಳು ನಡೆದಿವೆ. ಬೆಲೆ ಏರಿಕೆ ಮುಂದುವರೆಯುವ ಲಕ್ಷಣಗಳಿವೆ.
2. ಜಗತ್ತಿನಲ್ಲಿ ಹಸಿವು ತೀವ್ರವಾಗಿ ಏರುತ್ತಿದ್ದು ಅದು ಮೊದಲ ಬಾರಿಗೆ ಒಂದು ಬಿಲಿಯ (ನೂರು ಕೋಟಿ) ದಾಟಿದೆ. ಭಾರತದ್ದು ಅದರಲ್ಲಿ ಸಿಂಹಪಾಲು.
3. ಭಾರತದ ಅಭಿವೃದ್ಧಿ ರಾಜ್ಯಗಳಲ್ಲಿ ಒಂದು ಎನಿಸಿದ ಕರ್ನಾಟಕದಲ್ಲಿ ಹಸಿವು ಹೆಚ್ಚುತ್ತಿದೆ.
4. ಭಾರತದಲ್ಲಿ ಆಹಾರ ತಲಾ ವಾರ್ಷಿಕ ಬಳಕೆ ಕಳೆದ 50 ವರ್ಷಗಳಲ್ಲಿ ಅತ್ಯಂತ ಕನಿಷ್ಠ ಮಟ್ಟಕ್ಕೆ ಕುಸಿದಿದೆ.
5. ಜಾಗತಿಕ ಆಹಾರ ಧಾನ್ಯಗಳ ತಲಾ ವಾರ್ಷಿಕ ಉತ್ಪಾದನೆ ಕಳೆದ 40 ವರ್ಷಗಳಲ್ಲಿ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಕಳೆದ 40 ವರ್ಷಗಳಲ್ಲಿ ಮೊದಲ ಬಾರಿಗೆ ಉತ್ಪಾದನೆಯ ವಾರ್ಷಿಕ ಏರಿಕೆ, ಜನಸಂಖ್ಯೆ ಏರಿಕೆಗಿಂತಲೂ ನಿಧಾನವಾಗಿದೆ.

ಕರ್ನಾಟಕದಲ್ಲಿ ಹಸಿವು ಹೆಚ್ಚುತ್ತಿದೆ:

ಕರ್ನಾಟಕ ದೇಶದಲ್ಲಿ ಹಲವು ಬೆಳವಣಿಗೆಯ ಸೂಚಕಗಳಲ್ಲಿ ಅಭಿವೃದ್ಧಿ ರಾಜ್ಯ ಎನ್ನಿಸಿಕೊಂಡಿದೆ. ಆದರೆ ಅದರ ಹಸಿವಿನ ಮತ್ತು ಆಹಾರ ಭದ್ರತೆ ಪರಿಸ್ಥಿತಿ ಅದಕ್ಕೆ ಅನುಗುಣವಾಗಿಲ್ಲ. 2008ರ ಹಸಿವಿನ ಸೂಚಕ, ಸ್ವಾಮಿನಾಥನ್ ಫೌಂಡೇಷನ್‌ನ ಆಹಾರ ಅಭದ್ರತೆ ವರದಿ ಮತ್ತು ಮಾನವ ಅಭಿವೃದ್ಧಿ ವರದಿ 2005 ಇವು ಕರ್ನಾಟಕದಲ್ಲಿ ಹಸಿವಿನ ಪರಿಸ್ಥಿತಿ ಗಂಭೀರವಾಗಿದೆ ಎಂದು ಸೂಚಿಸುತ್ತವೆ.



ಹಸಿವಿನಿಂದ ಬಳಲುವ (1632 ಕ್ಯಾಲೋರಿ ಸಹ ಪಡೆಯದ) ಜನರ ಪ್ರಮಾಣ 2008 ರಲ್ಲಿ ಕರ್ನಾಟಕದಲ್ಲಿ ಶೇ.28.1 ಇತ್ತು. ಅಂದರೆ ಕರ್ನಾಟಕದ ನಾಲ್ವರಲ್ಲಿ ಒಬ್ಬ ವ್ಯಕ್ತಿ ಹಸಿವಿನಿಂದ ಬಳಲುತ್ತಿದ್ದಾನೆ. ಇದು ಸರಾಸರಿ ಭಾರತದ ಪರಿಸ್ಥಿತಿಗಿಂತ (ಶೇ.20) ಇನ್ನೂ ಕೆಟ್ಟದು. ಕರ್ನಾಟಕದ ಸಾವಿರ (5 ವರ್ಷಕ್ಕಿಂತ ಕಡಿಮೆ) ಮಕ್ಕಳಲ್ಲಿ 55 ಸಾಯುತ್ತವೆ. ಸಾವಿರ (5 ವರ್ಷಕ್ಕಿಂತ ಕಡಿಮೆ) ಮಕ್ಕಳಲ್ಲಿ 376 ಮಕ್ಕಳು ಕನಿಷ್ಠ ತೂಕ ಸಹ ಹೊಂದಿಲ್ಲ. ಅಂದರೆ ಪೋಷಕಾಂಶಗಳ ಅಭಾವದಿಂದ ನರಳುತ್ತಿವೆ. ಒಟ್ಟಾರೆ ಹಸಿವಿನ ಸೂಚಕ (ಈ ಮೂರರ ಸರಾಸರಿ) 23.73 ಇದು ಸಹ ಸರಾಸರಿ ಭಾರತದ ಪರಿಸ್ಥಿತಿಗಿಂತ (23.3) ಇನ್ನೂ ಕೆಟ್ಟದು.

ಸ್ವಾಮಿನಾಥನ್ ಫೌಂಡೇಷನ್ ವರದಿ ಪ್ರಕಾರ ಗ್ರಾಮೀಣ ಕರ್ನಾಟಕದಲ್ಲಿ ಆಹಾರ ಅಭದ್ರತೆಯ ಈ ಭೀಕರ ಚಿತ್ರಣ ಇದೆ.

1. ಕನಿಷ್ಠ (1890 ಕ್ಯಾಲೋರಿಗಿಂತ ಕಡಿಮೆ) ಆಹಾರದ ಕೊರತೆ ಇರುವ ಗ್ರಾಮೀಣ ಕರ್ನಾಟಕದ ಜನರ ಸಂಖ್ಯೆ ಪ್ರತಿ ನೂರಕ್ಕೆ 20.5 ಅಂದರೆ ಪ್ರತಿ ಗ್ರಾಮೀಣ ಕರ್ನಾಟಕದ ಐದು ಕುಟುಂಬಗಳಲ್ಲಿ ಒಂದು ಕುಟುಂಬ ಹಸಿವಿನ ಅಂಚಿನಲ್ಲಿ ಬದುಕುತ್ತಿದೆ.
2. ರಕ್ತಹೀನತೆಯಿಂದ ಬಳಲುತ್ತಿರುವ ಮದುವೆಯಾದ (15 ರಿಂದ 49 ವಯಸ್ಸಿನ) ಮಹಿಳೆಯರ ಸಂಖ್ಯೆ ಪ್ರತಿ ನೂರಕ್ಕೆ 52.5 ಅಂದರೆ ಕುಟುಂಬದ ಪ್ರಮುಖ ಹೊಣೆ ಹೊತ್ತ ಗ್ರಾಮೀಣ ಕರ್ನಾಟಕದ ಮಹಿಳೆಯರ ಅರ್ಧದಷ್ಟು ರಕ್ತಹೀನತೆಯಿಂದ ಬಳಲುತ್ತಿರುವ ಭೀಕರ ಸ್ಥಿತಿ ಇದೆ.
3. ರಕ್ತಹೀನತೆಯಿಂದ ಬಳಲುತ್ತಿರುವ (6 ರಿಂದ 35 ತಿಂಗಳ ವಯಸ್ಸಿನ) ಮಕ್ಕಳ ಸಂಖ್ಯೆ ಪ್ರತಿ ನೂರಕ್ಕೆ 84.3 ಅಂದರೆ ಏಳು ಗ್ರಾಮೀಣ ಕರ್ನಾಟಕದ ಮಕ್ಕಳಲ್ಲಿ ಆರು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.
4. ಏಳು ಆಹಾರ ಅಭದ್ರತೆಯ ಅಂಕಿಸಂಖ್ಯೆಗಳಲ್ಲಿ ನಾಲ್ಕರಲ್ಲಿ ಭಾರತದ ಸರಾಸರಿಗಿಂತ ಕರ್ನಾಟಕದ ಪರಿಸ್ಥಿತಿ ಕೆಟ್ಟದಿದೆ. 1990 ರ ಅಂಕಿಸಂಖ್ಯೆಗಳಲ್ಲಿ ಮೂರು ಅಂಶಗಳಲ್ಲಿ ಮಾತ್ರ. ಭಾರತದ ಸರಾಸರಿಗಿಂತ ಪರಿಸ್ಥಿತಿ ಕೆಟ್ಟದಿತ್ತು. ಅಂದರೆ ಒಟ್ಟಾರೆಯಾಗಿ ಹಿನ್ನಡೆ ಕಂಡಿದೆ.
5. ಏಳು ಆಹಾರ ಅಭದ್ರತೆಯ ಅಂಕಿಸಂಖ್ಯೆಗಳಲ್ಲಿ ಆರು ಅಂಶಗಳಲ್ಲಿ ಕರ್ನಾಟಕದ ಅಖಿಲ ಭಾರತ ಸ್ಥಾನ/ರ್‍ಯಾಂಕ್‌ನಲ್ಲಿ ಕೆಳಗೆ ಹೋಗಿದೆ. ಏಳು ಆಹಾರ ಅಭದ್ರತೆಯ ಅಂಕಿಸಂಖ್ಯೆಗಳಲ್ಲಿ ನಾಲ್ಕರಲ್ಲಿ ಕರ್ನಾಟಕ ಕಳೆದ ಒಂದು ದಶ[...] ಪರಿಸ್ಥಿತಿ ಕೆಟ್ಟಿದೆ.
6. ಒಟ್ಟಾರೆ ಆಹಾರ ಅಭದ್ರತೆಯ ಪರಿಸ್ಥಿತಿ[...] ಕಳೆದ ಒಂದು ದಶಕದಲ್ಲಿ ಹಿನ್ನಡೆ ಕಂಡ [...] ಮೂರೇ ರಾಜ್ಯಗಳಲ್ಲಿ ಅತ್ಯಂತ ಹೆಚ್ಚಿನ [...] ಕಂಡ 'ಹೆಗ್ಗಳಿಕೆ' ಕರ್ನಾಟಕದ್ದು.

ಆಹಾರ ಬಿಕ್ಕಟ್ಟಿನ ಪ್ರಮುಖ ಅಂಶಗಳು:

ಆಹಾರ ಬಿಕ್ಕಟ್ಟು ಸೂಚಿಸುವ ಮೂರು ಪ್ರ[...] ಅಂಶಗಳು ಇವು:

1. ಭಾರತದಲ್ಲಿ ಆಹಾರದ ತಲಾ ವಾರ್ಷಿಕ [...] 1991 ರಿಂದ 2003 ರ ನಡುವೆ 177 ಕೆ.ಜಿ.[...] 155 ಕೆ.ಜಿ.ಗೆ ಕುಸಿದಿದೆ. ಸರಾಸರಿ ಐದು [...] ಕುಟುಂಬದ ವಾರ್ಷಿಕ ಬಳಕೆ 110 ಕೆ.ಜಿ.[...] ಕುಸಿದಿದೆ. ಇದು ಕಳೆದ ಐವತ್ತು ವರ್ಷ[...] ಕಂಡ ಅತೀ ಕಡಿಮೆ ಬಳಕೆ. ಐದು ಗ್ರಾ[...] ಕುಟುಂಬಗಳಲ್ಲಿ ನಾಲ್ಕಕ್ಕೆ ಕನಿಷ್ಠ ಕ್ಯಾಲೋರಿ [...] ಪ್ರೋಟೀನ್ ಸಿಗುತ್ತಿಲ್ಲ. ಮಾತ್ರವಲ್ಲ ಅದು ಕ[...] ಆಗಿದೆ.
2. 1961-1985 ರ ಅವಧಿಯಲ್ಲಿ ಜಾಗತಿಕ ಆ[...] ಧಾನ್ಯಗಳ ಉತ್ಪಾದನೆ ಪ್ರತಿ ವರ್ಷ ಶೇ[...] ರಷ್ಟು ಹೆಚ್ಚುತ್ತಿತ್ತು. 1961-65 ರ ಅವಧಿ[...] ತಲಾ ಆಹಾರ ಧಾನ್ಯಗಳ ಉತ್ಪಾದನೆ [...] ಕೆ.ಜಿ.(ಪ್ರತಿ ವರ್ಷ) ಇದ್ದದ್ದು, ಎರಡು ದಶ[...] ಕಾಲ ಸತತವಾಗಿ ಏರಿ 1980 ರ ಮಧ್ಯ ಭ[...] ಹೊತ್ತಿಗೆ 334 ಕೆ.ಜಿ. ಆಗಿತ್ತು. ಆದರೆ 19[...] ನಂತರ ಆಹಾರ ಧಾನ್ಯಗಳ ಉತ್ಪಾದನೆ ವಾ[...] ಏರಿಕೆ ನಿಧಾನವಾಗಿ ಶೇ.1.1ಕ್ಕೆ ಕುಸಿದಿದೆ. [...] ತಲಾ ಆಹಾರ ಧಾನ್ಯಗಳ ಉತ್ಪಾದನೆ [...] ಕೆ.ಜಿ.ಗೆ ಇಳಿದಿದೆ. ಇದು ಕಳೆದ 40 ವರ್ಷ[...] ಅತಿ ಕಡಿಮೆ. ಈಗ ಆಹಾರ ಧಾನ್[...] ಉತ್ಪಾದನೆ ವಾರ್ಷಿಕ ಏರಿಕೆ, ಜನಸ[...] ಏರಿಕೆಗಿಂತಲೂ ನಿಧಾನವಾಗಿದೆ. ಜನಸ[...] ಏರಿಕೆಯೇ ನಿಧಾನವಾಗಿದ್ದು ಇದು ಅದಕ್ಕಿಂ[...] ನಿಧಾನವಾಗಿದೆ.
3. ಭಾರತದ ಆಹಾರ ಬೆಳೆಗಳ ಉತ್ಪಾದಕತೆ [...] ಎಕರೆಗೆ ಬೆಳೆಯುವ ಬೆಳೆಯ ಪ್ರಮಾಣ) ಹೆ[...] ದರ ಸತತವಾಗಿ ಇಳಿಮುಖವಾಗು[...] ಗೋಧಿಯ ಉತ್ಪಾದಕತೆ ಹೆಚ್ಚಳದ ದರ [...] ರ ದಶಕದಲ್ಲಿ ಶೇ.3.1 ರಿಂದ 1990 ರ ದಶ[...] ಶೇ.0.9ಕ್ಕೆ ಇಳಿದಿದೆ.

ಬರಿದೋ ಬರಿದು ತುತ್ತಿನಾಚೀಲ

ನು ಸಂತಾಮಾಯಿ ಜತೆ ಸೆಗಣಿ
ುಲು ಹೋಗುತ್ತಿದ್ದೆ. ಮಾಯಿ
ಕಾಡುತ್ತಿದ್ದೆವು. ಬರುವಾಗ ಮಾಯಿಯ
ಮೇಲೆ ಚೀಲ ಪಿಶಾಚಿಯಂತೆ ಇರುತ್ತಿತ್ತು.
ಚಪ್ಪಲಿಯಿಂದ ಕಾಲು ಎಳೆಯುತ್ತಾ ಇಡೀ
ತುಳಿಯುತ್ತಿದ್ದಳು. ಸೆಗಣಿ ಸಿಕ್ಕರೆ ಊಟ
ಆನಂದವಾಗುತ್ತಿತ್ತು. ಸೆಗಣಿಯ ಕುಳ್ಳು
ು ಅವುಗಳನ್ನು ಮಾರುತ್ತಿದ್ದೆವು. ಹೊಟ್ಟೆಯ
ಶಾಂತವಾಗುತ್ತಿತ್ತು. ಹೊಟ್ಟೆಯ ತಗ್ಗು
ುತ್ತಿತ್ತು.
ುಗ್ಗಿಯ ಕಾಲಕ್ಕೆ ದನಕರು ಹೊಲದಲ್ಲಿ
ಯುತ್ತಿದ್ದವು. ಜೋಳದ ತೆನೆ ತಿಂದು ಕಾಳಿನ
ಹಾಕುತ್ತಿದ್ದವು. ಸೆಗಣಿಯಲ್ಲಿ ಉಬ್ಬಿದ
ದ ಕಾಳುಗಳು ಇರುತ್ತಿದ್ದವು. ಕಾಳಿದ್ದ
ಯನ್ನು ಸಂತಾಮಾಯಿ ಉಡಿಯಲ್ಲಿ
ಕೊಳ್ಳುತ್ತಿದ್ದಳು.
ಯಿಂದ ಹೊರಟರೆ
ುಲ್ಲಿ ನದಿ ಸಿಗುತ್ತಿತ್ತು.
ುಲ್ಲಿ ನಾವು ಆ
ಯನ್ನು ತೊಳೆಯುತ್ತಿದ್ದೆವು.
ಹರಿದು ಹೋಗುತ್ತಿತ್ತು.
ಉಳಿಯುತ್ತಿದ್ದವು,
ು ಕಾಳಿನಂತೆ.
ಬಿನಲ್ಲಿ ಮಾಯಿ ಕಾಳು
ಸುತ್ತಿದ್ದಳು. ಒಣಗಿದ
ಕಾಳು
ಯಾಗುತ್ತಿದ್ದವು. ಕಾಳನ್ನು
ಸಬಾರದೆಂದು ನನಗೆ
ನೆಯಾಗುತ್ತಿತ್ತು. ಕಾಳು
ದ ಬಳಿದ ನಾವು ಮನೆಗೆ ಹೋಗುತ್ತಿದ್ದೆವು.
ಬಂದ ಬಳಿಕ ಮಾಯಿ ಆ ಕಾಳುಗಳನ್ನು
ವ ಕಲ್ಲಿಗೆ ಹಾಕುತ್ತಿದ್ದಳು ಮತ್ತು ಹಾಡುತ್ತಾ
ತ್ತಿದ್ದಳು.



ಆಕೆಯ ಮಧುರ ಧ್ವನಿ ಹಾಗೂ ಬೀಸುವ ಕಲ್ಲಿನ ಘರ ಘರ ಸದ್ದು ಪರಸ್ಪರ ಸೇರಿ ಬಿಡುತ್ತಿದ್ದವು. ಕತ್ತಲಲ್ಲಿ ದೀಪ ಹಚ್ಚಿಡುತ್ತಿದ್ದಳು. ಕಲ್ಲೆಣ್ಣೆ ಕಡಿಮೆಯಿದ್ದು ಚಿಮಣಿ ಕ್ಷಯರೋಗಿಯಾಗುತ್ತಿತ್ತು. ನಾಯಿ ಒಗೆದು ಹಾಕಿದ ಬಟ್ಟೆಯಂತೆ ಬಾಗಿಲಲ್ಲಿ ಬಿದ್ದುಕೊಂಡಿರುತ್ತಿತ್ತು. ದಾದಾ ಬೀಡಿ ಸೇದುತ್ತಾ ಬರುತ್ತಿಲಿದ್ದ. ಮೂಲೆಯಲ್ಲಿ ಕೆಮ್ಮುತ್ತ ಕುಳಿತುಕೊಳ್ಳುತ್ತಿದ್ದ 'ಅಲ್ಲಾಮೌಲಾ' ಎಂದು ಹೇಳಿಕೊಳ್ಳುತ್ತಿದ್ದ. ಗಾಣದಲ್ಲಿ ತುರುಕಿದ ಕಬ್ಬಿನಂತೆ ಆತನ ಕಣ್ಣು ನನ್ನತ್ತ ನೋಡುತ್ತಿದ್ದವು. ದಾದಾನಿಗೆ ಕಥೆ ಹೇಳಲು ಕೇಳುತ್ತಿದ್ದೆ. ದಾದಾ ನನಗೆ ತನ್ನ ಕಾಲು ಒತ್ತಲು ಹೇಳುತ್ತಿದ್ದ. ದಾದಾ ಕಥೆ ಹೇಳುತ್ತಿದ್ದ 'ಹೀಂಗ ಒಂದು ಗುಬ್ಬಿ ಇತ್ತು ಮತ್ತೊಂದ ಕಾಗಿ ಇತ್ತು'.

ಸಂತಾಮಾಯಿ ಸೆಗಣಿಯ ಕಾಳು ಬೀಸಿ ಏಳುತ್ತಿದ್ದಳು. ಬಿಸಿಲಿನಲ್ಲಿ ಅಡವಿಯಲ್ಲಿ ಸಂತಾಮಾಯಿ ಸುಡುತ್ತ ತಿರುಗಿದವಳು. ಬಿಸಿಲಿನಿಂದ ಮುಖ ಸುಟ್ಟ ಹಾಗಿರುತ್ತಿತ್ತು. ಹಸಿವೆಯನ್ನು ಸಹಿಸಿ ರೂಢಿಯಾಗಿತ್ತು. ಸಂತಾಮಾಯಿ ಹರಕು ಚಿಂದಿ ಚಿಪ್ಪಾಡಿ, ಸಿಂದಿಯ ಹುಲ್ಲು ತುರುಕಿದಳು. ನನಗೆ

ಇದು ಮರಾಠಿ ಖ್ಯಾತ ದಲಿತ ಸಾಹಿತಿ ಶರಣ ಕುಮಾರ ಲಿಂಬಾಳೆಯವರ ಆತ್ಮಕತೆ 'ಅಕ್ರಮ ಸಂತಾನ'ದ ಆಯ್ದ ಭಾಗ. ಹಸಿದವರನೋವು, ಹಸಿವು ಮನುಷ್ಯನನ್ನು ಕಾಡುವ ಪರಿ ಇಲ್ಲಿ ಅನಾವರಣಗೊಂಡಿದೆ... ದಾರುಣವಾಗಿ. ಇದು ಕಥೆಯಲ್ಲ....

ಹರಕು ಚಿಂದಿ ಕೊಟ್ಟಳು. ನಾನು ಮಸಾಮಾಯಿ ಮನೆಗೆ ಬೆಂಕಿ ಬೇಡಲು ಹೋದೆ. ಚಿಂದಿಯಲ್ಲಿ ಬೆಂಕಿ ತಂದೆ. ಸಂತಾಮಾಯಿ ಚಿಂದಿಯಲ್ಲಿಯ ಬೆಂಕಿ ಊದತೊಡಗಿದಳು. ಹೊಗೆ ಬರತೊಡಗಿತು. ಹೊಗೆ ಹತ್ತಿ ಚಿಂದಿ ಉರಿಯತೊಡಗಿತು. ಚಿಂದಿಯನ್ನು ಒಲೆಯಲ್ಲಿ ಹಾಕಿದಳು. ದಣ ದಣ ಒಲೆ ಹತ್ತಿತು. ಒಲೆಯ ಬೆಳಕಿನಲ್ಲಿ ಭಟ್ಟಿಯವರಂತೆ ಬೆವರು ಸುರಿಸುವ ಸಂತಾಮಾಯಿ ಕಂಡಳು. ಒಲೆ ನನ್ನ ತಲೆಯ ಹಾಗೆ ಉರಿಯತೊಡಗಿತು. ಮನೆ ತುಂಬ ಹೊಗೆ ದಟ್ಟವಾಗಿ ಹಬ್ಬಿತು. ಗಡಿಪಾರು ಮಾಡಿದ ಕೈದಿಗಳಂತೆ ಹುಳುಗಳು ಹೊರಗೆ ಹೊರಟವು. ಹುಳುಗಳ 'ಚಿರ್ ' ಸದ್ದಿನಿಂದ ಮನೆ ತುಂಬಿತ್ತು.

ದಾದಾ ಕಥೆ ಹೇಳುತ್ತಲಿದ್ದ, ದಾದಾನ ಕಥೆ ಅಂದರೆ ಅಡಿಗೆಯಾಗುವವರೆಗೆ ಟೈಂ ಪಾಸ್. ಸಂತಾಬಾಯಿ ರೊಟ್ಟಿ ಬಡಿದಳು, ನಾವು ಊಟಕ್ಕೆ ಕುಳಿತೆವು. ಸೆಗಣಿಯ ಕಾಳಿನ ರೊಟ್ಟಿಯನ್ನು ನಮಗೆ ಕೊಟ್ಟಿದ್ದಳು. ಸೆಗಣಿಯ ಕಾಳಿನ ರೊಟ್ಟಿ ತಾಲಿಪಿಟ್ಟಿನಂತೆ ಕಾಣುತ್ತಿದ್ದವು. ಮಾಯಿ ಅವುಗಳನ್ನು ನಮಗೆ ಕೊಡುತ್ತಿರಲಿಲ್ಲ. ಆ ದಿನ ನಾನು ಜಗಳವಾಡಿ ಇಸಿದುಕೊಂಡೆ. ತುತ್ತು ತುಣಕನ್ನು ಬಾಯಲ್ಲಿ ಇಟ್ಟುಕೊಂಡೆ. ಕಚ ಕಚ ನುರಿಸಿದೆ. ರೊಟ್ಟಿಯಲ್ಲಿ ಸೆಗಣಿಯ ವಾಸನೆ ಬರುತ್ತಿತ್ತು. ತುತ್ತು ನುರಿಸುತ್ತಿರುವಲ್ಲಿ ಸೆಗಣಿ ತಿಂದಂತೆ ಆಗುತ್ತಿತ್ತು. ಗಂಟಲಲ್ಲಿ ಇಳಿಯುತ್ತಿರಲಿಲ್ಲ. ಹಾಗೆ ನುಂಗಿದೆ ಮತ್ತು ಮಾಯಿಯ ತಾಲಿಪಿಟ್ಟು ಆಕೆಗೇ ಕೊಟ್ಟೆ.

ಸಂತಾಮಾಯಿ ಮಾತ್ರ ರೂಢಿಯಂತೆ ಸೆಗಣಿಯ ರೊಟ್ಟಿ ತಿನ್ನುತ್ತಿದ್ದಳು. ಭಟ್ಟಿಯಲ್ಲಿ ಒಳ ಹಾಕಿದರೆ ಸುಟ್ಟು ಹೋಗುವಂತೆ ಆಕೆಯ ಹೊಟ್ಟೆಯಿತ್ತು. ಸಂತಾಮಾಯಿಯ ಕೈ ಯಂತ್ರದಂತೆ ರೊಟ್ಟಿಯ ತುಣುಕನ್ನು ಮುರಿಯುತ್ತಿತ್ತು. ಅದು ಬಾಯಿಗೆ ಬೀಳುತ್ತಿತ್ತು. ಕಪ್ಪು ಹಲ್ಲು ತುತ್ತನ್ನು ನುರಿಸುತ್ತಿದ್ದವು. ಸಂತಾಮಾಯಿಯ ಬಾಯಿ ಅಜಸ್ರ ಕುದಿಯುವ ಬಾಯಲರ್ ಎಂದೆನಿಸುತ್ತಿತ್ತು ನನಗೆ. ಅದೊಂದು ಸಮಸ್ಯೆ ಸಂತಾಮಾಯಿಗೆ ಹೇಸಿಕೆ ಹೇಗೆ ಬರುತ್ತಿರಲಿಕ್ಕಿಲ್ಲ? ಆಕೆಗೆ ಸೆಗಣಿಯ ವಾಸನೆ ಬರುತ್ತಿರಲಿಲ್ಲವೆ? ಕೈಯ ತುತ್ತು ಭಾರವಾಗಿ ಬಾಯಿಗೆ ಹೋಗುತ್ತಿತ್ತು. ಹೊಟ್ಟೆಯಲ್ಲಿ ಸೇರುತ್ತಿತ್ತು. ಹೊಟ್ಟೆಯಲ್ಲಿ ಮಾತ್ರ ಸೆಗಣಿಯ ತಗ್ಗು ಕೆಳಗೆ ಮೇಲೆ ಆಗುತ್ತಿತ್ತು.

ಕವಿತೆ

ತುತ್ತಿನ ಚೀಲ

ನ್ನಬ್ರಹ್ಮದ
ೀಗುಲದಲ್ಲಿ
ಳಗೂ ಬೈಗೂ
ಟ ಭಿಟ ಬೆಂಕಿ
ೂಂಬರ ಪೂಜೆಯು,
ಗೆಯ ಮಂತ್ರ
ಳಿಯ ಎಡೆಯು;
ೊಬ್ಬೆಯ ಗಂಟೆ
ನ್ನ ಬ್ರಹ್ಮದ
ೀಗುಲದಲ್ಲಿ !

ಗ ಬ್ರಹ್ಮದ
ಗ್ಗವಿಯಲ್ಲಿ
ೌನದ ವೀಣೆಗೆ
ಕರುಳಿನ ತಂತಿ
ಮಿಡಿದೂ ಮಿಡಿದೂ
ಮುರಿದವು ಬೆರಳು
ಮಿಡುಕೀ ಮಿಡುಕೀ
ನೊಂದಿತು ಎದೆಯು
ನಾದ ಬ್ರಹ್ಮದ
ಕಗ್ಗವಿಯಲ್ಲಿ !

ಶಬ್ದ ಬ್ರಹ್ಮದ
ಗುಮ್ಮಟದಲ್ಲಿ
ಹಗಲೂ ಇರುಳೂ
ವೇದದ ವಾದ,
ಪಾಪ ಪುಣ್ಯಗಳ
ಜಾಳಿಗೆಯಲ್ಲಿ
ನೇತಿದೆ ಜೋತಿದೆ
ಜೀವದ ಜೇಡ
ಶಬ್ದ ಬ್ರಹ್ಮದ
ಗುಮ್ಮಟದಲ್ಲಿ !

ದೈವುಳ್ಳವರಿಗೆ
ದಯವೇ ಇಲ್ಲ !
ತಿತ್ತಿರೆ ತುಂಬಿದೆ
ಕೂಳಿನ ಕೋಟೆ
ಬಿಡುಗಣ್ಣವರಿಗೆ
ಕಾಣುವುದಿಲ್ಲ
ಅಮೃತ ತೇಗಿನ
ಮದವಂತಹುದು
ಹಸಿದವ ಬಲ್ಲ !
ಹಸಿವೆಯ ಶೂಲ !
ಶಿವಾ ಶಿವಾ ಹೇ !
ಶಿವ ಮಾದೇವಾ
ಅತ್ತಿತು ಕೂಗಿತು
ಚೀರಿತು ಜೀವ

ಬಾಯಂಗಳದಲ್ಲಿ
ಹುಟ್ಟಿದ ಮಾತು
ಮುಗಿಲಿನ ಕಿವಿಯನು
ಮುಟ್ಟಲೆ ಇಲ್ಲ;
ಹಾಡುವ ಸಭೆಯಲಿ
ನರಳುವುದುಂಟೆ?
ಕಿಕ್ಕಿರಿ ತುಂಬಿದೆ
ಭೂಮಿಯ ಕಣಜ
ಕಕ್ಕಸ ಬಡುತಿದೆ
ಬೊಕ್ಕಸದೊಡಲು
ಬಾಳಿಗಿಂತಲೂ
ಕೂಳೇ ಮೇಲೊ?
ಬರಿದೋ ಬರಿದು
ತೆರವೋ ತೆರವೂ
ಬಡವರ ಬಗ್ಗರ
ತುತ್ತಿನ ಚೀಲಾ

ದೇವರದೊಂದು
ಗೋರಿಯ ಕಟ್ಟಿ
ಧರ್ಮದ ಧೂಪಕೆ
ಬೆಂಕಿಯನಿಕ್ಕಿ
ಗಣ ಗಣ ಬಾರಿಸಿ
ಪ್ರಾಣದ ಗಂಟೆಯ
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು
ಗರ್ಜಿಸುತಿಹುದು
ಬಡವರ ಬಗ್ಗರ



ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು !

■ ದ.ರಾ. ಬೇಂದ್ರೆ

ರಶ್ಯಾ ಕ್ರಾಂತಿಯ ಮೂರು ದಶಕಗಳ ನಂತರ ಸಂಭವಿಸಿದ ಚೀನೀ ಕ್ರಾಂತಿ ವಿಶ್ವದ ಮೇಲೆ ಆಳವಾದ ಪ್ರಭಾವ ಬೀರಿತು. ಅದು ಆರಂಭಿಸಿದ ಘಟನಾವಳಿ ಈಗಲೂ ಬಿಚ್ಚಿಕೊಳ್ಳುತ್ತಿದೆ. ಈಗ ಚೀನಾ ಜನತಾ ಗಣತಂತ್ರ ಚೀನೀ ಜನತೆ ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಪಡುತ್ತಾ ಹೊಸ ಮುನ್ನಡೆಗಾಗಿ ತುಡಿಯುತ್ತಿರುವ ಮತ್ತು 21ನೇ ಶತಮಾನದಲ್ಲಿ ಜಾಗತಿಕ ವಿದ್ಯಮಾನಗಳಲ್ಲಿ ಮಹತ್ವದ ಪಾತ್ರ ವಹಿಸಲಿರುವ ಸಂದರ್ಭದಲ್ಲಿ ಚೀನಾ ಕ್ರಾಂತಿಯ 60ನೇ ವಾರ್ಷಿಕೋತ್ಸವ ನಡೆಯುತ್ತಿದೆ.

ಕೊಳ್ಳುವ ಸಾಮರ್ಥ್ಯದ ಹೋಲಿಕೆಯಲ್ಲಿ ವಿಶ್ವದಲ್ಲಿ ಅಮೆರಿಕಾದ ನಂತರ ಅತಿ ದೊಡ್ಡ ಆರ್ಥಿಕ. ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ)ಯನ್ನು ವಿನಿಮಯ ದರದ ಲೆಕ್ಕದಲ್ಲಿ ಅಳೆದರೆ ಅದು ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕ. ವಿಮೋಚನೆಯ ಸಮಯದಲ್ಲಿ ಕೈಗಾರಿಕೆ ಮತ್ತು ಇತರ ಸೂಚ್ಯಂಕಗಳಲ್ಲಿ ಭಾರತಕ್ಕಿಂತ ಹಿಂದುಳಿದಿದ್ದ ಚೀನಾ ಮಾಡಿರುವ ಅದ್ಭುತ ಪ್ರಗತಿಯನ್ನು ಇವು ಸೂಚಿಸುತ್ತವೆ.

ಭೂಸುಧಾರಣೆಗಳು, ಪ್ರಭುತ್ವ-ಪ್ರಾಂ
ಕೈಗಾರಿಕೀಕರಣ ಮತ್ತು ಸಾರ್ವಜನಿಕ ಹೂ
ಆಧರಿಸಿದ ಶಿಕ್ಷಣ ವ್ಯವಸ್ಥೆ ಹಾಗೂ ಸಾ
ವಲಯದ ಬುನಾದಿಯ ಮೇಲೆ
ಸುಧಾರಣೆಗಳನ್ನು ಕೈಗೆತ್ತಿಕೊಂಡಿತು. ಬೆಳೆ
ಖಾಸಗೀ ವಲಯದ ಜೊತೆಗೆ ಸುಧಾರಿತ
ವಲಯ ಹಾಗೂ ಸಾಮೂಹಿಕ ಉದ್ದಿಮೆಗ
ಈಗ ಚೀನಾದಲ್ಲಿ ಕಾಣುತ್ತಿರುವ ಚೈತ

ಯುಗಾಂತರಕಾರೀ ಚೀನೀ ಕ್ರಾಂತಿಯ ಅರವತ್ತು ವರ್ಷಗಳ

ಅರವತ್ತು ವರ್ಷಗಳ ಹಿಂದೆ. ಅಕ್ಟೋಬರ್ 1, 1949ರಂದು ಚೀನಾ ಜನತಾ ಗಣತಂತ್ರದ ರಚನೆಯಾಗಿದೆಯೆಂದು ಘೋಷಿಸಲಾಯಿತು. ಆ ಚಾರಿತ್ರಿಕ ಪ್ರಕಟಣೆಯನ್ನು ಮಾಡುತ್ತಾ ಮಾವೊ ರೆ?ಬ ಡೊಂಗ್ "ಚೀನೀ ಜನತೆ ಎದ್ದು ನಿಂತಿದ್ದಾರೆ" ಎಂದರು. ಈ ಚಾರಿತ್ರಿಕ ಘಟನೆಯ ಪ್ರತಿಫಲನ ಕಳೆದ ಆರು ದಶಕಗಳಲ್ಲಿ ಅನಾವರಣಗೊಳ್ಳುತ್ತಾ ಬಂದಿದೆ.

ಚೀನೀ ಕ್ರಾಂತಿ ಒಂದು ಯುಗಾಂತರಕಾರೀ ಘಟನೆ. ಅಂದು 47.5ಕೋಟಿ ಜನಸಂಖ್ಯೆಯ ಚೀನಾ ಜಗತ್ತಿನ ಅತಿ ದೊಡ್ಡ ದೇಶವಾಗಿತ್ತು. 18ನೆ ಶತಮಾನದ ವರೆಗೆ ಜಗತ್ತಿನ ಅತಿ ದೊಡ್ಡ ಆರ್ಥಿಕವಾಗಿದ್ದ ಈ ಏಶ್ಯನ್ ದೈತ್ಯ 19ನೇ ಶತಮಾನದಿಂದ ಪಾಶ್ಚಿಮಾತ್ಯ ಶಕ್ತಿಗಳ ಮತ್ತು ಜಪಾನಿನ ಅಡಿಯಾಳಾಯಿತು. ಮೊದಲ ಮಹಾಯುದ್ಧದ ನಂತರ ಬ್ರಿಟನ್, ಫ್ರಾನ್ಸ್ಟ ಅಮೆರಿಕಾ ಮತ್ತು ಜಪಾನ್ ಅಲ್ಲಿನ ಪಾಳೇಗಾರಿ ಸೇನಾಪತಿಗಳೊಂದಿಗೆ ಮೈತ್ರಿ ಬೆಳೆಸಿ ತಂತಮ್ಮೊಳಗೆ ಅಧಿಕಾರ ಪ್ರದೇಶಗಳನ್ನು ಹಂಚಿಕೊಂಡರು. ಚೀನಾ ಈ ಪಾಳೇಗಾರೀ ಮತ್ತು ಅರೆ-ವಸಾಹತುಶಾಹೀ ಮಂದಿಯ ಜೀತದಾಳಾಗಿ ನರಳಾಟಕ್ಕೆ ಒಳಗಾಯಿತು. 1921ರಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷ(ಸಿಪಿಸಿ)ದ ರಚನೆ ಪಾಳೆಗಾರಿಕೆ ಮತ್ತು ಅರೆ-ವಸಾಹತುಶಾಹಿಯನ್ನು ವಿರೋಧಿಸುವ ಶಕ್ತಿಗಳ ರಂಗ ಪ್ರವೇಶದ ಸೂಚನೆ ನೀಡಿತು. ಚೀನೀ ಜನತೆಯ ಉದ್ಧಾರದ ಸಮರ ಪಾಳೇಗಾರಿ ಸೇನಾಪತಿಗಳು ಮತ್ತು ವಸಾಹತುಶಾಹೀ ಶಕ್ತಿಗಳ ವಿರುದ್ಧ ಮೂರು ದಶಕಗಳ ಅತ್ಯಂತ ಕಷ್ಟಕರ ಹೋರಾಟಗಳ ಮೂಲಕ ಹಾದು ಬಂದ ಸಮರ. ಜಪಾನೀ ಆಕ್ರಮಣಕೋರರ ವಿರುದ್ಧ ರಾಷ್ಟ್ರೀಯ ಪ್ರತಿರೋಧದ ಮುಖಂಡತ್ವದಲ್ಲಿದ್ದ ಭ್ರಷ್ಟ ಬಲಪಂಥೀಯ ಕ್ಯುಮಿಂಟಾಂಗ್‌ನ್ನು ಪಕ್ಕಕೊತ್ತಿ ಸಿಪಿಸಿ ಅದರ ನೇತೃತ್ವ ಪಡೆಯಿತು. ಜಪಾನಿನ ಶರಣಾಗತಿಯ ನಂತರ ಚೀನೀ ಕ್ರಾಂತಿಯ ಅಂತಿಮ ಅಂಕ ನಡೆದದ್ದು ಜನತಾ ವಿಮೋಚನಾ ಸೇನೆ ಮತ್ತು ಕ್ಯುಮಿಂಟಾಂಗ್ ನಡುವಿನ ಅಂತರ್ಯುದ್ಧದಲ್ಲಿ.

ರಶ್ಯಾ ಕ್ರಾಂತಿಯ ಮೂರು ದಶಕಗಳ ನಂತರ ಸಂಭವಿಸಿದ ಚೀನೀ ಕ್ರಾಂತಿ ವಿಶ್ವದ ಮೇಲೆ ಆಳವಾದ ಪ್ರಭಾವ ಬೀರಿತು. ಅದು ಆರಂಭಿಸಿದ ಘಟನಾವಳಿ ಈಗಲೂ ಬಿಚ್ಚಿಕೊಳ್ಳುತ್ತಿದೆ. ಚೀನಾ ಇಂದು ಜನಗಳ

ಪ್ರಕಾಶ್ ಕಾರಟ್

ಕಮ್ಯುನಿಸ್ಟ ಪಕ್ಷ ಹಾಕಿದ ಬುನಾದಿ

ಈ ಗಮನಾರ್ಹ ಅಭಿವೃದ್ಧಿಯ ಬುನಾದಿಯನ್ನು ಹಾಕಿದ್ದು ತೀವ್ರಗಾಮಿ ಭೂಸುದಾರಣೆಗಳ ಮೂಲಕ ಭೂಮಾಲಕತ್ವವನ್ನು ನಿರ್ನಾಮ ಮಾಡಿದ ಚೀನಾ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ. ಈ ಕಾರ್ಯಕ್ರಮ ಭಾರೀ ಕೈಗಾರಿಕೆಗಳಿಗೆ ಬುನಾದಿ ಹಾಕಿತು ಹಾಗೂ ಜನಗಳಿಗೆ ಮೂಲ ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಂಡಿತು. ರೈತಾಪಿ ಜನಗಳ ಉದ್ಧಾರ ಮತ್ತು ಸ್ವಾವಲಂಬೀ ವಿಧಾನಗಳಿಂದ ಆರ್ಥಿಕವನ್ನು ಕಟ್ಟುವ ಪ್ರಜಾಪ್ರಭುತ್ವ ಕ್ರಾಂತಿಯ ಈ ಚೀನೀ ದಾರಿ ಆಗಷ್ಟೇ ವಸಾಹತುಶಾಹಿಯಿಂದ ಸ್ವತಂತ್ರ ದೇಶಗಳಾಗಿ ಮೂಡಿ ಬರುತ್ತಿದ್ದ ಮೂರನೇ ಜಗತ್ತಿನ ದೇಶಗಳನ್ನು ಅಪಾರವಾಗಿ ಆಕರ್ಷಿಸಿತು. ಚೀನಾದ ಪ್ರಸಕ್ತ ಅಭಿವೃದ್ಧಿಗೆ ಬಂಡವಾಳಶಾಹಿ ಚಾಲಕ ಶಕ್ತಿ ಒದಗಿಸಿದೆ ಎಂದು ಬಡಬಡಿಸುವವರು ಇಂತಹ ಅಭಿವೃದ್ಧಿಯ ಬುನಾದಿಯನ್ನು ಉಪೇಕ್ಷಿಸುತ್ತಾರೆ. ಚೀನಾ

ಬೆಳವಣಿಗೆಯಲ್ಲಿ ಬಹಳ ಮುಖ್ಯವಾಗಿದೆ.
ನವ ಚೀನಾದ ಆರು ದಶಕಗಳ
ಪ್ರಗತಿಯ ಸರಾಗ ದಾರಿಯೇನಲ್ಲ. ಸಾ
ಕ್ರಾಂತಿಯಂತಹ ತಪ್ಪು ತಿರುವುಗಳು
ಉತ್ಪಾತಗಳು ಹಾಗೂ ಅದರ ಹಿಂದಿನ
ಮುನ್ನೆಗೆತದ ತಪ್ಪುಗಳು ಸಂಭವಿಸಿದ
ತಪ್ಪುಗಳನ್ನು ಮತ್ತು ತಪ್ಪು ನೀತಿಗಳನ್ನು
ಅವನ್ನು ಸರಿಪಡಿಸಿಕೊಳ್ಳಲು ಚೀನಾ ಕ
ಪಕ್ಷಕ್ಕೆ ಸಾಧ್ಯವಾಯಿತು. ಒಂದು ಹಿಂದುಳಿದ
ಸಮಾಜವಾದವನ್ನು ಕಟ್ಟುವುದು
ದೀರ್ಘಕಾಲದ ವ್ಯವಹಾರವಾಗುತ್ತದೆ ಎಂ
ಅರಿತುಕೊಂಡಿದೆ. ಕಳೆದ ಎರಡು ದಶಕಗ
ಪ್ರಗತಿ ಹೊಸ ಸಮಸ್ಯೆಗಳನ್ನು ಉಂಟುವ
ಚೀನಾ ಕಮ್ಯುನಿಸ್ಟ್ ಪಕ್ಷದ 17ನೇ ಮಹಾ
ಹೆಚ್ಚುತ್ತಿರುವ ಅಸಮಾನತೆಗಳ- ಆದಾ
ಪ್ರಾದೇಶಿಕವಾದ ಮತ್ತು ನಗರ ಹಾಗೂ ಗ
ಪ್ರದೇಶಗಳ ನಡುವಿನ ಅಸಮಾನತೆಗಳ-ಸಮ

ಪು

ಮಾಧ್ಯಮಗಳ ಕಪೋಲಕಲ್ಪನೆಗಳು

ಚೀನಾದಿಂದ ಭಾರತಕ್ಕೆ ಬೆದರಿಕೆಗಳಿವೆ ಎಂದು ಕಾರ್ಪೊರೇಟ್ ಮಾಧ್ಯಮಗಳ ಮತ್ತು ಸಾಮರಿಕ ತಜ್ಞರ ವಿಭಾಗಗಳು ಭಯ ಹುಟ್ಟಿಸುವ ಪ್ರಯತ್ನಗಳನ್ನು ಮತ್ತೆ ಆರಂಭಿಸಿದ್ದಾರೆ. ಚೀನಾ ಒಂದು ಹಗೆತನದ ಚಟುವಟಿಕೆಗಳ ಸರಣಿಯನ್ನು ಆರಂಭಿಸಿದೆ ಎಂದು ಹೇಳಲಾಗುತ್ತಿದೆ. ಬಲಪಂಥೀಯ ವಲಯಗಳು ಚೀನಾದಿಂದ ಬೆದರಿಕೆ ಇದೆಯೆಂಬ ವಿಷಯವನ್ನು ತಕ್ಷಣವೇ ಎತ್ತಿಕೊಂಡಿವೆ. ಆರೆಸ್ಸೆಸ್ ಮುಖ್ಯಸ್ಥ ತನ್ನ 'ವಿಜಯದಶಮಿ' ಭಾಷಣದಲ್ಲಿ ಚೀನಾದಿಂದ ಬೆದರಿಕೆಯಿದೆಯೆಂದು ಒತ್ತಿ ಹೇಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಚೀನಾದ ಬಗ್ಗೆ ಮಾಧ್ಯಮದಲ್ಲಿ ವ್ಯಾಪಕ ಹಾಗೂ ಉದ್ದೇಶಪೂರ್ವಕ ಅಪಪ್ರಚಾರ ನಡೆಯುತ್ತಿದೆ. ಭಾರತದ ಗಡಿ ಪ್ರದೇಶದಲ್ಲಿ ಚೀನಾ ಪಡೆಗಳಿಂದ ನಿರಂತರ ನುಸುಳುವಿಕೆ ನಡೆಯುತ್ತಿದೆ ಎಂಬ ವರದಿಗಳು ಬರುತ್ತಿವೆ. ಗಡಿಯಲ್ಲಿ ಚೀನಾದ ಪಡೆಗಳು ನಡೆಸಿದ ಗುಂಡಿನ ಕಾಳಗದಲ್ಲಿ ಇಬ್ಬರು ಐಟಿಬಿಪಿ ಜವಾನರು ಗಾಯಗೊಂಡಿದ್ದಾರೆ ಎಂದು ಒಂದು ಮಾಧ್ಯಮ ಸಂಸ್ಥೆ ವರದಿ ಮಾಡಿತು.

ಇಂತಹ ಎಲ್ಲ ವರದಿಗಳು ಒಂದೋ ಆಧಾರರಹಿತ ಅಥವಾ ಅತಿರಂಜಿತ. ಕೇಂದ್ರ ಸರ್ಕಾರದ ವಕ್ತಾರರು ಮತ್ತು ಸೇನಾ ಮುಖ್ಯಸ್ಥರೇ ಇಂತಹ ವರದಿಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ, ಗಡಿಯಲ್ಲಿ ಇಂತಹ ಯಾವುದೇ ಗುಂಡಿನ ದಾಳಿ ನಡೆದಿಲ್ಲ ಎಂಬುದನ್ನು ದೃಢಪಡಿಸಿದ್ದಾರೆ. ಅದಕ್ಕೂ ಮಿಗಿಲಾಗಿ, ಭಾರತ ಮತ್ತು ಚೀನಾ ಸರ್ಕಾರಗಳೆರಡೂ ಹೇಳಿಕೆ ನೀಡಿ, ಗಡಿಯಲ್ಲಿ ಯಾವುದೇ ಆತಂಕದ ಪರಿಸ್ಥಿತಿ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿವೆ.

ಸ್ವಾಗತಾರ್ಹ ಬೆಳವಣಿಗೆ

ಚೀನಾ ಮತ್ತು ಭಾರತ ನಡುವಿನ ಸಂಬಂಧವನ್ನು ಸಹಜಸ್ಥಿತಿಗೆ ತರುವುದು ಮತ್ತು ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ಪ್ರಕ್ರಿಯೆ ಆರಂಭವಾದದ್ದು 1988ರ ರಾಜೀವ್ ಗಾಂಧಿ ಚೀನಾ ಭೇಟಿ ವೇಳೆ. ಅಲ್ಲಿಂದ ಈಚೆಗೆ ಎರಡೂ ದೇಶಗಳ ನಡುವಿನ ಬಾಂಧವ್ಯವನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಸತತವಾಗಿ ಅಧಿಕಾರಕ್ಕೆ ಬಂದ ಕೇಂದ್ರ ಸರ್ಕಾರಗಳು ಮುಂದುವರಿಸಿವೆ. ಅದರಲ್ಲೂ ಮುಖ್ಯವಾಗಿ ಬಗೆಹರಿಯದೆ ಬಾಕಿ ಇರುವ ಗಡಿ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಲು ಮುತುವರ್ಜಿ ವಹಿಸಿವೆ.

ಎರಡೂ ದೇಶಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಭಾರತ ಮತ್ತು ಚೀನಾ ಪರಸ್ಪರ ಸಹಕಾರ ನೀಡಿವೆ. ಇದು ಸಹಜ ಪ್ರಕ್ರಿಯೆ ಕೂಡ. ಈ ಬೆಳವಣಿಗೆಗಳು ನಾಟಕೀಯವಾಗಿ ಉಭಯ ದೇಶದ ನಡುವಿನ ವ್ಯಾಪಾರ ಸಂಬಂಧವನ್ನು ಬೆಳೆಸುವಲ್ಲಿ ಗಣನೀಯ ಪಾತ್ರ ವಹಿಸಿದೆ. 2008ರಲ್ಲಿ ವಹಿವಾಟಿನ ಪ್ರಮಾಣ 5200 ಕೋಟಿ ರೂ.ಗಳು. 2010ರಲ್ಲಿ 4000 ಕೋಟಿ ರೂ.ಗಳ ವಹಿವಾಟು ನಡೆಸಬೇಕೆಂಬ ಗುರಿಯನ್ನು 2008ರಲ್ಲೇ ಮೀರಿ ಸಾಧನೆ ಮಾಡಲಾಗಿದೆ. ಹಲವು ದೃಷ್ಟಿಕೋನಗಳಿಂದ ಎರಡೂ ದೇಶಗಳ ನಡುವೆ ನಡೆದ ವ್ಯಾಪಾರ-ವಹಿವಾಟಿನಲ್ಲಿ ಕಂಡುಬಂದ ಈ ಪ್ರಗತಿ ಅತಿಪ್ರಾಮುಖ್ಯವಾಗಿದೆ.

ವಿಶ್ವದ ಪ್ರಮುಖ ಅಭಿವೃದ್ಧಿಶೀಲ ದೇಶಗಳಾದ ಭಾರತ ಮತ್ತು ಚೀನಾ, ವಿಶ್ವ ವ್ಯಾಪಾರ ಸಂಘಟನೆಯ ಹಲವು ಸುತ್ತಿನ ಮಾತುಕತೆಗಳು ಮತ್ತು ಹವಾಮಾನ ವೈಪರೀತ್ಯ ಮುಂತಾದ ಮಹತ್ವ ವಿಷಯಗಳಲ್ಲಿ ಪರಸ್ಪರ ಸಹಕಾರ ನೀಡುವುದು ತೀರಾ ಅಗತ್ಯ. ಈ ವಿಷಯವನ್ನು ಉಭಯ ದೇಶಗಳೂ ಅರ್ಥಮಾಡಿಕೊಂಡಿವೆ. ವಿಶ್ವದ ಎಲ್ಲ ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿಗಳನ್ನು ಈ ಮೂಲಕ ಕಾಪಾಡಿಕೊಳ್ಳುತ್ತಿದೆ.

ಭಾರತ, ರಷ್ಯಾ, ಬ್ರಿಜಿಲ್ ವ
ಚೀನಾವನ್ನೊಳಗೊಂಡ ಬಿಆರ್ಐಸಿ ವ
ಇತ್ತೀಚಿಗೆ ಶೃಂಗಸಭೆ ಸೇರಿತ್ತು. ಅಲ್ಲದೆ, ಭ
ರಷ್ಯಾ, ಚೀನಾ ದೇಶಗಳ ತ್ರಿಪಕ್ಷ
ಮಾತುಕತೆಗಳೂ ಯಶಸ್ವಿಯಾಗಿ ನಡೆದವು. ಬ
ದೊಡ್ಡಣ್ಣನೆನಿಸಿದ ಅಮೆರಿಕದ ಕಪಿಮುಷ್ಟಿಂ
ಅಂತಾರಾಷ್ಟ್ರೀಯ ಹಣಕಾಸು ವ್ಯ
ಕಳಚಿಕೊಳ್ಳುತ್ತಿರುವುದು ಮತ್ತು ಬಹುಧ್ರು
ವ್ಯವಸ್ಥೆಯತ್ತ ಜಗತ್ತು ಮುನ್ನಡೆಯುತ್ತಿರುವ
ಒಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ

ಅಮೆರಿಕಾ-ಪರ ಲಾಬಿಗಳಿಗೆ ಅಪಥ್ಯ

ಭಾರತ ಮತ್ತು ಚೀನಾ ದೇಶಗಳ ನಡ
ಸಂಬಂಧವನ್ನು ಹದಗೆಡಿಸುವ ಕೆಲ ಮಾಧ್ಯ
ಉದ್ದೇಶಪೂರ್ವಕ ಪ್ರಯತ್ನವನ್ನು ನಾವ
ದೃಷ್ಟಿಯಿಂದ ನೋಡಬೇಕು. ಅಮೆರಿಕ ಜೊ
ಭಾರತದ ವ್ಯೂಹಾತ್ಮಕ ಮೈತ್ರಿಯ
ಗಟ್ಟಿಗೊಳಿಸಬೇಕೆಂಬ ಉದ್ದೇಶದಿಂದ
ಲಾಬಿಗಳು ದೇಶದೊಳಗೆ ಕಾರ್ಯಾಚರಿಸ
ಈ ಲಾಬಿಗಳಿಗೆ ಚೀನಾದೊಂದಿಗಿನ ದ
ಸಂಬಂಧ ಅಪಥ್ಯವಾಗಿದೆ. ಅದಕ್ಕೆ ಮೊಸರಲ
ಹುಡುಕುವ ಪ್ರಯತ್ನ ಮುಂದುವರಿಸಿವೆ.

'ಭಾರತ - ಭಾರತಿ' ಪುಸ್ತಕ ಸಂಪದ

ಆರ್‌ಎಸ್‌ಎಸ್‌ನ ನೀಚ ವಂಚನೆಯ ಮುಖಗಳು

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ನ 'ರಾಷ್ಟ್ರೋತ್ಥಾನ ಸಾಹಿತ್ಯ'ದ 'ಭಾರತ-ಭಾರತಿ' ಪುಸ್ತಕ ಸಂಪದದ ಸು.300 ಪುಸ್ತಕಗಳನ್ನು ರಾಜ್ಯದ ಶಾಲೆಗಳಲ್ಲಿ ಖರೀದಿಸಬೇಕೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿಬಿಟ್ಟಿದೆ. ಈ ಪುಸ್ತಕ ದೇಶದ ಹೆಮ್ಮೆಯ ಹೋರಾಟಗಾರರನ್ನು ಪರಿಚಯಿಸುವ 'ವಿಶಿಷ್ಟ' ಪರಿ ಹೀಗಿದೆ...

ಭಗತ್‌ಸಿಂಗ್‌ನಲ್ಲಿ 'ಕ್ರಾಂತಿ'ಇಲ್ಲ ಅಂಬೇಡ್ಕರ್‌ರಲ್ಲಿ 'ಮನು' ಇಲ್ಲ

ಆರೆಸ್ಸೆಸ್ ಪುಸ್ತಕಗಳೆಂದರೆ ಹಿಂದುತ್ವ ಪರವಾದ ಹಾಗೂ ಅನ್ಯ ಮತ ದ್ವೇಷಿಯಾದ ಮತಾಂಧ ವಿಚಾರಧಾರೆ ಎಂಬುದು ನಿರೀಕ್ಷಿತವೇ. ಆರೆಸ್ಸೆಸ್ ವಿಚಾರ ಧಾರೆ ಎಂದರೆ ಅದು ಎಂತಹ ವಂಚಕತನದಿಂದ ಕೂಡಿದ್ದು ಮತ್ತು ಅದು ಹೇಗೆ ಆಳುವ ಶೋಷಕ ವರ್ಗದ ದೃಷ್ಟಿಕೋನದ ಸಿಹಿ ಲೇಪಿತ ವಿಷದ ಗುಳಿಗೆ ಎಂಬುದನ್ನು ಅರ್ಥಮಾಡಿ ಕೊಳ್ಳಲು ಸ್ವಲ್ಪ ಸೂಕ್ಷ್ಮ ಗ್ರಹಿಕೆ ಮತ್ತು ಎಚ್ಚರದ ಓದು ಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಶಬ್ದಾಂಡಬರದ ಮಂಕುಬೂದಿ ಮುಗ್ಧ ಓದುಗರ ಗಮನಕ್ಕೆ ಬರದೇ ಹೋಗುವ, ಸಂಭವವಿದೆ. ಉದಾಹರಣೆಗಾಗಿ ಇಲ್ಲಿ ಎರಡೊಂದು ಪುಸ್ತಕಗಳನ್ನು ಪರಿಶೀಲಿಸಬಹುದು.

ಈ ಸರಣಿಯು 16 ನಂಬರಿನ 'ಭಗತ್‌ಸಿಂಗ್' ಎಂಬ ಹೆಸರಿನ ಕಿರುಪುಸ್ತಕವನ್ನು 'ಈಶ್ವರ ಚಂದ್ರ' ಬರೆದಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾಟದ ಪುಟಗಳನ್ನು ತಿರುವಿದರೆ ನೂರಾರು, ಸಾವಿರಾರು ಜನ ಸ್ವಾತಂತ್ರ್ಯ ಹೋರಾಟಗಾರರು, ಹಲವಾರು ಜನ 'ಕ್ರಾಂತಿಕಾರಿ' ಎನಿಸಿಕೊಂಡವರು ಸಿಗುತ್ತಾರೆ. ಅವರೆಲ್ಲರ ನಡುವೆ - ಅವರೆಲ್ಲನ್ನೂ ಮೀರಿದ ಉನ್ನತವಾದ ಬದುಕು-ಹೋರಾಟ, ತ್ಯಾಗ, ಭಗತ್ ಸಿಂಗ್ ಮತ್ತು ಸಂಗಾತಿಗಳದ್ದು. ಇದಕ್ಕೆ ಮೂಲ ಕಾರಣ. ಬ್ರಿಟಿಷರ ಸುಲಿಗೆ ಮಾತ್ರವಲ್ಲದೇ ಭಾರತೀಯ ಸಮಾಜದ ಬಗೆಗೆ, ಅದರಲ್ಲಿ ಭಾರತೀಯ ಆಳುವ ವರ್ಗಗಳಿಂದಾಗುತ್ತಿದ್ದ ಇಲ್ಲಿನ ತೀವ್ರ ಅನ್ಯಾಯ, ಅಸಮಾನತೆ , ಶೋಷಣೆಗಳ ಬಗೆಗೆ ಭಗತ್‌ಸಿಂಗ್ ಮತ್ತು ಸಂಗಾತಿಗಳಿಗೆ ಇದ್ದ ನಿಖರವಾದ ವಿಶ್ಲೇಷಣಾತ್ಮಕ ದೃಷ್ಟಿಕೋನ, ಮತ್ತು ವ್ಯವಸ್ಥೆಯನ್ನು ಬದಲಿಸಬೇಕೆಂಬ ತೀವ್ರವಾದ ತುಡಿತ ಮತ್ತು ಅಂತಹ ಕ್ರಾಂತಿಕಾರಿ ಸಿದ್ಧಾಂತ.

48 ಪುಟಗಳ ಇಡೀ ಪುಸ್ತಕವನ್ನು ಜಾಲಾಡಿದರೂ ನಿಮಗೆಲ್ಲೂ ಭಗತ್‌ಸಿಂಗ್‌ರ ಈ ವಿಚಾರದ ಕುರಿತು ಒಂದು ಶಬ್ದ ಸಿಗುವುದಿಲ್ಲ. ಶೋಷಣೆ, ಅಸಮಾನತೆ ಎಂಬ ಒಂದೇ ಪದ ಇಲ್ಲಿಲ್ಲ.

ಪುಸ್ತಕವು ಭಗತ್‌ಸಿಂಗ್‌ಗೆ ನೀಡುವ ಸ್ಥಾನ ಒಬ್ಬ ಸ್ವಾತಂತ್ರ್ಯ ಹೋರಾಟಗಾರನದು ಅಷ್ಟೇ. ಆತ ಒಬ್ಬ 'ಕ್ರಾಂತಿಕಾರಿ'. ಇಲ್ಲಿ ಕ್ರಾಂತಿಕಾರಿ ಎಂದರೆ ಆತ ಶಸ್ತ್ರ ಬಲದಿಂದ ಬ್ರಿಟಿಷರನ್ನು ಹೊರ ಹಾಕಲು ಪ್ರಯತ್ನಿಸಿದವ ಅಂತ ಅಷ್ಟೇ. ವಿಚಾರಧಾರೆಗೆ ಏನೂ ಇಲ್ಲ.

ಇಲ್ಲೇ ವಂಚನೆ ಇರುವುದು. ದೇಶದ ಕೋಟಿ ಕೋಟಿ ಜನ ರೈತರು, ಕಾರ್ಮಿಕರು ದುಡಿಯುವ ಜನರನ್ನು ಶೋಷಿಸುತ್ತಿರುವ ವ್ಯವಸ್ಥೆಯ ಬಗೆಗೆ ಅದರಲ್ಲಿ ಬ್ರಿಟಿಷರು ಮಾತ್ರವಲ್ಲ ಭಾರತೀಯ ಶೋಷಕರು ಮತ್ತು ಅವರ ಪಾತ್ರ ಬಗೆಗೆ ಭಗತ್‌ಸಿಂಗ್‌ಗೆ ಸ್ಪಷ್ಟತೆ ಇತ್ತು.

'ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಅಲ್ಲ. ಪುರಾತನವಾದ ಶೋಷಕ ವ್ಯವಸ್ಥೆಯನ್ನು ಬದಲಿಸದಿದ್ದರೆ ಜನರ ಬದುಕು ಹಾಗೇ ಉಳಿಯುತ್ತದೆ' ಎಂಬುದು ಭಗತ್‌ಸಿಂಗ್‌ನ ವಿಚಾರವಾಗಿತ್ತು.

ಏಪ್ರಿಲ್ 8, 1926ರಂದು ಭಗತ್‌ಸಿಂಗ್ ಮತ್ತು ರಾಜಗುರು ದೇಶದ ಶಾಸನ ಸಭೆಯಲ್ಲಿ



ಬಾಂಬ್ ಹಾಕಿ ಬ್ರಿಟಿಷ್ ಸರ್ಕಾರವನ್ನು ಬೆಚ್ಚಿ ಬೀಳಿಸಿದ್ದು ಯಾಕಾಗಿ? ಅಂದು ಕಾರ್ಮಿಕ ಮುಷ್ಕರವನ್ನು ನಿಷೇಧಿಸುವ ಕರಾಳ ಶಾಸನವನ್ನು ಬ್ರಿಟಿಷರ ಸರ್ಕಾರ ತರಲು ಹೊರಟಿದ್ದರಿಂದಾಗಿ ಅಲ್ಲವೇ? ಭಾರತ-ಭಾರತಿ ಪುಸ್ತಕವು 'ದೇಶಕ್ಕೆ ತೊಂದರೆ ಆಗಬಹುದಾದ ಎರಡು ಶಾಸನ' ಎಂದು ಕೈತೊಳೆದುಕೊಳ್ಳುತ್ತಿದೆ ಹೊರತಾಗಿ ಯಾವ ಶಾಸನ ಯಾಕೆ ಎಂದು ಹೇಳುವುದಿಲ್ಲ.

'ಕ್ರಾಂತಿ ಎಂದರೆ ಬಾಂಬು, ಬಂದೂಕುಗಳ ಆರಾಧನೆಯಲ್ಲ' ಎಂದು ಭಗತ್‌ಸಿಂಗ್ ಖಚಿತವಾಗಿ ಸಾರಿದ್ದಾರೆ. ಕ್ರಾಂತಿ ಅಂದರೆ ವ್ಯವಸ್ಥೆಯ ಮೂಲಭೂತ ಬದಲಾವಣೆ. ಈ ಬಗ್ಗೆ ಪುಸ್ತಕದಲ್ಲಿ ಏನು ಇಲ್ಲ.


ಕ್ರಾಂತಿ ಪಕ್ಷ, ಕ್ರಾಂತಿ, ಕೆಂಪು ಕರಪತ್ರ... ಇಂತಹ ಮಾತುಗಳು ಪುಸ್ತಕದಲ್ಲಿ ಅಲ್ಲಲ್ಲಿ ಪ್ರಸ್ತಾಪವಾಗಿದ್ದರೂ, ಅದು ಮನಸಿಲ್ಲದ ಮನಸ್ಸಿನಲ್ಲಿ ಬರೆದ ಬರಹ ಎಂಬುದು ಯಾರಿಗಾದರೂ ತಿಳಿಯುತ್ತದೆ.

ಬಾಲ್ಯದ ಭಗತ್‌ಸಿಂಗ್‌ನ 'ಉಪನಯನ'ದ ಬಗೆಗೆ ತಪ್ಪದೇ ಹೇಳುವ ಪುಸ್ತಕ ಭಗತ್‌ಸಿಂಗ್ ಮುಂದೆ ಬೆಳೆಸಿಕೊಂಡ 'ವೈಚಾರಿಕತೆ' ಬಗೆಗೆ ಏನೊಂದು ಹೇಳುವುದಿಲ್ಲ. ಭಗತ್‌ಸಿಂಗ್ ಸಿಖ್ ಸಂಪ್ರದಾಯದ ತನ್ನ ಗಡ್ಡ ಕೂದಲು ತೆಗೆದ ಬಗೆಗೆ 'ಪೋಲಿಸರಿಗೆ ತನ್ನ ಗುರುತು ಸಿಗಬಾರದೆಂದು' ಹಾಗೆ ಮಾಡಿದ ಎನ್ನುತ್ತದೆ ಪುಸ್ತಕ. ಭಗತ್‌ಸಿಂಗ್‌ರ 'ನಾನೇಕೆ ನಾಸ್ತಿಕ' ಎಂಬ ಬರಹದ ಬಗೆಗಂತೂ ಇಲ್ಲಿ ಚಕಾರವೂ ಇಲ್ಲ.

'ಮನುಸ್ಮೃತಿ'ಯನ್ನು ಮರೆ ಮಾಚುವ ಆರೆಸ್ಸೆಸ್ ತಂತ್ರ

ಇನ್ನು ಸರಣಿಯ 33ನೇ ಪುಸ್ತಕ ಅಂಬೇಡ್ಕರ್‌ರವರನ್ನು ಕುರಿತಾದದ್ದು. ಪುಸ್ತಕವನ್ನು ದೋ.ಶ್ರೀ ಶೇಷರಾಘವಚಾರ್ ಬರೆದಿದ್ದಾರೆ.

ಡಾ: ಬಿ.ಆರ್.ಅಂಬೇಡ್ಕರ್‌ರ ಬದುಕು, ಹೋರಾಟಗಳ ಬಗೆಗಿನ ಪುಸ್ತಕದಲ್ಲಿ ಭಾರತದ ಸಮಾಜಕ್ಕೆ ಅಂಟಿದ ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯತೆಯ ವಿಚಾರಗಳನ್ನು ಮರೆ ಮಾಚಲು ಸಾಧ್ಯವೇ? ಪೂರ್ಣ ಸಾಧ್ಯವಿಲ್ಲ. ಆದರೆ ಸಂಘ ಪರಿವಾರದ ಮೇಧಾವಿತನ, ಚಾತುರ್ಯಗಳ ತಂತ್ರಗಳ ದಿಗ್ದರ್ಶನವಾಗಬೇಕಾದರೆ ಈ ಪುಸ್ತಕವನ್ನು ಅರ್ಥ ಮಾಡಿಕೊಳ್ಳಬೇಕು.



ಅಂಬೇಡ್ಕರರು ಬಾಲ್ಯದಲ್ಲಿ ಅನುಭವಿಸಿದ ಕೆಲವು ಅಸ್ಪೃಶ್ಯತೆಯ ಅಪಮಾನಗಳನ್ನು ಪ್ರಸ್ತಾಪಿಸಿ 'ಮಹರ್ ಜಾತಿಯವರ ಹಾಗೆಯೇ ಭಾರತದಲ್ಲಿ ಇತರ ಹಲವು ಜಾತಿಗಳವರು 'ಅಸ್ಪೃಶ್ಯರು' ಮುಟ್ಟಬಾರದು ಎನ್ನಿಸಿಕೊಂಡು ನೂರಾರು ವರ್ಷಗಳ ಕಾಲ ಅನ್ಯಾಯಕ್ಕೆ ತುತ್ತಾದರು' ಎಂದು ಸಮಸ್ಯೆಯನ್ನು ಗುರುತಿಸುವ ಪುಸ್ತಕದಲ್ಲಿ ಅಸ್ಪೃಶ್ಯತೆಯ ಘೋರ ವಾಸ್ತವ ಮುಖವನ್ನು ಪರಿಚಯಿಸುವ ಮಾತುಗಳೇ ಇಲ್ಲ.

ಈ ಜಾತಿಯುತೆ, ಅಸ್ಪೃಶ್ಯತೆಗಳ ಮೂಲವನ್ನು, ಕಾರಣಗಳನ್ನು ಕಂಡುಕೊಳ್ಳುವ ಪರಿಯಂತೂ ಆರೆಸ್ಸೆಸ್‌ನ ಘನತೆಗೆ ತಕ್ಕಂತೆಯೇ ಇದೆ. 'ವೇದಗಳ ಕಾಲದಲ್ಲಿ ಜಾತಿ ಪದ್ಧತಿ ಇರಲಿಲ್ಲ ಅಸ್ಪೃಶ್ಯತೆ ಇರಲಿಲ್ಲ. ಇವು ಹಿಂದೂ ಸಮಾಜದಲ್ಲಿ ಯಾವಾಗ ಹೇಗೆ ಸೇರಿತು? ಖಚಿತವಾಗಿ ತಿಳಿಯದು' ಎನ್ನುತ್ತದೆ ಪುಸ್ತಕ.

ಅಂಬೇಡ್ಕರ್‌ರ ಜೀವನ, ಚರಿತ್ರೆಯನ್ನು ಬರೆಯುವವರು ಯಾರಾದರೂ 'ಮನುಸ್ಮೃತಿ'ಯನ್ನು ಕುರಿತು ಅಂಬೇಡ್ಕರರ ಸಕಾರಣವಾದ ಸಿಟ್ಟು, ಆಕ್ರೋಶವನ್ನು ದಾಖಲಿಸದಿರಲು ಸಾಧ್ಯವೇ? 'ಮನುಸ್ಮೃತಿ'ಯನ್ನು ಸುಟ್ಟ ಐತಿಹಾಸಿಕ ಘಟನೆಯನ್ನು ಮರೆಮಾಚುವುದು ಸಾಧ್ಯವೇ? ಸಾಧ್ಯ ಅದು ಆರೆಸ್ಸೆಸ್‌ನಿಂದ ಮಾತ್ರ ಸಾಧ್ಯ.

ಆರೆಸ್ಸೆಸ್‌ನ ನೀಚತನ, ಠಕ್ಕುತನ, ಆತ್ಮವಂಚಕತನ ಯಾವ ಪ್ರಮಾಣದ್ದು ಎಂದು ತಿಳಿಯಲು ಇದೊಂದೇ ಉದಾಹರಣೆ ಸಾಕು. ಆರ್ಯರ ಮೂಲದ ಬಗೆಗೆ, ಇತಿಹಾಸದಲ್ಲಿ ಭಾರತದ ಮೇಲಿನ ವಿದೇಶಿ ದಾಳಿಗಳ ಬಗೆಗೆ ಅಂಬೇಡ್ಕರರ ವಿಚಾರ ಎಂದು ದೊಡ್ಡ ದೊಡ್ಡ ಉದ್ಧರಣೆಗಳನ್ನು ನೀಡುವ ಪುಸ್ತಕದಲ್ಲಿ ಅಪ್ಪಿತಪ್ಪಿಯೂ ಎಲ್ಲಿಯೂ 'ಮನುಸ್ಮೃತಿ' ಎಂಬ ಒಂದೇ ಶಬ್ದ ಕೂಡ ನುಸುಳಿಲ್ಲ, ಹಿಂದೂ ಧರ್ಮದ ಅಭಿನ್ನ ಅಂಗವಾದ ವರ್ಣಾಶ್ರಮ ಧರ್ಮ, ಜಾತಿ ಪದ್ಧತಿ ಅದರ ಮುಂದುವರಿದ ರೂಪವಾದ ನೀಚ ಅಸ್ಪೃಶ್ಯತೆಯ ಕುರಿತು, ಇವನ್ನೊಳಗೊಂಡ ಹಿಂದೂ ಧರ್ಮದ ಕುರಿತು ಅಂಬೇಡ್ಕರ್ ಮಾತುಗಳು ಅಕ್ಷರಶಃ ಗುಡುಗು-ಸಿಡುಲುಗಳಂತಿವೆ. ಅಂತಹ ಮಾತಿನ ಒಂದೇ ಒಂದು ತುಣುಕು ಇಲ್ಲಿ ಕಾಣ ಸಿಗುವುದಿಲ್ಲ. ಮನುಸ್ಮೃತಿಯನ್ನು ಸಾಮೂಹಿಕವಾಗಿ ಸುಟ್ಟು ತಮ್ಮ ಆಕ್ರೋಶವನ್ನು ತೋರಿದ ಅಂಬೇಡ್ಕರ್‌ರ ಹೋರಾಟದ ಬಗ್ಗೆಯೂ ಇಲ್ಲ.

ಕೆಲವು ನಿರ್ದಿಷ್ಟ ಸಮುದಾಯವನ್ನು ಸಮಾಜ ಅಸಹ್ಯಪಡುವಂತಹ ಕೆಲಸಗಳನ್ನು ಮಾಡುವಂತೆ ಕಡ್ಡಾಯ ಮಾಡುವುದು, ಅವರ ದುಡಿಮೆಯನ್ನು ಅತ್ಯಂತ ಅಗ್ಗವಾಗಿ ಅಥವಾ ಯಾವ ಪ್ರತಿಫಲವನ್ನು ನೀಡದೇ ದೋಚುವುದು, ಈ ಶ್ರಮಿಕರು, ತಾವು ಸಂಪತ್ತನ್ನು ಉತ್ಪಾದಿಸಿದರೂ, ಸೇವೆಯನ್ನು ಮಾಡಿದರೂ ಸಮಾಜದಲ್ಲಿ ಸಂಪತ್ತಿನಿಂದ, ಆಸ್ತಿಪಾಸ್ತಿಯನ್ನು ಹೊಂದುವ ಅವಕಾಶದಿಂದ ಅವರನ್ನು ವಂಚಿಸುವುದು ಈ ಜಾತಿ- ಅಸ್ಪೃಶ್ಯತೆಯ ಮೂಲ ಉದ್ದೇಶ ಎಂಬುದನ್ನು ಆರೆಸ್ಸೆಸ್ ಮರೆ ಮಾಚಬಯಸುತ್ತದೆ.

ಅಸ್ಪೃಶ್ಯತೆಯನ್ನು ಮುಂದುವರಿಸುವವರನ್ನು ಈ ಪುಸ್ತಕವು 'ಹಿಂದಿನ ಪದ್ಧತಿಗೆ ಕಟ್ಟುಬಿದ್ದ ಹಿಂದುಗಳು' ಎನ್ನುತ್ತದೆ. ಅಸ್ಪೃಶ್ಯತೆ, ಜಾತೀಯತೆ ಆಚರಿಸುವ ಶೂದ್ರರು, ಇತರ ಕೆಳಸಮುದಾಯುದವರಿಗೆ ಕೆಲವೊಮ್ಮೆ ಈ ಮಾತು ಅನ್ವಯಿಸಬಹುದೇನೋ? ಆದರೆ ಉದ್ದೇಶಪೂರ್ವಕವಾಗಿ ಸ್ಮೃತಿ, ಶಾಸ್ತ್ರ, ಗ್ರಂಥಗಳನ್ನು ರಚಿಸಿ ಅದರಲ್ಲಿ, ಜಾತಿ, ಅಸ್ಪೃಶ್ಯತೆಯ ನೇರಾ ನೇರ ಕಟ್ಟಳೆಗಳು, ನಿರ್ಬಂಧಗಳನ್ನು ವಿಧಿಸಿದವರು, ಮತ್ತು

ಪುಟ 14ಕ್ಕೆ

ದಕ್ಷಿಣ ಕನ್ನಡ :

ಭ್ರಷ್ಟಾಚಾರದ ಮೂರು ಮುಖಗಳು

'ಪ್ರಜ್ಞಾವಂತ ನಾಗರೀಕರ ಊರು' ಎಂದು ಕರೆಸಿಕೊಳ್ಳುವ ಮಂಗಳೂರಿನಲ್ಲಿ ಇರತಕ್ಕಂಥ ಕಛೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ತೀವ್ರತೆಯನ್ನು ನೋಡಿದರೆ ಮೇಲೆ ಉಲ್ಲೇಖಿಸಿದ ಮಾತು ನಿಜವಾ? ಅನ್ನೋ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಬಹಳ ಪ್ರಮುಖವಾಗಿ ಇಲ್ಲಿನ ಮೂರು ಮುಖ್ಯ ಕಛೇರಿಗಳನ್ನು ಮತ್ತು ಅವುಗಳ ಕಾರ್ಯಶೈಲಿಯನ್ನು ಡಿವೈಎಫ್ಐ ಸಂಘಟನೆ ಅಭ್ಯಸಿಸಿದೆ.

1. ಮಂಗಳೂರು ಮಹಾನಗರ ಪಾಲಿಕೆ
2. ಮಂಗಳೂರು ತಾಲ್ಲೂಕು ಕಛೇರಿ
3. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ

ಮಂಗಳೂರು ಮಹಾನಗರ ಪಾಲಿಕೆ

ಕಳೆದ 25 ವರ್ಷಗಳಿಂದ ನಿರಂತರವಾಗಿ ಕಾಂಗ್ರೆಸ್ ಆಡಳಿತದಲ್ಲಿದ್ದ ನಗರ ಪಾಲಿಕೆ ಈವಾಗ ಭಾರತೀಯ ಜನತಾಪಕ್ಷದ ತೆಕ್ಕೆಯಲ್ಲಿದೆ. ಈ ಎರಡೂ ಪಕ್ಷಗಳ ಆಡಳಿತಾವಧಿಯಲ್ಲಿ ಇಲ್ಲಿ ನಡೆದಿರತಕ್ಕಂಥ ತೀವ್ರತರನಾದ ಭ್ರಷ್ಟಾಚಾರಕ್ಕೆ ಕಡಿವಾಣವೇ ಇಲ್ಲದಂತಾಗಿದೆ. ಇಲ್ಲಿನ ಬಂಡವಾಳಶಾಹಿ ಗುತ್ತಿಗೆದಾರರ ಪರವಾಗಿ ನಿಂತಿರುವ ಅಧಿಕಾರಿಗಳು ನಗರಪಾಲಿಕೆಯಲ್ಲಿರುವ ಅನುದಾನವನ್ನು ಹಂಚಿಕೊಳ್ಳುವಲ್ಲಿ ಶಾಮೀಲಾಗಿದ್ದಾರೆ. ಮಾತ್ರವಲ್ಲದೆ ಜನಪ್ರತಿನಿಧಿಗಳ ರಕ್ಷಣೆಯೂ ಇವರಿಗಿದೆ. ಇಲ್ಲಿರತಕ್ಕಂಥ ಸುಮಾರು 24 ಬಹುಮಹಡಿಕಟ್ಟಡಗಳು ನಗರ ಪಾಲಿಕೆಯ ಕಾನೂನು ವ್ಯಾಪ್ತಿಯನ್ನು ಮೀರಿ ನಿಯಮಬಾಹಿರವಾಗಿ ನಿರ್ಮಿಸಿರುವಂಥವುಗಳು. ಶಮೀರಶುಕ್ಲರವರ ವರ್ಗಾವಣೆ ಬಳಿಕ ಪ್ರಭಾರ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದ ಪಿ.ಜಿ.ರಮೇಶ್‌ರವರು ಬಾಕಿ ಉಳಿದಿದ್ದ 298 ಕಡತಗಳನ್ನು ಎರಡೇ ದಿನಗಳಲ್ಲಿ ಸಹಿ ಮಾಡಿ ವಿವಾದ ಸೃಷ್ಟಿಸಿದ್ದರು. ಈ ಕಡತಗಳಲ್ಲಿ ನಿಯಮಬಾಹಿರವಾಗಿ ನಿರ್ಮಿಸಿರುವಂಥವುಗಳು. ಶಮೀರ ಶುಕ್ಲ ರವರ ವರ್ಗಾವಣೆ ಬಳಿಕ ಪ್ರಭಾರ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದ ಪಿ.ಜಿ.ರಮೇಶ್‌ರವರು ಬಾಕಿ ಉಳಿದಿದ್ದ 298 ಕಡತಗಳನ್ನು ಎರಡೇ ದಿನಗಳಲ್ಲಿ ಸಹಿ ಮಾಡಿ ವಿವಾದ ಸೃಷ್ಟಿಸಿದ್ದರು. ಈ ಕಡತಗಳಲ್ಲಿ ನಿಯಮಬಾಹಿರವಾಗಿ ನಿರ್ಮಾಣಗೊಂಡ 24 ಬಹುಮಹಡಿ ಕಟ್ಟಡಗಳ ಕಡತಗಳು ಇದ್ದವು ಅನ್ನೋದು ಗಮನಾರ್ಹ. ನಗರ ಪಾಲಿಕೆಯು ನಿಯಮಗಳನ್ನು ಪಾಲಿಸದಿರುವ ಬಿಲ್ಡರ್‌ಗಳಿಗೆ ಪರವಾನಿಗೆ ನೀಡುವ ಭ್ರಷ್ಟ ಅಧಿಕಾರಿಗಳ ಪಟಾಲಂ ನಗರ ಪಾಲಿಕೆಯಲ್ಲಿದೆ. ಪ್ರಭಾರ ಆಯುಕ್ತ ಪಿ.ಜಿ.ರಮೇಶ್‌ರ ವಿರುದ್ಧ ಡಿವೈಎಫ್ಐ ಲೋಕಾಯುಕ್ತರಿಗೆ ದೂರು ನೀಡಿ ತನಿಖೆಗೆ ಆಗ್ರಹಿಸಿದೆ.

ಬಿ.ಜೆ.ಪಿ. ಆಡಳಿತಕ್ಕೆ ಬಂದ ಪ್ರಥಮ ವರ್ಷದಲ್ಲೇ ಕುಲಾಯಿ ಪ್ರದೇಶದಲ್ಲಿರುವ ನಗರ ಪಾಲಿಕೆಯ ಅಧೀನದಲ್ಲಿರುವ ಗೋಶಾಲೆಯಲ್ಲಿನ ಸೆಗಣಿಯನ್ನು ಪಾಲಿಕೆಯ ಗಮನಕ್ಕೆ ತಾರದೆ ಕಾರ್ಪೋರೇಟರ್ ರಜನಿದುಗ್ಗಣ್ಣ ಮಾರಾಟ ಮಾಡಿದ್ದು "ಸೆಗಣಿಯಾಯಣ"ವಾಗಿ ಇಡಿಯ ಬಿಜೆಪಿ ಆಡಳಿತಕ್ಕೆ ಮುಜುಗರ ಉಂಟುಮಾಡಿತ್ತು.

ಶೇ.18 ರ ನಿಧಿಯ ದುರುಪಯೋಗಪಡಿಸಿಕೊಂಡು ದಲಿತರ ಕೇರಿಯ ಅಭಿವೃದ್ಧಿ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ಅನುದಾನವನ್ನು ಅಧಿಕಾರಿಗಳೂ ಜೇಬಿಗಿಳಿಸಿಕೊಂಡಿದ್ದಾರೆ. ದಲಿತರ ಅಭಿವೃದ್ಧಿಗೆ ವಿನಿಯೋಗಿಸಬೇಕಾದ ಅನುದಾನವನ್ನೂ ದಲಿತೇತರ ಕಾರ್ಯಗಳಿಗೆ ಉಪಯೋಗಿಸುವುದು, ಅವರ ಆರೋಗ್ಯ, ಶಿಕ್ಷಣ, ನಿವೇಶನಕ್ಕೆ ಒತ್ತು ನೀಡುವ ಬದಲಾಗಿ, ಶೇ.18 ರ ಹಣವನ್ನು ರಸ್ತೆ, ದೇವಸ್ಥಾನ ಆವರಣಗೋಡೆ, ಗೋಪುರ ನಿರ್ಮಿಸಲು ಉಪಯೋಗಿಸುವ ಮೂಲಕ ದೊಡ್ಡ ಮೊತ್ತದ ಹಣವು ಅಧಿಕಾರಿಗಳು ಮತ್ತು ಕಾರ್ಪೋರೇಟರ್‌ಗಳ ನಡುವೆ ಹಂಚಿಕೆಯಾಗಿದೆ. ರಸ್ತೆ ಡಾಮರೀಕರಣದ ಹೆಸರಿನಲ್ಲಿ ನಗರದ ಕೆಲ ರಸ್ತೆಗಳಲ್ಲಿ ಕಳಪೆ ಗುಣಮಟ್ಟದ ಡಾಮರು ಬಳಸಿರುವುದು, ಮತ್ತು ಕೇವಲ ನಗರಕೇಂದ್ರದ ರಸ್ತೆಗಳನ್ನು ಕಾಂಕ್ರೀಟೀಕರಣಗೊಳಿಸಿ ಹೊರವಲಯದ ರಸ್ತೆಗಳನ್ನು ಕಡೆಗಣಿಸಿರುವುದು ಅಭಿವೃದ್ಧಿಯ ಹೆಸರಿನಲ್ಲಿ ನಡೆದಿರುವ ಶೋಕಿಯಾಗಿದೆ.

ಮಂಗಳೂರು ತಾಲ್ಲೂಕು ಕಛೇರಿ

ಲಂಚದ ದುಡ್ಡಿಗಾಗಿ ತಾಲ್ಲೂಕು ಕಚೇರಿಯನ್ನೇ ಖಾಸಗಿ ಬಂಡವಾಳಶಾಹಿಗಳಿಗೆ ಮಾರಲು ಹೇಸದ ಕೆಲ ಭ್ರಷ್ಟ ಅಧಿಕಾರಿಗಳ ತಾಣವಾಗಿದೆ. ಇಲ್ಲಿನ ತಾಲ್ಲೂಕು ಕಛೇರಿ, ಇತ್ತೀಚೆಗಷ್ಟೇ ಇಲ್ಲಿನ ಗುಮಾಸ್ತ ರಾಜಗೋಪಾಲ ಅಮಾನತುಗೊಂಡಿದ್ದಾರೆ. ರಾಷ್ಟ್ರೀಯ ಕುಟುಂಬ ಭದ್ರತಾ ಯೋಜನೆಯಡಿ ಬಡಫಲಾನುಭವಿಗಳು-ಹೆಚ್ಚಾಗಿ ವಿಧವೆಯರಿಗೆ ಸಿಗಬೇಕಾದ ಹತ್ತುಸಾವಿರ ಮೊತ್ತದ 131 ಚೆಕ್‌ಗಳನ್ನೂ "ಸ್ವಾಹ" ಮಾಡಿದ ಆರೋಪ ಈತನ ಮೇಲೆ ಇತ್ತು. ಡಿವೈಎಫ್ಐನ ಕಾರ್ಯಾಚರಣೆಯಿಂದ ಮೊದಲಿಗೆ 19 ಪ್ರಕರಣಗಳು ಬೆಳಕಿಗೆ ಬಂತು. ನಂತರದಲ್ಲಿ ನಡೆದ ಪ್ರತಿಭಟನೆ, ಧರಣಿ, ನಿರಂತರ ಒತ್ತಡದಿಂದಾಗಿ 131 ಫಲಾನುಭವಿಗಳು ವಂಚಿತರಾಗುವುದನ್ನು ತಹಶೀಲ್ದಾರರೇ ಒಪ್ಪಿಕೊಂಡಿದ್ದಾರೆ.

ಅಮಾನತುಗೊಂಡ ಗುಮಾಸ್ತ ರಾಜಗೋಪಾಲನ ಮೇಲೆ ಸ್ಥಳೀಯ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ದಾವೆ ಇದ್ದರೂ ಕೂಡಾ ಐದು ತಿಂಗಳು ಕಳೆದರೂ ಒಬ್ಬ ಸಾಮಾನ್ಯ ಗುಮಾಸ್ತನನ್ನು ಈತನಕ ಬಂದಿಸದಿರುವುದು ಇದರ ಹಿಂದೆ ಉನ್ನತ ಅಧಿಕಾರಿಗಳ ಶಾಮೀಲಾತಿಯನ್ನು ದೃಢಪಡಿಸುತ್ತದೆ ಮತ್ತು ಅದು ಡಿವೈಎಫ್ಐ ನ ಆರೋಪವೂ ಆಗಿದೆ.

ನಂತರದಲ್ಲಿನ ಸರದಿ ಅಭಿಲೇಖಾಲಯದ ಸಿಬ್ಬಂಧಿಗಳಾದ ರವಿ, ಕೇಶವ.... ಮುಂತಾದವರದ್ದು, ನಗರದ ಅತ್ತಾವರದ ವೃದ್ಧೆಯೊಬ್ಬರ ಆಸ್ತಿಗೆ ಸಂಬಂಧಪಟ್ಟಂತೆ ಇರುವ ಕೈಬರಹದ ಆರ್.ಟಿ.ಸಿ.ಯಲ್ಲಿ ಹೆಸರನ್ನು ತಿದ್ದುಪಡಿಗೊಳಿಸಿದ ಆರೋಪದಡಿ ಇವರು ಅಮಾನತ್ತಾಗಿದ್ದಾರೆ. ಸರ್ಕಾರದ ಸುಮಾರು 24 ಎಕ್ರೆ ಜಮೀನನ್ನೇ ಲಂಚದ ಆಸೆಗಾಗಿ ಭ್ರಷ್ಟ ಗುಮಾಸ್ತ ಗಣೇಶ್ ಭಟ್ ಖಾಸಗಿಯವರ ಹೆಸರಿಗೆ ಮಾಡಿಸಿದ್ದನ್ನು ಡಿ.ಸಿ. ಪೊನ್ನುರಾಜ್‌ರವರು ಪ್ರಕರಣ ಬಯಲಿಗೆಳೆದು ಆತನನ್ನು ಅಮಾನತುಗೊಳಿಸಿದ್ದರು. ಒಟ್ಟಿನಲ್ಲಿ ಕೆಳಹಂತದ ಸಿಬ್ಬಂದಿಯಿಂದ ಹಿಡಿದು ಮೇಲಾಧಿಕಾರಿಗಳವರೆಗೆ ಲಂಚಕ್ಕೆ ಕೈ ನೀಡುವ ಭ

ಹೆಚ್ಚಾಗಿದ್ದಾರೆ. ಇಲ್ಲಿನ ತಾಲ್ಲೂಕು ಕಛೇರಿಯ

ಸಮಾಜ ಕಲ್ಯಾಣ ಇಲಾಖೆ

ಇಡೀ ಕರ್ನಾಟಕ ರಾಜ್ಯದ ಸಮಾಜ ಕ

ಇಲಾಖೆಯ ಎಲ್ಲಾ ಕಛೇರಿಗಳನ್ನೂ ಒಂದು

ಬೆಚ್ಚಿಬೀಳಿಸಿದ್ದು ಮಂಗಳೂರಿನಲ್ಲಿ ನ

ಡಿವೈಎಫ್ಐನ ಕಾರ್ಯಾಚರಣೆ. ಮಂಗಳ

ಬೈಕಂಪಾಂಡಿಯಲ್ಲಿನ ಅಂಗನವಾಡಿಯಲ್ಲಿ ಪತ್ತೆ

ಅವಧಿ ಮೀರಿದ ಪೌಷ್ಠಿಕ ಆಹಾರ ಮತ್ತು

ಪೂರೈಕೆಯನ್ನು ಡಿವೈಎಫ್ಐ ಸ್ಥಳೀಯ ಸಂಗಾ

ಪತ್ತೆ ಹಚ್ಚಿದ್ದರು. ನಂತರ ವಿವಾದ

ಸೃಷ್ಟಿಯಾಗಿದ್ದವು. ಮಹಿಳಾ ಮತ್ತು ಶಿಶು ಅಭ

ಇಲಾಖೆಯ ಉಪ ನಿರ್ದೇಶಕಿ ಶಕುಂತಲಾ

ಅಮಾನತಿಗೆ ಡಿವೈಎಫ್ಐ ಆಗ್ರಹಿಸಿ ಬ

ಪ್ರತಿಭಟನೆ ನಡೆಸಿತ್ತು. ರಾಜ್ಯದಾದ್ಯಂತ ಈ ಪ್ರ

ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಎಚ್ಚೆತ್ತುಕೆ

ಇಲಾಖೆ ಮಾತ್ರ ಉಪನಿರ್ದೇಶಕಿಯ

ಬಚಾವ್‌ಗೊಳಿಸಿ ಪ್ರಕರಣದಲ್ಲಿ ಸಂಬಂಧ

ಇಲ್ಲಿನ ಸಿ.ಡಿ.ಪಿ.ಒ ಗಳನ್ನು ಅಮಾನತುಗೊಳಿಸಿ

ಇಲಾಖೆ ಭ್ರಷ್ಟಪರವೆಂದು ಅದರ ಅಧಿಕಾ

ಸಾಬೀತುಪಡಿಸಿದ್ದಾರೆ. ಡಿವೈಎಫ್ಐ ಕಾರ್ಯ

ಮೇಲೆ ಸುಳ್ಳು ಮತ್ತು ಕಾನೂನುಬಾಹಿರ ಕೇಸು

ದಾಖಲಿಸಿದ ಶಕುಂತಳ ಮತ್ತು ತಂಡ

ಸಾರ್ವಜನಿಕವಾಗಿ ಮುಜುಗರಕ್ಕೀಡಾಗಿರುವು

ಸತ್ಯ.

ಇಲಾಖೆಯ ವ್ಯಾಪ್ತಿಯ ವಿದ್ಯಾರ್ಥಿ ನಿಲ

ಕಾಮಗಾರಿಯಲ್ಲಿ ಸಾಮಗ್ರಿ ವಿತರಣೆ

ನಿರ್ವಹಣೆಯಲ್ಲಿಯೂ ಭ್ರಷ್ಟ ಅಧಿಕಾರಿಗಳ

ನಡೆಯುತ್ತಿರುವುದು ಬಡ ವಿದ್ಯಾರ್ಥಿಗ

ಸಂಕಷ್ಟಕ್ಕೀಡು ಮಾಡಿದೆ. ಲಂಚ ಕೊ

ನಿರಾಕರಿಸಿದ ಮಂಗಳೂರಿನ ವಾರ್ಡನ್ ಒ

ತನ್ನ ಕಛೇರಿಯಲ್ಲಿ ಹೀನಾಯವಾಗಿ ಅ

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ರೆಡ್ಡಿ ನಾ

ವರ್ಗನೆ ಖಂಡಿಸಿ ಅವರ ಅಮಾನತಿಗೆ ಆ

ಡಿವೈಎಫ್ಐ, ಎಸ್‌ಎಫ್ಐ ಸಂಘಟನೆ

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬೆಂಬಲ ನೀಡಿ

ಸಮಾಜ ಕಲ್ಯಾಣಾಧಿಕಾರಿಗೆ ಮನವಿ ಸಲ್ಲಿಸಿ

ರಮೇಶ್‌ಕುಮಾ

...ಚೀನೀ ಕ್ರಾಂತಿಯ ಅರವತ್ತು ವರ್ಷಗಳು

ಪುಟ 10 ರಿಂದ

ಗಮನಿಸಿದೆ. ಅವನ್ನು ನಿಭಾಯಿಸಲು ಕ್ರಮಗಳನ್ನು ಸೂಚಿಸಲಾಗಿದೆ. ಸಮಾಜವಾದದ ಈಗಿನದಕ್ಕಿಂತ ಉನ್ನತವಾದ ಒಂದು ಹಂತವನ್ನು ಸಾಧಿಸುವ ಮೊದಲು ಇನ್ನೂ ಹಲವು ರಾಜಕೀಯ, ಸೈದ್ಧಾಂತಿಕ ಮತ್ತು ಭೌತಿಕ ಹೆಜ್ಜೆಗಳನ್ನು ಇಡಬೇಕಾಗಿದೆ.

ಚೀನಾ ಈಗ ವಿಶ್ವ ಆರ್ಥಿಕದಲ್ಲಿ ಗಳಿಸಿರುವ ನಿರ್ಣಾಯಕ ಸ್ಥಾನ ಏನು ಎಂಬುದು ಕಳೆದ ವರ್ಷದ ಜಾಗತಿಕ ಹಣಕಾಸು ಬಿಕ್ಕಟ್ಟಿನ ಸಮಯದಲ್ಲಿ ಕಂಡು ಬಂತು. ಚೀನಾ ತನ್ನ ಆರ್ಥಿಕಕ್ಕೆ 58.5 ಕೋಟಿ ಡಾಲರುಗಳ ಹಣಕಾಸು ಉತ್ತೇಜಕವನ್ನು ಪ್ರಕಟಿಸಿತು. ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಇದು ಪರಿಣಾಮಕಾರಿಯಾಗಿದೆಯೆಂಬುದು ಈಗ ಸಾಬೀತಾಗಿದೆ. 2009ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ನಕಾರಾತ್ಮಕವಾಗಿದ್ದು 3 ಶೇ. ದರದಲ್ಲಿ ಕುಗ್ಗಬಹುದೆಂಬ ನಿರೀಕ್ಷೆಯಿರುವಾಗ ಚೀನಾ ಕನಿಷ್ಟ 7.7ಶೇ. ಬೆಳವಣಿಗೆ ದಾಖಲಿಸಬಹುದೆಂದು ನಿರೀಕ್ಷಿಸಲಾಗುತ್ತಿದೆ.

ಏಶ್ಯಾದ ಎರಡು ದೈತ್ಯ ರಾಷ್ಟ್ರಗಳಾದ ಚೀನಾ ಮತ್ತು ಭಾರತದ ಹೆಚ್ಚುತ್ತಿರುವ ಆರ್ಥಿಕ ಶಕ್ತಿ ಇವೆರಡರ ನಡುವಿನ ಸಂಘರ್ಷದ ಒಂದು ಮೂಲ ಎಂದು ಮುಂದಿಡಲಾಗುತ್ತಿದೆ. ಸಾಮರಿಕವಾಗಿ ಭಾರತವನ್ನು ಚೀನಾದ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆದಿದೆ. ವಿಶ್ವ ಆರ್ಥಿಕ ವ್ಯವಸ್ಥೆಯ ಮೇಲೆ ಸವಾರಿ ಮಾಡುತ್ತಿರುವವರು ಚೀನಾ ಮತ್ತು ಭಾರತದ ನಡುವೆ ಮೇಲಾಟದ ಮತ್ತು ಸಂಘರ್ಷದ ಸಂಬಂಧಕ್ಕಿಂತ ಉತ್ತಮವಾದ ಸಂಬಂಧಗಳು ಇರಬಾರದು ಎಂದೇ ಆಶಿಸುತ್ತಾರೆ.

ಅಂತಾರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆ ತರಲು, ಅಭಿವೃದ್ಧಿಶೀಲ ದೇಶಗಳ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಮುನ್ನಡೆಯಲು, ಪ್ರಾದೇಶಿಕ ಸಹಕಾರ, ಶಾಂತಿ ಮತ್ತು ಭದ್ರತೆಗಾಗಿ ದುಡಿಯಲು ಭಾರತ ಮತ್ತು ಚೀನಾ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸಿಕೊಳ್ಳುತ್ತಿವೆ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪ

ಸಹಕಾರ ನೀಡುತ್ತಿವೆ. ಅಮೆರಿಕದ ಸಾಮ್ರಾಜ್ಯಶಾ

ಅಧಿಪತ್ಯ, ಆಕ್ರಮಣಕಾರಿ ಪ್ರವೃತ್ತಿ ವ

ಯುದ್ದೋನ್ಮಾದಕ್ಕೆ ಮಂಗಳ ಹಾಡಲು ಇದು

ಅಗತ್ಯವಾಗಿದೆ.

ಚೀನಾ ಜನತಾ ಗಣತಣತ್ರ ಹೊಸ ಮುನ್ನಡ

ತುಡಿಯುತ್ತಿರುವ ಮತ್ತು 21ನೇ ಶತಮಾನ

ಜಾಗತಿಕ ವಿದ್ಯಮಾನಗಳಲ್ಲಿ ಮಹತ್ವದ


ವಹಿಸಲಿರುವ ಸಂದರ್ಭದಲ್ಲಿ ಚೀನಾ ಕ್ರಾಂ

60ನೇ ವಾರ್ಷಿಕೋತ್ಸವ ನಡೆಯುತ್ತಿದೆ. ಚೀನೀ

ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಡಬಹುದು ಹ

ಭವಿಷ್ಯದತ್ತ ವಿಶ್ವಾಸದಿಂದ ಮುನ್ನೋಟ ಬೀರಬ

ಯುಪಿಎ II ದರ್ಬಾರ್‌ನಲ್ಲಿ



ಯುಪಿಎ ಮಿತವ್ಯಯ ವಿದ್ಯಾರ್ಥಿಗಳಿಗೆ ವೆಚ್ಚದಾಯಕ!

ಯುಪಿಎ-2 ಸರಕಾರದ 'ಮಿತವ್ಯಯ' ದ ಕುರಿತು
ಾಗಲೇ ಸಾಕಷ್ಟು ಚರ್ಚೆ ನಡೆದಿದೆ.
ವನಂತಪುರದ ಕಾಂಗ್ರೆಸ್ ಸಂಸತ್ ಸದಸ್ಯ ಶಶಿ
ರ್ ಐಷಾರಾಮಿ ಹೋಟೇಲುವಾಸ ಬಿಟ್ಟ ಮೇಲೆ
ಾನದಲ್ಲಿ ಕಡಿಮೆ ವೆಚ್ಚದ ಪ್ರಯಾಣವನ್ನು
ರುಗಳೊಂದಿಗೆ ಪ್ರಯಾಣಿಸುವ ಜಾನುವಾರು
ಯೆಂದು ವರ್ಣಿಸಿ ಕಾಂಗ್ರೆಸ್ ಮುಖಂಡರೇ
ನ್ನು ತರಾಟೆಗೆ ತಗೊಳ್ಳಬೇಕಾಯಿತು(ಈತನ
ಲೆ'ಯ ಬಗ್ಗೆ ಚುನಾವಣೆಯ ವೇಳೆಯಲ್ಲಿಯೇ
ಳದ ಪ್ರಜಾಪ್ರಭುತ್ವವಾದಿಗಳು ಸಂದೇಹ
ಪಡಿಸಿದ್ದರು ಎಂಬುದನ್ನು ಇಲ್ಲಿ
ಸಿಕೊಳ್ಳಬಹುದು). ಪ್ರಧಾನಿಗಳು ಅದೊಂದು
ಕು ಎಂದರು.
ಈಗ ಈ 'ಮಿತವ್ಯಯ' ವಾಸ್ತವವಾಗಿ ಕೇಂದ್ರೀಯ
ಕ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಬಹಳ
ಾಯಕವಾಗ ಬಹುದು ಎಂಬ ಸುದ್ದಿ ಬಂದಿದೆ.
ವ ಸಂಪನ್ಮೂಲ ಸಚಿವಾಲಯ ವಿದ್ಯಾರ್ಥಿ
ವ ವಸೂಲಿ ಮಾಡುವ ಶುಲ್ಕಗಳನ್ನು ಹೆಚ್ಚಿಸುವ
ಮತ್ತು ಅವರು ಬಳಸುವ ಸೌಲಭ್ಯಗಳ ಮೇಲೆ
ವನ್ನು ವಿಧಿಸುವ ಸಾಧ್ಯತೆಗಳ ಬಗ್ಗೆ
ಚಿಸಬೇಕು ಎಂದು ನಿರ್ದೇಶನ ಹೊರಡಿಸಿದೆ.
ಂದರೂ ಸರಕಾರದ 'ಖರ್ಚು' ಇಳಿಸಲು
ವರಿಗೆ ಸ್ವಲ್ಪವಾದರೂ ಪರಿಹಾರ
ಬಹುದಾದ ಪಡಿತರ ವ್ಯವಸ್ಥೆಯನ್ನೇ
ತಗೊಳಿಸು ವವರಲ್ಲವೇ ಇವರು. ಈ ನಡುವೆ,
ಐದು ವರ್ಷಗಳಲ್ಲಿ ಇದೇ ಯುಪಿಎ ಸರಕಾರ
ರು ಐಷಾರಾಮಿ ಪ್ರದೇಶದಲ್ಲಿ ಮಂತ್ರಿಗಳ
ಲೆಗಳಿಗಾಗಿ 100 ಕೋಟಿ ರೂ.ಗಳಿಗೂ ಹೆಚ್ಚು
ರ್ಚ ಮಾಡಿದೆಯೆಂದು ವರದಿಯಾಗಿದೆ. ಆಗ
'ಮಿತವ್ಯಯ' ಜಾರಿಯಲ್ಲಿರಲಿಲ್ಲ ಎಂದು
ಸಮಜಾಯಿಷಿ ಕೊಡಬಹುದೇನೋ.

★

ಅಮೆರಿಕಾದ ಡಾಲರುಗಳನ್ನು ಪಾಕಿಸ್ತಾನ ಭಾರತದ ವಿರುದ್ಧ ಬಳಸಿದರೇನಂತೆ?

ಅಲ್ ಖೈದಾ ಮತ್ತು ತಾಲಿಬಾನ್ ವಿರುದ್ಧ ಕಾರ್ಯಾಚರಣೆಗೆ ಎಂದು ಅಮೆರಿಕಾ ಪಾಕಿಸ್ತಾನಕ್ಕೆ ಕೊಟ್ಟಿದ್ದ 500ಕೋಟಿ ಡಾಲರುಗಳ 'ನೆರವ'ನ್ನು ಅದು ಭಾರತದ ವಿರುದ್ಧ ಬಳಸಿತು ಎಂದು ಆಗ ಅಧ್ಯಕ್ಷರಾಗಿದ್ದ ಮುಷರ್ರಫ್‌ರವರೇ ಒಪ್ಪಿಕೊಂಡದ್ದರಿಂದ ಅಮೆರಿಕಾಕ್ಕೆ ಮುಜುಗರವೇನೂ ಆದಂತಿಲ್ಲ ಎಂದು ಪತ್ರಿಕಾ ವರದಿಗಳು ಹೇಳುತ್ತಿವೆ. ಇದು ಅವರಿಗೆ ಮೊದಲೇ ಗೊತ್ತಿತ್ತು , ಅಲ್ಲದೆ ಭಾರತ ಸರಕಾರಕ್ಕೂ ಇದು ಹೊಸ ಸುದ್ದಿಯೇನಲ್ಲ ಎಂದೂ ಹೇಳಲಾಗುತ್ತಿದೆ. ಇದನ್ನು ಪ್ರತಿಭಟಿಸುತ್ತಲೇ ತಾವು ಭಾರತವನ್ನು ಅಮೆರಿಕಾದ ಕಿರಿಯ ಪಾಲುದಾರನಾಗಿಸಲು ಹೊರಟದ್ದು ಎಂದು ಬಹುಶಃ ಯುಪಿಎ ಆಡಳಿತಗಾರರು ಹೇಳಬಹುದು.

ಈ ನಡುವೆ ಈ ಪೃಥ್ವಿಯೆಂಬ ಗ್ರಹವನ್ನು ಉಳಿಸಬೇಕಾದರೆ ಅಮೆರಿಕಾ ತನ್ನ ಜೀವನ ಶೈಲಿಯನ್ನು ಬದಲಿಸಬೇಕು ಎಂದು ಭಾರತದ ಮಂತ್ರಿಗಳೊಬ್ಬರಾದ ಜೈರಾಂ ರಮೇಶ್ ಸಲಹೆ ಮಾಡುವ 'ಧೈರ್ಯ' ತೋರಿದ್ದಾರೆ. ಜಿ-20 ರ ಸಭೆಗೆ ಹೊರಡುವ ಮುನ್ನ ಭಾರತದ ಪ್ರಧಾನ ಮಂತ್ರಿಗಳೂ ಎಲ್ಲಾ ರೀತಿಗಳಲ್ಲೂ ಅಂದರೆ ಸರಕುಗಳು, ಸೇವೆಗಳು, ಹೂಡಿಕೆ ಮತ್ತು ಹಣಕಾಸಿನ ಹರಿವುಗಳಲ್ಲಿ ಪಾಶ್ಚಿಮಾತ್ಯ ದೇಶಗಳು ತಮ್ಮನ್ನಷ್ಟೇ ರಕ್ಷಿಸಿಕೊಳ್ಳುವ ನೀತಿಗಳನ್ನು ಬಿಡಬೇಕೆಂಬ ಸಂದೇಶ ಈ ಸಭೆಯಿಂದ ಮೂಡಿ ಬರುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಅತ್ತ 'ಬಫೆಲೋಗೆ ಯಸ್, ಬೆಂಗಳೂರಿಗೆ ನೋ' ಎಂದ ಅಮೆರಿಕಾದ ಅಧ್ಯಕ್ಷರು ಈಗ 'ಅಮೆರಿಕಾ ಏಕಪಕ್ಷೀಯವಾಗಿ ವರ್ತಿಸುತ್ತದೆ ಎಂದು ಟೀಕಿಸುತ್ತಿರುವವರು ಇನ್ನು ಸುಮ್ಮನೆ ಕೂತು ಅಮೆರಿಕಾವೇ ಏಕಾಂಗಿಯಾಗಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಿ ಎಂದು ಕಾಯುವಂತಿಲ್ಲ' ಎಂದಿದ್ದಾರಂತೆ. ಏನಿದರ ಅರ್ಥ ಎಂದು ನಮ್ಮ ಪ್ರಧಾನಿಗಳೇ ಹೇಳಬೇಕು.

★

ಖಾಸಗಿಯವರ ಪಾಲಾದ ಬಾಲ್ಕೋದಲ್ಲಿ ನೂರಕ್ಕೂ ಹೆಚ್ಚು ಕಾರ್ಮಿಕರ ಸಾವಿನ ಶಂಕೆ

ಈಗ ಛತ್ತೀಸಘಡ ರಾಜ್ಯದಲ್ಲಿರುವ ಬಾಲ್ಕೋ ಕಾರ್ಖಾನೆಯ ಬಗ್ಗೆ ನಮ್ಮ ಓದುಗರಿಗೆ ಗೊತ್ತು. ಆಗಿನ ಕೇಂದ್ರ ಸರಕಾರದ ಕೃಪೆಯಿಂದ ಖಾಸಗೀಕರಣಗೊಂಡು ಸ್ಟೆರಲೈಟ್ ಕಂಪನಿಯ ಪಾಲಾದ ಅಲ್ಯುಮಿನಿಯಂ ಕಂಪನಿ ಇದು. ಈಗ ಇದೇ ಖಾಸಗೀ ಆಡಳಿತದ ನಿರ್ಲಕ್ಷ್ಯದಿಂದಾಗಿ ನೂರಕ್ಕೂ ಹೆಚ್ಚು ಕಾರ್ಮಿಕರನ್ನು ಬಲಿ ತೆಗೆದುಕೊಂಡಿರುವ ಒಂದು ಕೈಗಾರಿಕಾ ಅಪಘಾತ ಸಪ್ಟಂಬರ್ 23ರಂದು ಸಂಭವಿಸಿದೆ. 200 ಮೀಟರುಗಳಷ್ಟು ಎತ್ತರದ ಚಿಮಣಿಯನ್ನು ಕಟ್ಟುವಾಗ ಅದು ಕುಸಿದು ಬಿದ್ದು ನೂರಕ್ಕೂ ಹೆಚ್ಚು ಕಾರ್ಮಿಕರು ಅದರ ನಡುವೆ ಸಿಲುಕಿಕೊಂಡಿದ್ದಾರೆ. ಅವರು ಬದುಕುಳಿಯುವ ಸಂಭವ ಬಹಳ ಕಡಿಮೆ ಎಂದು ಹೇಳಲಾಗುತ್ತಿದೆ. ಇಲ್ಲಿರುವ ಸಿಐಟಿಯು ಸಂಘ ಸ್ಟೆರಲೈಟ್ ಕಂಪನಿ ಮತ್ತು ಈ ನಿರ್ಮಾಣದ ಕಾಂಟ್ರಾಕ್ಟ್ ವಹಿಸಿದ್ದ ಗ್ಯಾನನ್ ಡಂಕರ್ಲೆ ಕ್ರಿಮಿನಲ್ ನಿರ್ಲಕ್ಷದಿಂದ, ಕಳಪೆ ಸಾಮಗ್ರಿಗಳನ್ನು ಬಳಸಿ, ಸುರಕ್ಷತಾ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ತರಾತುರಿಯಲ್ಲಿ ಈ ಕೆಲಸ ಮಾಡಿಸುತ್ತಿದ್ದಾರೆ ಎಂದು ಈ ಹಿಂದೆಯೇ ಎಚ್ಚರಿಸಿತ್ತು. ಆದರೂ ಈ ಬಗ್ಗೆ ಗಮನ ಹರಿಸಿರಲಿಲ್ಲ.

ಸ್ಟೆರಲೈಟ್ ಕಂಪನಿಯ ದುರಾಡಳಿತ ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ಗಮನಿಸಿ ಬಾಲ್ಕೋವನ್ನು ಮತ್ತೆ ರಾಷ್ಟ್ರೀಕರಿಸಬೇಕು ಎಂದು ಸಿಐಟಿಯು ಕೇಂದ್ರ ಸರಕಾರವನ್ನು ಆಗ್ರಹ ಪಡಿಸಿದೆ. ಈಗ ಈ ಕಂಪನಿಯಲ್ಲಿ 49ಶೇ. ಬಂಡವಾಳ ಪಾಲು ಸರಕಾರದ್ದೇ ಆಗಿರುವುದರಿಂದ ಇದು ಕಷ್ಟದ ಕೆಲಸವೇನಲ್ಲ. ಆದರೆ ಖಾಸಗೀಕರಣವೇ ದಿವ್ಯೌಷಧ ಎಂದು ಕಣ್ಣು ಮುಚ್ಚಿ ನಂಬಿರುವ ಸರಕಾರ ಇದನ್ನು ಮಾಡುತ್ತದೆಯೇ?

★

ಆದಾಯ ತೆರಿಗೆ ನೌಕರರ ಚಳುವಳಿಯ ಎಚ್ಚರಿಕೆ

50000 ಆದಾಯ ತೆರಿಗೆ ನೌಕರರು ಈ ಇಲಾಖೆಯ ಕೆಲಸಗಳ ಹೊರಗುತ್ತಿಗೆಯನ್ನು ವಿರೋಧಿಸಿ ಚಳುವಳಿ ನಡೆಸುವುದಾಗಿ ಹೇಳಿದ್ದಾರೆ. ಗುಜರಾತಿನ ಕಾಂಗ್ರೆಸ್ ಪ್ರತಿಪಕ್ಷದ ಮುಖಂಡ ಶಕ್ತಿಸಿಂಹ ಗೋಹಿಲ್ ಈ ಬಗ್ಗೆ ಪ್ರಧಾನ ಮಂತ್ರಿಗಳು, ಕಾಂಗ್ರೆಸ್ ಅಧ್ಯಕ್ಷರು ಮತ್ತು ಅವರ ರಾಜಕೀಯ ಕಾರ್ಯದರ್ಶಿಯವರೊಂದಿಗೆ ಈ ಬಗ್ಗೆ ಮಾತಾಡುವುದಾಗಿ ಭರವಸೆ ನೀಡಿದ್ದಾರಂತೆ! ಆದಾಯ ತೆರಿಗೆ ನೌಕರರು ಇದನ್ನು ಎಷ್ಟ ಮಟ್ಟಿಗೆ ನಂಬಿದ್ದಾರೋ!



ಆಹಾ... ಸಚಿವರ 'ಯೋಗ'ವೇ!

ಬಿಜೆಪಿ ದರ್ಬಾರ್

ರಾಜ್ಯದ ಪ್ರಾಥಮಿಕ ಶಿಕ್ಷಣ ಸಚಿವ ವಿಶ್ವನಾಥ
ೇರಿಯವರು ಸರ್ಕಾರದ ತೀರ್ಮಾನವೊಂದನ್ನು
ಿಸಿದ್ದಾರೆ. ಶಾಲೆಗಳು ಹೇಗಿರಬೇಕು ಎಂಬುದಕ್ಕೆ
ಷ್ಟ್ರೋತ್ಥಾನ ಶಾಲೆಗಳೇ ಮಾದರಿಯಂತೆ. ರಾಜ್ಯದ
ರ್ಕಾರದ ಶಾಲೆಗಳನ್ನು ಸರ್ಕಾರಿ ಖರ್ಚಿನಲ್ಲಿ
ತಹ ಮಾದರಿ ಶಾಲೆಗಳಾಗಿ
ಮಾಡಲಾಗುವುದಂತೆ. ಗುಜರಾತ್ ರಾಜ್ಯದಲ್ಲಿ ಹೀನಾಯ ಕೋಮುಗಲಭೆ - ಕೋಮುವಾದಿ ಧೃವೀಕರಣ ನಡೆಯುವಲ್ಲಿ ಅಲ್ಲಿನ ಶಿಕ್ಷಣದ ಕೇಸರೀಕರಣದ್ದೂ ಒಂದು ಪ್ರಮುಖ ಪಾತ್ರ. 'ರಾಷ್ಟ್ರೋತ್ಥಾನ' ಮಾದರಿ ಶಾಲೆಗಳೂ ಎಂದರೆ ಕೇಸರಿ ಶಾಲೆಗಳು ಅಂತ ಅರ್ಥವಾ?

ಕಾಗೇರಿ ಒಬ್ಬ ವ್ಯಕ್ತಿಯಲ್ಲ. ರಾಜ್ಯ ಶಿಕ್ಷಣ ಸಚಿವರು. ಇದು ಸರ್ಕಾರ ತೀರ್ಮಾನ ಅಥವಾ ಆಲೋಚನೆಗೆ ಕನ್ನಡಿ. ಪ್ರಜ್ಞಾವಂತ ಜನ ಎಚ್ಚರದಿಂದ ಇದನ್ನೆಲ್ಲಾ ಗಮನಿಸಬೇಕಿದೆ.

★

ಮಳೆ ಹಾನಿಯೂ, ಬಿಜೆಪಿ ಸಚಿವರ 'ಯೋಗ'ವೂ

ರಾಜ್ಯದಲ್ಲಿ ಮಳೆ ಬರದೇ ಬೆಳೆ ಹಾನಿಯಾಗಿದ್ದು ಆಯ್ತು. ರಾಜ್ಯ ಸರ್ಕಾರ ಬರಕ್ಕೆ ಸೂಕ್ತ ಪರಿಹಾರವನ್ನು ನೀಡಲಿಲ್ಲ. ಇದೀಗ ಮಳೆ ಹಾನಿಯ ಸರದಿ. ರಾಜ್ಯದಾದ್ಯಂತ ಸುರಿಯುತ್ತಿರುವ ವ್ಯಾಪಕ ಮಳೆಗೆ ಅಪಾರ ಪ್ರಾಣಹಾನಿ, ಆಸ್ತಿಪಾಸ್ತಿ ನಷ್ಟ. ಬೆಳೆ ಹಾನಿ ಸಂಭವಿಸಿದೆ. ಇವೆಲ್ಲಾ ಆಗುವಾಗ ರಾಜ್ಯ ಸರ್ಕಾರದ ಮಂತ್ರಿ ಮಹೋದಯರು ಏನು ಮಾಡುತ್ತಿದ್ದಾರೆ? 'ಸುತ್ತೂರು ಮಠ'ದಲ್ಲಿ ಯೋಗಾಸನ ತರಬೇತಿ ಪಡೆಯುತ್ತಿದ್ದಾರೆ. ನರಹಂತಕ ನರೇಂದ್ರ ಮೋದಿ ಮತ್ತು ಆರೆಸ್ಸೆಸ್ ಮುಖಂಡರಿಂದ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದಾರೆ. ಆರೆಸ್ಸೆಸ್, ಮೋದಿ ಏನು ಪಾಠ ಹೇಳಿಕೊಡುತ್ತಾರೆಂಬುದರ ಬಗೆಗೆ ಹೆಚ್ಚು ವಿವರಣೆ ಅಗತ್ಯವಿಲ್ಲ , ಅಲ್ಲವೇ?

★

ಬಡವರ ಅನ್ನಕ್ಕೆ ಕನ್ನ

ಜನ ತಿನ್ನುವ ಅನ್ನಕ್ಕೆ ಕಲ್ಲು ಹಾಕುವ ಹಲವು ಕರಾಮತ್ತುಗಳನ್ನು ಈ ಸರ್ಕಾರ ಮಾಡುತ್ತಾ ಬಂದಿರುವುದನ್ನು ಕಂಡಿದ್ದೇವೆ. ಇದರ ಧಾಳಿ ಕೇಂದ್ರೀಕೃತವಾಗಿರುವುದು ರೇಷನ್ ವ್ಯವಸ್ಥೆಯ ಮೇಲೆ. ಒಂದಿಲ್ಲ ಒಂದು ಕ್ರಮಗಳ ಮೂಲಕ ಪಡಿತರ ವ್ಯವಸ್ಥೆಯ ನಿಜ ಸ್ವರೂಪ, ಆಶಯವನ್ನೇ ಕೇಂದ್ರ, ರಾಜ್ಯ ಸರ್ಕಾರಗಳು ಹಾಳುಗೆಡಹುತ್ತಿವೆ. ಸಬ್ಸಿಡಿ ಗಣನೀಯವಾಗಿ ಕಡಿತ ಮಾಡಿ ಉದಾರೀಕರಣದ ಮಂತ್ರ ಪಠಿಸುತ್ತಿದೆ. ಅದಕ್ಕಾಗಿ ಹಲವು ಷಡ್ಯಂತ್ರಗಳನ್ನೇ ರೂಪಿಸಿ ಜಾರಿಗೊಳಿಸುತ್ತಿವೆ.

ಇತ್ತೀಚೆಗೆ ರಾಜ್ಯ ಸರ್ಕಾರವು ಪಡಿತರ ವ್ಯವಸ್ಥೆಯಲ್ಲಿನ ಕಾರ್ಡ್‌ಗಳ ಸಂಖ್ಯೆಯನ್ನು ಶೇ.80 ರಷ್ಟು ಕಡಿತ ಮಾಡಬೇಕೆಂಬ ನಿರ್ದೇಶನವನ್ನು ನೀಡಿರುವುದು ಅತ್ಯಂತ ಅಮಾನವೀಯ ಕ್ರಮವಾಗಿದೆ. ಅಂದರೆ 80 ಲಕ್ಷ ಕೆಲವೊಮ್ಮೆ 1 ಕೋಟಿ ಎನ್ನಲಾಗುವ ಕಾರ್ಡುಗಳನ್ನು ಪರಿಗಣಿಸಿದರೆ ಉಳಿಯುವವರು 16 ಲಕ್ಷ ಅಥವಾ 20 ಲಕ್ಷ ಮಾತ್ರ. ಈ ಮೂಲಕ ಒಂದೇ ಏಟಿಗೆ ಬಡವರ, ಸಾಮಾನ್ಯರ ಅಲ್ಪ ಆಹಾರವನ್ನು ಕಿತ್ತುಕೊಳ್ಳಲು ಮುಂದಾಗಿದೆ.

ಈ ಪ್ರಶ್ನೆ ವಿಧಾನಸಭೆಯಲ್ಲಿ [illegible]ಲೂ ಸರ್ಕಾರದ ಸ್ಪಷ್ಟ ಉತ್ತರವಿಲ್ಲ. ಬದಲಾಗಿ 'ಅಕ್ಕಿ ಸಂತೆ'ಯ ಅಣುಕು ನಾಟಕ ಪ್ರದರ್ಶಿಸಲಾಯಿತಷ್ಟೆ. ಈಗಂತೂ ಸುತ್ತೂರು ಮಠದಲ್ಲಿ ಬಿ.ಪಿ.ಎಲ್. ಸಂಖ್ಯೆ ತೋರಿಸಬೇಕು ಎಂದು ಪಾಠ ಹೇಳಿರುವ ಮೋದಿ ಮಾತನ್ನು ಜಾರಿಗೆ ತಂದರೆ ಬಡತನ ಅಲ್ಲ. ಬಡವರನ್ನೇ ನಿರ್ಮೂಲಗೊಳಿಸಬಹುದು. ಅದರ 'ಪ್ರೋಗ್ರಾಂ' ಈಗಲೇ ಹಾಕಿರಬಹುದು. ಮ□

ಸಂಘ ಪರಿವಾರದ 'ಹಿಂಬಾಗಿಲ' ಕಸರಸ್ತು...

ಪುಟ 3 ರಿಂದ

ಸಾಂಸ್ಕೃತಿಕ ಸಂಘಟನೆ ಮಾತ್ರವೆಂದು ಹೇಳಿಕೊಂಡಿತ್ತು.

ಆದರೆ ವ್ಯತಿರಿಕ್ತವಾಗಿ ವರ್ತಿಸಿರುವ ಇಂತಹ ಸಂಘ ಚಟುವಟಿಕೆಗಳಿಗೆ ಕಾನೂನಿನಲ್ಲಿ ಅವಕಾಶವೇ ಇಲ್ಲ. ಅದರ ಯಾವ ಚಟುವಟಿಕೆಗಳೂ, ವ್ಯವಹಾರಗಳು ಪಾರದರ್ಶಕವಾಗಿಯೇ ಇಲ್ಲ. ಎಲ್ಲವೂ ಬಹುತೇಕ ಗೌಪ್ಯ. ಇಂತಹ ಕಾನೂನು ಮೀರಿದ 'ಸಂಘ'ದ ಪ್ರಮುಖರಾಗಿರುವ ಮೈಚ ಜಯದೇವ, ಮಂಗೇಶ ಬೆಂಡೆ, ಕೆ.ನರಹರಿಯಂತಹವರು ಚುನಾಯಿತ ಸರ್ಕಾರದ ಸಚಿವರಿಗೆ ಬೋಧನೆ ಮಾಡಲು ಯಾವ ಅರ್ಹತೆ, ಅಧಿಕಾರವಿದೆ? ಯಡ್ಡಿ ನಾನು ಚಡ್ಡಿ ಉಟ್ಟಿದ್ದೇನೆ ಎಂಬುದು ಇದಕ್ಕೆ ಅರ್ಹತೆಯಲ್ಲ. ಅದು ಸರ್ಕಾರ ನಡೆಸಲು ಇರುವ ಅನರ್ಹತೆ.

ಹತ್ಯಾಕಾಂಡ ಮೋದಿ ಮಾದರಿ

ಮೋದಿಯಂತಹವರು ಗುಜರಾತ್‌ನಲ್ಲಿ ಸಾಧಿಸಿದ 'ಮಹಾ ಅಭಿವೃದ್ಧಿ'ಯ ಬಗ್ಗೆ ದಕ್ಷ ಆಡಳಿತದ ಸೂತ್ರಗಳನ್ನು ಮನಗಾಣಿಸಿದ್ದಾರೆ ಎಂಬುದೂ ಒಂದು ಬೋಗಸ್ ಹೇಳಿಕೆ. ಗೋದ್ರಾ ನೆಪದಲ್ಲಿ ಮೂರು ಸಾವಿರಕ್ಕೂ ಅಧಿಕ ಮುಸ್ಲಿಂ ಅಲ್ಪಸಂಖ್ಯಾತರನ್ನು ಕೊಚ್ಚಿ, ಬೆಂಕಿ ಹಚ್ಚಿ ಕೊಂದದ್ದಾಗಲೀ, ಎನ್‌ಕೌಂಟರ್ ಹೆಸರಲ್ಲಿ ನಿರಪರಾಧಿಗಳನ್ನು ಹತ್ಯೆಗೈದು ಅದನ್ನು ದಕ್ಕಿಸಿಕೊಳ್ಳಲು ಏನೆಲ್ಲಾ ದುಷ್ಟ ಮಾರ್ಗ ಅನುಸರಿಸಿಧನೆಂಬುದು ಮಾತ್ರವೇ ಆತ ಸಾಧನೆ(?!). ಆದ್ದರಿಂದಲೇ ಈ ಮಹಾಶಯ ಬಿ.ಪಿಎಲ್ (ಬಡತನರೇಖೆ ಕೆಳಗೆ) ಅಂಕಿಅಂಶ ನೀಡಿದರೆ ಬಡತನವೇ ಕಾಣುತ್ತದೆ. ಅದರ ಬದಲು ದೊಡ್ಡ ದೊಡ್ಡ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮುಂದೆ ಮಾಡಿ ಎಂದಿದ್ದಾನೆ. ಅಂದರೆ ಬಡತನ ಮರೆಮಾಚಿ ಬಡವರನ್ನು ಕಡಿತ ಮಾಡುವ, ಅದಕ್ಕಾಗಿ ಬಡವರನ್ನೇ ನಿರ್ಮೂಲಗೊಳಿಸುವ ಚತುರೋಪಾಯದ ವಂಚನೆಯ ಪಾಠ ಹೇಳಿದ್ದಾರೆ. ವಿಶೇಷವಾಗಿ ಅಲ್ಲಿ ಯಾರು ಏನು ಪಾಠ ಹೇಳಿದರು ಎಂಬುದು ಅಲ್ಲಿದ್ದವರಿಗೇ ಗೊತ್ತು. ಎಲ್ಲವೂ ಮುಚ್ಚಿದ ಬಾಗಿಲಲ್ಲೇ. ಮೇಲಾಗಿ ಪ್ರತಿಯೊಂದು ಸಚಿವರೊಂದಿಗೆ ಮೋದಿ ಮಹಾಶಯ, ವೈಯಕ್ತಿಕವಾಗಿ ಸಮಾಲೋಚನೆ ನಡೆಸಿ 'ಖಾತೆ'ಯನ್ನು 'ಸಮರ್ಥ'ವಾಗಿ ನಿಭಾಯಿಸಲು ಸೂಚಿಸಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಯಾಕೆಂದರೆ ಇದೇ ಮೋದಿ ಸರ್ಕಾರದ ಕಾನೂನು, ಆಡಳಿತವನ್ನು ಹೇಗೆಲ್ಲಾ ಸಂಘ ಪರಿವಾರದ ಬುಡಮೇಲು ಕೃತ್ಯಗಳಿಗೆ ಬಳಸಬಹುದು, ಆಡಳಿತವನ್ನು ತೊಡಗಿಸಬಹುದು' ಎಂಬುದನ್ನು ತೋರಿಸಿದ್ದಾನೆ. ನ್ಯಾಯಾಲಯಗಳಿಂದ ಛೀಮಾರಿಯನ್ನು ಹಾಕಿಸಿಕೊಂಡಿದ್ದಾನೆ. ಇಂತಹವರೆಲ್ಲರಿಂದ ಅಲ್ಲಿ ನಡೆದಿದ್ದು


ನಡುನೀರಿನಲ್ಲಿ ಜನತೆ

ಆರ್.ಎಸ್.ಎಸ್.ನ ದ್ವೇಷ ಪೂರಿತ ಸಿದ್ಧಾಂತದಿಂದ ಮೆದುಳು ತೊಳೆಯುವ ಕೆಲಸ ಮತ್ತು ಅದಕ್ಕೆ ಆಡಳಿತವನ್ನು ತೊಡಗಿಸುವ ಯೋಜನೆ.

ಕೋಮುವಾದಿ ಕ್ರೋಢೀಕರಣ

ಆರಂಭದಿಂದಲೂ ಕರ್ನಾಟಕವನ್ನು ಗುಜರಾತನ್ನಾಗಿಸುವುದಾಗಿ ಸಾರುತ್ತಲೇ ಬಂದಿರುವ ಬಿಜೆಪಿಯು 16 ತಿಂಗಳ ಅಸಮರ್ಥ ಆಡಳಿತದಲ್ಲಿ ಬರೀ ಅಭಿವೃದ್ಧಿಯ ಗಿಲೀಟು ಮಾತುಗಳಲ್ಲೇ ಕಾಲಹರಣ ಮಾಡಿದೆ. ಇಂದು ಎಲ್ಲಾ ಜನವಿಭಾಗಗಳು ಸಮಸ್ಯೆಗಳಿಂದ ತೊಳಲಾಡುತ್ತಿವೆ. ಪ್ರತಿಭಟನೆಗಳು ಬೀದಿಗಳಲ್ಲಿ, ಕಛೇರಿ, ಆಸ್ಪತ್ರೆಗಳಲ್ಲಿ ಸ್ಫೋಟಗೊಳ್ಳುತ್ತಿವೆ. ಈ ಸಮಸ್ಯೆ ಬಗೆಹರಿಸುವ ಸರ್ಕಾರ ಅತೃಪ್ತಿಯನ್ನು ಹಾದಿತಪ್ಪಿಸಲು ಬಯಸುತ್ತದೆ. ಆದ್ದರಿಂದಲೇ ಗುಜರಾತ್‌ನ ಹತ್ಯಾಕಾಂಡದ ಮಾದರಿಗೆ ಹೆಚ್ಚಿನ ಚಾಲನೆ ನೀಡಲು ಅದು ಬಯಸಿದಂತಿದೆ. ಜೊತೆಯಲ್ಲಿ ದೀರ್ಘಾವಧಿಯಲ್ಲಿ ಆಡಳಿತ ಅಧಿಕಾರ ಹಿಡಿದಿಡಬೇಕಾದರೆ ಅಂತಹುದೇ ಹಾದಿ ಎಂದೂ ಅದು ನಂಬಿದೆ.

ಆಪತ್ತು

ಬಿಜೆಪಿ ಚುನಾಯಿತ ಸರ್ಕಾರಗಳಿರುವ ಇತರೆ ರಾಜ್ಯಗಳಾವುವೂ ಇಂತಹ ಬೈಠಕ್ ನಡೆಸಿಲ್ಲ. ಅದು ಕರ್ನಾಟಕದಲ್ಲೇ ಯಾಕೆ? ಯಾಕೆಂದರೆ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದನ್ನು ಕ್ರೋಢೀಕರಿಸಲು ಕೋಮುವಾದಿ ಕೃತ್ಯಗಳಿಗೆ ಮೊರೆಹೋಗಿವೆ. ರಾಜ್ಯದಲ್ಲಿ ಕೋಮುಗಲಭೆಗಳು, ಅಲ್ಪಸಂಖ್ಯಾತರ ಮೇಲೆ ನಿರಂತರ ಧಾಳಿಗಳು, ಬಾಬಾಬುಡನ್‌ಗಿರಿಯಲ್ಲಿ ಬುಡಮೇಲು ಕೃತ್ಯಗಳು, ಶಿಕ್ಷಣ ರಂಗದಲ್ಲಿ ಕೋಮುವಿಷದ ವಿಸ್ತರಣೆ, ಗೋರಕ್ಷಣೆ ಬಳಕೆ, ದುಡಿವ ಜನರ ಮೇಲೆ ಧಾಳಿಗಳು ಹೀಗೆ 'ಅಭಿವೃದ್ಧಿಯ' ಸದ್ದುಗದ್ದಲಗಳ ನಡುವೆಯೇ ಗುಪ್ತ ಅಜೆಂಡಾ ಜಾರಿ ನಡೆದಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವ, ಕೋಕಾದಂತಹ ಕ್ರೂರ 'ಭಯೋತ್ಪಾದನಾ' ಕಾನೂನುಗಳು ಈ ಸರ್ಕಾರದ ಕೈಯಲ್ಲಿಟ್ಟುಕೊಂಡು ಸಿದ್ಧವಾಗಿದೆ. ಈ ಶಿಬಿರ ಬೈಠಕ್‌ನ ವೈಖರಿ ಗಮನಿಸಿದರೆ ಕರ್ನಾಟಕಕ್ಕೆ ಮಹಾವಿಪತ್ತು ಕಾದಿರುವುದು ನಿಚ್ಚಳ.

ಭೂಮಿಕೆ ಸನ್ನದ್ಧತೆ

ಇದರೊಂದಿಗೆ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಈಗಾಗಲೇ ಗೋರಕ್ಷಣೆ ಗೋಮಾಂಸ ನಿಷೇಧದಂತಹ ವಿಷಯಗಳಿಂದ ಆಹಾರದ ಹಕ್ಕಿನ ಮೇಲಿನ ಧಾಳಿ ನಡೆಸುತ್ತಲೇ ಬಂದಿರುವ ಪರಿವಾರವು ಈಗ ರಾಮಚಂದ್ರಪುರ ಮಠದ ಚಾಲಿತ ಅಖಿಲ ಭಾರತ ಗೋರಕ್ಷಣಾ ಯಾತ್ರೆಯನ್ನು ಆರಂಭಿಸಿದೆ. ಇದು ಗೋವಿನ ಬಗೆಗೆ ಪ್ರೀತಿ ಬೆಳೆಸುವ ಉದ್ದೇಶದ್ದಲ್ಲ. ಬದಲಾಗಿ 'ತ್ರೇತಯುಗದಲ್ಲಿ ಸೀತಾಮಾತೆ, ದ್ವಾಪರ ಯುಗದಲ್ಲಿ ಭೂಮಾತೆ ಯಂತೆ ಕಲಿಯುಗದಲ್ಲಿ ಗೋಮಾತೆ ರಕ್ಷಣೆ ಆಗಬೇಕು.

ಅದಕ್ಕಾಗಿ ಸಮರದ ಕಹಳೆ ಊದಿ, ಎ
ಎಂದೆಲ್ಲಾ ಯುದ್ಧ ಸಾರಿದ ದಾಟಿಯಲ್ಲೇ ರಾಘ
ಸ್ವಾಮಿ ಪ್ರಚೋದನಾತ್ಮಕವಾಗಿ ಮಾತನಾಡಿ
ಉದ್ಘಾಟಿಸಿದ್ದಾರೆ. ಈ ಜಾತಾ ಕರ್ನಾಟ
ಹಾದು ಹೋಗಲಿದೆ. ಇದೇ ಹೊತ್ತಿನಲ್ಲಿ ಸರ
ಎಲ್ಲಾ ಜಿಲ್ಲೆಗಳಲ್ಲಿಯೂ ಗೋಸಾಗ
ಸಾರ್ವಜನಿಕ ಸ್ಥಳಗಳಲ್ಲಿ ಕಸಾಯಿ
ನಿಯಂತ್ರಣದಂತಹ ಸೂಚನೆ ನೀಡಿದೆ.
ದಶದಿಕ್ಕುಗಳಲ್ಲಿಯೂ ಕೋಮು ಘ
ಸ್ಫೋಟಗೊಳಿಸಲು ಭೂಮಿಕೆಯ ಸಿದ್ಧತೆ ನಡ
ಇಂತಹವರಿಂದ ತರಬೇತಿ ಪಡೆದ ಸಚಿವರು, ಅ
ಎತ್ತ ಕಡೆ ನಿಂತೀತು? ಮೋದಿ ಮಾದ
ಹತ್ಯಾಕಾಂಡದ 'ಪ್ರೋಗ್ರಾಂ' ಮಾದರಿಗೆ ಹೊ
ಇದ್ದೀತೆ? ಕೊಲೆಗಳ ರಕ್ತದ ಕಲೆ ತೊಳೆ
ಅಭಿವೃದ್ಧಿಯ ಹುಸಿ ಪ್ರಚಾರ ಹರಿಯಬಿಡದೆ

ಈ ಅಜೆಂಡಾ ವಿಫಲಗೊಳಿಸಬೇಕು

ಒಂದಂತೂ ಸ್ಪಷ್ಟ. ಬಿಜೆಪಿ ಸರ್ಕಾರದ
ಹೆಚ್ಚು ಹೆಚ್ಚು ನಿಯಂತ್ರಣ ಸಾಧಿಸಲು ಆರ್‌ಎಸ
ಸತತ ಯತ್ನಿಸುತ್ತಿದೆ. ಹಂತಹಂತವಾಗಿ
ಸಾಧಿಸುತ್ತಿದೆ. ಪಕ್ಷದೊಳಗಿನ ಭಿನ್ನಮತ
ಬಳಸುತ್ತಿದೆ ಅದೂ ಹಿಂಬಾಗಿಲ ಮೂಲಕ.
ಸಾಂಸ್ಕೃತಿಕ ಚಟುವಟಿಕೆಗಳಿಗಷ್ಟೇ ಈ ಸ
ಸೀಮಿತವಾಗಿದ್ದರೆ ಈ ರಾಜಕೀಯದ
ತೂರಿಸುವುದೇಕೆ? ಬೇಕಿದ್ದರೆ ಚುನಾವಣೆಗೆ
ಆರಿಸಿ ಬರಬಹುದಲ್ಲ. ಇದು ಸಂಘಕ್ಕೆ ಬ
ಜನತೆಗೆ ಮುಖ ತೋರಿಸದ ಇಂತಹ ಸಂ
ಯೋಜಿಸುವ ಬಡಮೇಲು ಕೃತ್ಯಗಳು ಪಿ
ಸ್ವರೂಪದಲ್ಲೇ ಇರುತ್ತವೆ. ಹಾಗೆಯೇ ಇಡೀ ಆ
ಪ್ರಭುತ್ವವನ್ನು ತನ್ನ ಪ್ರತಿಗಾಮಿ ವಿಚಾರಗ
ಪ್ರಭಾವಿತಗೊಳಿಸುವುದು ತನ್ನ ಸೇವಕರ ಮ
ಹಿಡಿತ ಸಾಧಿಸಿ ಧಾಳಿ ನಡೆಸುವುದು
ಕಾರ್ಯವೈಖರಿ. ಇಲ್ಲಿ ಚುನಾಯಿತ ಸರ್ಕಾರವ
ಇದಕ್ಕೆ ಪೂರ್ಣ ಅವಕಾಶ ಕಲ್ಪಿಸುತ್ತಿದೆ ಎಂ
ಗಂಭೀರ ವಿಷಯ. ಹೀಗಾಗಿ ಇ
ಸೌಹಾರ್ದತೆಗೆ, ಧರ್ಮ ನಿರಪೇಕ್ಷತೆ, ಪ್ರಜಾಪ್ರಭ
ಇಡೀ ನಾಗರೀಕ ಸಮಾಜಕ್ಕೆ ಗಂಡಾಂತರಕಾರಿ
ಗುಪ್ತ ಅಜೆಂಡಾ ಜಾರಿಯ ಕಸರತ್ತುಗಳನ್ನು
ಪ್ರಜಾಸತ್ತಾತ್ಮಕ ಜನತೆ ವಿಫಲಗೊಳಿಸಬೇಕು.

ಭಗತ್‌ಸಿಂಗ್‌ನಲ್ಲಿ 'ಕ್ರಾಂತಿ'ಇಲ್ಲ...

ಪು[illegible] 11 ರಿಂದ

ಅ[illegible] ಗಳನ್ನು ಪರೋಕ್ಷವಾಗಿ ಬಿಂಬಿಸುವ ಸಮ[illegible] ಪುರಾಣಗಳನ್ನು ಪುಣ್ಯಕತೆಗಳನ್ನು ಸೃಷ್ಟಿಸಿದವರು ಯಾರು ಎಂಬ ಬಗೆಗೆ ಮಾತ್ರ ಪುಸ್ತಕ ಮೌನ ವಹಿಸಿದೆ. ಇದೊಂದು ಆಕಸ್ಮಿಕ ಮೌನವಲ್ಲ. ಇದೊಂದು ಆತ್ಮವಂಚಕ ಕಪಟ ಮೌನ.

ಮನುಷ್ಯತ್ವಕ್ಕೆ, ಮನುಷ್ಯತ್ವದ ಘನತೆಗೆ ಘೋರ ಅಪಮಾನವನ್ನೆಸಗುವ ನೀಚ ಅಸ್ಪೃಶ್ಯತೆ ತಾರತಮ್ಯ ನಿವಾರಿಸಿಕೊಳ್ಳಲು ಸಿದ್ಧವಿಲ್ಲದ ಹಿಂದೂ ಜಾತಿವಾದಿ ಕರ್ಮಠರೊಂದಿಗೆ ಸೆಣಸಿ, ಸೆಣಸಿ ರೋಸಿದ ಅಂಬೇಡ್ಕರ್ ಕೊನೆಗೆ 'ಹಿಂದೂ ಧರ್ಮವನ್ನೇ ತ್ಯಜಿಸಿ, ಬೌದ್ಧಧರ್ಮವನ್ನು ಅಪ್ಪಿಕೊಂಡರು.

ಸದಾ ಹಿಂದುತ್ವದ ಡಂಗೂರ ಬಾರಿಸುವ ಸಂಘ ಪರಿವಾರ ಇದೇ ಘಟನೆಯನ್ನೇ ಹೇಗೆ ಕ್ರಿಶ್ಚಿಯನ್, ಮುಸ್ಲಿಂ ಧರ್ಮದ ವಿರುದ್ಧ ಬೆಳೆಸಲು ಯತ್ನಿಸಿದೆ ಎಂಬುದನ್ನು ಇಲ್ಲಿ ಗಮನಿಸಬೇಕು!

ಪುಸ್ತಕದ ಮೊದಲಲ್ಲೇ... ಅಸ್ಪೃಶ್ಯತೆ ತೊಡೆದು ಹಾಕಲು ನೂರಾರು ವರ್ಷಗಳಿಂದ ಹಿಂದೂ ಸಮಾಜಕ್ಕೆ ಸೇರಿದ ವಿಚಾರವಂತ ಹಿರಿಯರು ಪ್ರಯತ್ನಿಸುತ್ತಾ ಬಂದಿದ್ದಾರೆ... ಎನ್ನುತ್ತಾ... ಈ ನಿಟ್ಟಿಯಲ್ಲಿ ತನ್ನ ವಿಚಾರ ಪರಂಪರೆಗೆ ಸಂಬಂಧವೇ ಇಲ್ಲದ ಬಸವಣ್ಣ, ರಮಾನಂದ, ಕಬೀರ್ ಮುಂತಾದವರಿರುವ ಪಟ್ಟಿಗೆ ಬುದ್ಧನನ್ನು ಸೇರಿಸಿಬಿಟ್ಟಿದೆ. ಆಹಾ!! ಪ್ರತಿಭಟನೆಯ ಪರಂಪರೆಯನ್ನೇ ನುಂಗಿ ನೊಣೆಯುವ ಪುರೋಹಿತಶಾಹಿ ಷಡ್ಯಂತ್ರಕ್ಕೆ ಎಣೆಯುಂಟೇ..!

'ಹಿಂದೂ ಸಮಾಜದಲ್ಲಿ ಕಷ್ಟಪಟ್ಟವರಿಗೆ ನ್ಯಾಯ ದೊರೆಯಲೇ ಬೇಕು..' ಇದು ಜಾತಿಯತೆ, ಅಸ್ಪೃಶ್ಯತೆ ಕಠೋರ ಕ್ರೌರ್ಯದಲ್ಲಿ ನೊಂದು ಬೆಂದು ಶತ ಶತಮಾನಗಳ ಕಾಲ ಬೆಳಕನ್ನೇ ಕಾಣದೇ ಬದುಕನ್ನೇ ಕಳಕೊಂಡ ಮೇಲ್ಜಾತಿಯ ಮೇಲ್ವರ್ಗಗಳ ಗುಲಾಮಗಿರಿಯಲ್ಲೇ ಬದುಕನ್ನೆಲ್ಲಾ ತೇಯ್ದು ಸವೆದು ಹೋದ ದಲಿತರ ಕಷ್ಟಗಳ ಬಗೆಗೆ ಈ ಪುಸ್ತಕದಲ್ಲಿ ಬಳಸಲಾಗಿರುವ ವಾಕ್ಯ. ಎಷ್ಟು ಸಲೀಸಲ್ಲವೇ?

ಇದು ಸಂಘಪರಿವಾರದ ಭಾಷೆ. ಇದು ಸ್ಪಷ್ಟವಾಗಿ
ಕೋಟಿ ಕೋಟಿ ದಲಿತರನ್ನು ಶೂದ್ರರನ್ನು ಸಾವಿ
ವರ್ಷಗಳ ಕಾಲ ತುಳಿದ, ಅವರ ಬದುಕನ್ನು ಜ
ಹಿಂಡಿ 'ನರಕ' ಮಾಡಿದ ಶೋಷಕ ವರ್ಗ ಸರಾ
ಬಳಸಬಹುದಾದ ಭಾಷೆ. ಅನುಮಾನವೇ ಬ

ಅಸ್ಪೃಶ್ಯತೆ, ಜಾತಿಯತೆಯ ಬಗೆಗಿನ
ಬರಹದಲ್ಲಿ ದಲಿತರನ್ನು ಜೀವಂತ ಸುಡುವುದು,
ಮಹಿಳೆಯ ಮೇಲೆ ನೀಚ ಸಾಮ
ಅತ್ಯಾಚಾರಗಳನ್ನು ನಡೆಸುವುದು, ಮಲ ತಿನ್ನಿಸು
ಮೂತ್ರ ಕುಡಿಸುವುದು ಇಂತಹ ಕೃತ್ಯಗಳ ಬಗೆ
ಪುಸ್ತಕದಲ್ಲಿ ಏನಾದರೂ ಕಿಂಚಿತ್ ಪ್ರ
ಇರಬೇಕಿತ್ತೆಂದು ನಿರೀಕ್ಷಿಸಿದರೆ ಅದು ಬಹುಶಃ ನ
ತಪ್ಪು.



ಅಂತಃಕರಣವಿಲ್ಲದ ಬಂಡವಾಳಶಾಹಿ ತುತ್ತೂರಿಗಳು

ಜಿ.ಎಸ್.ಮಣಿ


ಬೂರ್ಜ್ವಾ ಅರ್ಥಶಾಸ್ತ್ರಜ್ಞರು ...ದ ಕಾಲ ಮುಗಿದು ಬೆಳವಣಿಗೆ ...ವಾಗಿದೆ ಎಂದು ಬೊಬ್ಬೆ ...ುತ್ತಿದ್ದಾರೆ. ಬಂಡವಾಳಶಾಹಿಯ ...ೀಲುಗಳು ಇಂತಹ ಬೊಬ್ಬೆ ಹೊಡೆದು ...ಳ್ಳಲು ತಕ್ಕುದಾಗಿವೆ. ಕಳೆದ ವರ್ಷದಲ್ಲಿ ... ಬೆಳವಣಿಗೆಯಾಗಿದ್ದರೆ ಆ ಮಟ್ಟದ ...ದ ಬೆಳವಣಿಗೆ ಬೆಳವಣಿಗೆಯಾಗಿಯೇ ...ೆ. ಇದು ಅಂಗಡಿಗಳಲ್ಲಿನ ಕಡಿತದ ...ದಂತೆ. ಇರುವ ಬೆಲೆಯನ್ನು ಶೇ.200 ...ಿಸಿ ಅದರ ಮೇಲೆ ಶೇ50 ರ ಕಡಿತ "ಶೇ 50 ರ ಕಡಿತವೆಂದು ಭಾರಿ ...ಾರಾಟ ಮಾಡಿದಂತೆ. ಕೊಳ್ಳುವ ...ಗೆ ದೊಡ್ಡ ಟೋಪಿ. ಅದೇ ರೀತಿ ...ೆಯು ಕುಸಿತವಾಗುತ್ತಿರುವಾಗ ಕುಸಿದ ...ದ ಅಲ್ಪ ಬೆಳವಣಿಗಯಾದರೂ ಅದನ್ನೆ ...ಗೆ ಎಂದು ದೋಡ್ಡದಾಗಿ ...ಾಗುತ್ತಿದೆ. ಇದಕ್ಕೆ ದನಿಗೂಡಿಸಿ ಹಲವು ...ಳಶಾಹಿ ಅರ್ಥಶಾಸ್ತ್ರಜ್ಞರು ತಮ್ಮ ...ಊದುತ್ತಿದ್ದಾರೆ. ...ಳಗಿನ ಅಂಶಗಳನ್ನು ನೋಡಿ:

- ಉದ್ಯೋಗಗಳ ಬೆಳವಣಿಗೆ ಎಲ್ಲೂ ಆಗುತ್ತಿಲ್ಲ
- ಹೆಚ್ಚು ಹೆಚ್ಚಾಗಿ ಉದ್ಯೋಗಗಳ ಕಡಿತ ಅಥವಾ ಉದ್ಯೋಗದಲ್ಲಿರುವವರ ಸಂಬಳದಲ್ಲಿ ಕಡಿತ ನಡೆದೆ ಇದೆ
- ಜಗತ್ತಿನಾದ್ಯಂತ ಕೋಟಿಗಟ್ಟಲೆ ಜನ ಉಪವಾಸ ಬೀಳುತ್ತಿದ್ದಾರೆ
- ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಕೃಷಿಯ ಬೆಳವಣಿಗೆ ದರ ಇಳಿಮುಖವಾಗಿದೆ
- ಆಮದು ರಫ್ತುಗಳ ದರವೂ ಇಳಿಮುಖವಾಗಿವೆ

ಪರಿಸ್ಥಿತಿ ಇಷ್ಟು ಹದಗೆಟ್ಟಿರುವಾಗ ಆರ್ಥಿಕದ ಬೆಳವಣಿಗೆ ಆಗುತ್ತಿದೆ ಎಂದರೆ ಅದಕ್ಕೆ ಏನಾದರೂ ಅರ್ಥವಿದೆಯೆ?

ಭಾರತದ ಹಣದುಬ್ಬರದ ಕತೆ

ಭಾರತದ ಹಣದುಬ್ಬರದ ಕತೆಯೂ ಹೀಗೆಯೆ ಇದೆ. ಇಲ್ಲೂ ಬಂಡವಾಳಶಾಹಿ ಅಳತೆಗೋಲುಗಳ ನೆರವು ಪಡೆದು ಹಸಿ ಸುಳ್ಳುಗಳನ್ನು ಹೇಳಲಾಗುತ್ತಿದೆ. ಬೆಲೆ ಏರಿಕೆಯ ದರ ಕಡಿಮೆಯಾದಂತೆ ಬೆಲೆಗಳೇ ಕಡಿಮೆಯಾದವೆನೊ ಎಂಬಂತೆ ಬಿಂಬಿಸಲಾಗುತ್ತಿದೆ. ನಿಜದಲ್ಲಿ ಬೆಲೆ ಹತೋಟಿಗೆ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರ ಈಗ ಬೆಲೆಗಳ ಏರಿಕೆ ದರ ಕಡಿಮೆಯಾದೊಡನೆ ಏನೋ ಮಹಾ ಸಾಧನೆ ಮಾಡಿರುವಂತೆ ಬೊಬ್ಬೆ ಹೊಡೆಯುತ್ತಿವೆ. ಬೆಲೆ ಏರಿಕೆಯ ದರ ಕಡಿಮೆಯಾಗಿದೆಯೆ ಹೊರತು ಬೆಲೆಗಳಲ್ಲ. ಬೆಲೆಗಳು ಏರುತ್ತಲೆ ಇವೆ. ಆಹಾರ ಪದಾರ್ಥಗಳ



ಬೆಲೆ ಏರುತ್ತಲೆ ಇರುವುದರಿಂದ ಜನಸಾಮಾನ್ಯರ ಜೀವನ ಕಷ್ಟವಾಗುತ್ತಿದೆ. ಬೆಲೆಯೆರಿಕೆ ದರ ಕಡಿಮೆಯಾಗಿದೆಯೆಂದರೆ ಜನಸಾಮಾನ್ಯರ ಹೊರೆ ಕಡಿಮೆಯಾಗಿದೆಯೆಂದು ಅರ್ಥವಲ್ಲ.

ಬಂಡವಾಳಶಾಹಿಗಳ ಅಳತೆಗೋಲು ಗಳು ಜನಸಾಮಾನ್ಯರ ಬವಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ತಾಂತ್ರಿಕ ಕಾರಣಗಳನ್ನು ಇವು ಹೇಳಬಹುದೆ ಹೊರತು ಜನರ ನೋವುಗಳನ್ನು ಕಡಿಮೆ ಮಾಡುವುದಿಲ್ಲ. ಬಂಡವಾಳಶಾಹಿ ಮಾಧ್ಯಮಗಳಲ್ಲಂತೂ ಈ ಸುಳ್ಳುಗಳದ್ದೆ ತುತ್ತೂರಿ.

ಹಣಕಾಸಿನ ಅತೀ ಪ್ರಸರಣದ ಅಪಾಯ

ದೇಶದಲ್ಲಿ ಆರ್ಥಿಕ ಹಿಂಜರಿತವನ್ನು ಎದುರಿಸಲು ಹಲವು ವಿತ್ತೀಯ ಕ್ರಮಗಳನ್ನು ಆರ್ಥಿಕ ಪ್ರಚೋದಕವಾಗಿ ಬಳಸಲಾಯಿತು. ಕಡಿಮೆ ಬಡ್ಡಿ ದರದಲ್ಲಿ ಸಾಲ ಇತ್ಯಾದಿಗಳನ್ನು ಭೂಮಿ ಕಟ್ಟಡ ವ್ಯಾಪಾರಿಗಳಿಗೆ, ಉದ್ಯಮಿಗಳಿಗೆ ನೀಡಲಾಯಿತು. ಇಂತಹ ಕ್ರಮಗಳಿಂದ ಆರ್ಥಿಕ ಚೇತರಿಕೆ ಆಗಿರುವುದು ಅಷ್ಟರಲ್ಲೆ ಇದೆ.

ಈಗ ಭಾರತಿಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ವೈ.ವಿ.ರೆಡ್ಡಿಯವರ ಪ್ರಕಾರ ಈಎಲ್ಲ ಕ್ರಮಗಳ ಒಟ್ಟು ಪರಿಣಾಮವಾಗಿ ಹಣಕಾಸಿನ ಅತೀ ಪ್ರಸರಣವಾಗಿ ಅದು ಆತಂಕದ ಮಟ್ಟಕ್ಕೆ ತಲುಪಿದೆ. ಶೀಘ್ರದಲ್ಲೆ ಹಣದುಬ್ಬರ ಹೆಚ್ಚಾಗಿ ತೀವ್ರ ಬೆಲೆಯೆರಿಕೆ ಉಂಟಾಗಲಿದೆಯಂತೆ. ದೇಶಕ್ಕೆ ತೀವ್ರ ಸಂಕಷ್ಟದ ದಿನಗಳು ಬರಬಹುದೆಂಬುದು ಅವರ ಅಭಿಪ್ರಾಯ.

ಹಣಕಾಸು ವಲಯದ ಸುಧಾರಣೆಗಳನ್ನು ಮುಂದುವರಿಸುವ ಮಾತುಗಳನ್ನೂ ಉದಾರಿಕರಣವಾದಿಗಳು ಆಡುತ್ತಿದ್ದಾರೆ. ಈ ಕ್ರಮಗಳ ದುಷ್ಪರಿಣಾಮ ಗಳನ್ನು ದೇಶದ ದುಡಿವ ಜನತೆ ಅನುಭವಿಸಬೇಕಾಗುತ್ತದೆ. ಆದ್ದರಿಂದಲೆ ದುಡಿವ ಜನ ಈಗ ಪ್ರತಿಭಟನೆಯ ಅಸ್ತ್ರವನ್ನು ಹರಿತಗೊಳಿಸತೊಡಗಿದ್ದಾರೆ.

...ಗಂಭೀರ ಸಿನಿಮಾ ಅಗತ್ಯ'

...ರಿಂದ

...ವರಷ್ಟೇ ಹವಾನಿಯಂತ್ರಿತ ಸಿನಿಮಾ ...ಲ್ಲಿ ಕುಳಿತು ಸಿನಿಮಾ ನೋಡಲು ಸಾಧ್ಯ. ...ಕೊಠಡಿಗೂ, ಕಾರ್‌ಗೂ, ಕೆಲಸ ಮಾಡುವ ...ಲ್ಲಿಯೂ ಎ/ಸಿ... ಇಂತಹ ಜನರಷ್ಟೇ ...ಶದಲ್ಲಿ ಚಿತ್ರಿಸಿದ 'ಮೋಹಕ' ಸಿನಿಮಾಗಳನ್ನು ...ಹುದು. ಈ ರೀತಿಯ ಜನವರ್ಗದ ... ಏರಿಕೆಯಾದಂತೆ ಶ್ರೀಮಂತ ಹಾಗೂ ...ನಡುವಿನ ಕಂದಕ ಹೆಚ್ಚಾಗುತ್ತದೆಯೇ ವಿನಃ ...ಭಾಗಕ್ಕೂ ಒಳಿತುಂಟಾಗುವುದಿಲ್ಲ. ಆದರೂ ...ಮಾಗಳು ನ್ಯೂಯಾರ್ಕ್‌ನಂಥ ಜಾಗಗಳಲ್ಲಿ ... ಮಾಡುವುದು ಕೇವಲ ಮೇಲ್ ಮಧ್ಯಮ ...ಪ್ರೇಕ್ಷಕರನ್ನು ಸೆಳೆಯಲು ಹಾಗೂ ಅನಿವಾಸಿ ...ಯರು ಹಾಗೂ ಹೊರದೇಶಗಳ ಪ್ರೇಕ್ಷಕರಿಂದ ... ದೋಚುವ ಮಾರುಕಟ್ಟೆಯ ತಂತ್ರದ ...ಗಿ.

ಪ್ರ: ಅರವಿಂದ ಅಡಿಗರ 'ವೈಟ್ ಟೈಗರ್' ಕೃತಿಗೆ ಈಚೆ ಬೂಕರ್ ಪ್ರಶಸ್ತಿ ಬಂತು. ಭಾರತವನ್ನು ಕೆಳಮಟ್ಟದಲ್ಲಿ ಚಿತ್ರಿಸಿರುವುದರಿಂದಲೇ ಅದಕ್ಕೆ ಪ್ರಶಸ್ತಿ ದೊರಕಿತು ಎಂದು ಹೇಳುತ್ತಾರೆ. ಅದರ ಬಗ್ಗೆ ಏನು ಹೇಳ್ತೀರಿ.

ಉ: ನಾನು ವೈಟ್ ಟೈಗರ್ ಪುಸ್ತಕ ಓದಿಲ್ಲ. ಆದರೆ ತಾವು ಹೇಳಿದ ಮಾತನ್ನು ಕೇಳಿದ್ದೀನಿ. ಬಹಳಷ್ಟು ಲೇಖಕರು ಹಾಗೆ ಚಿತ್ರಿಸಿರುವುದನ್ನು ಓದಿದ್ದೀನಿ. ಆದರೆ ನನಗನ್ನಿಸೋದು ಭಾರತದ ಸ್ಥಿತಿ-ಗತಿಯ ಬಗ್ಗೆ ಎಷ್ಟೊಂದು ರೀತಿಯ ಪುಸ್ತಕಗಳನ್ನು ಬರೆದಿದ್ದಾರೆ. ಆದರೆ ಯಾಕೆ ಈ ದೇಶದ ವಿಭಜನೆ ಕುರಿತು ಹೆಚ್ಚು ಪುಸ್ತಕಗಳು ಬಂದಿಲ್ಲ. ಬಂದಿರುವ ಬಹಳಷ್ಟು ಪುಸ್ತಕಗಳಲ್ಲಿ ಪಾಕಿಸ್ತಾನವನ್ನು ಖಳನಾಯಕನ ರೀತಿಯಲ್ಲಿ ಬಿಂಬಿಸಲಾಗಿದೆ. ನಾನೂ ಹಲವು ಬಾರಿ ನನ್ನ ಕೆಲಸ ನಿಮಿತ್ತ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದೇನೆ. ಅಲ್ಲಿ ಜನರೂ ಇಲ್ಲಿಯಂತೆಯೇ ಇದ್ದಾರೆ. ತಿನ್ನಾರೆ, ಇಷ್ಟ ಬಂದ ಹಾಗೆ ಇರ್ತಾರೆ. ನಮ್ಮ ಚಲನಚಿತ್ರಗಳನ್ನು ಹೆಚ್ಚು ನೋಡ್ತಾರೆ. ಭಾರತದ ಬಗೆಗೆ ಅವರಿಗೆ ಗೌರವ ಇದೆ. ಇಲ್ಲಿಯಂತೆ ಅಲ್ಲಿಯೂ ಭ್ರಷ್ಟರಿದ್ದಾರೆ. ಒಳ್ಳೆಯವರೂ ಇದ್ದಾರೆ. ಈ ಬಾಂಧವ್ಯ, ಸಾಮ್ಯತೆ ಬಗ್ಗೆ ಹೆಚ್ಚು ಜನರು ಬರೆಯುತ್ತಿಲ್ಲ.

ಪ್ರ: ಇವತ್ತು ನಮ್ಮ ದೇಶದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆಯಾ?

ಉ: ಹಾ.. ಹೌದು ಸಾಧ್ಯವಿದೆ ಅನ್ನೋದು ನಿಜ. ಗಾಂಧೀಜಿ ಬದುಕಿದ್ದ ಗುಜರಾತ್‌ನ ಸಬರಮತಿ ಆಶ್ರಮದ ಬಗ್ಗೆ ನಾನು ಕೇಳಿದ್ದೆ. ಬಹಳ ಸ್ವಚ್ಛಂದವಾದ ಜಾಗ. ತಮ್ಮ ಅಗತ್ಯತೆಗಿಂತಲೂ ಹೆಚ್ಚೇನೂ ಬಯಸದ ಜನರು ಅಲ್ಲಿ ವಾಸವಾಗಿದ್ದಾರೆ. ಅಲ್ಲಿಗೆ ಹೋದರೆ ಗಾಂಧೀಜಿ ಇನ್ನೂ ಇದ್ದಾರೇನೋ ಎಂಬ ಭ್ರಮೆ ಮಾಡುತ್ತದೆ ಅಂತ. ಆದರೆ ಗುಜರಾತ್‌ನಲ್ಲಿ ನಡೆದ ಹಿಂಸೆ, ಕ್ರೌರ್ಯ ಎಲ್ಲವನ್ನೂ ಕಂಡ ಮೇಲೆ ಅಲ್ಲಿನ್ನೂ ಗಾಂಧೀ ಬದುಕಿರಲು ಸಾಧ್ಯವೇ? ಎನ್ನುವ ಅನುಮಾನ ಕಾಡುತ್ತಿದೆ.

ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ (ಇಪ್ಟಾ) ನ ಭಾಗವಾಗಿ ಸಾವಿರಾರು ಕಿಲೋಮೀಟರ್‌ಗಳ ಕಲಾ ಪ್ರವಾಸವನ್ನು ನಾನು ಮಾಡಿದೆ. ಪಾಟ್ನಾದಿಂದ ಸುಮಾರು ಐದು ಘಂಟೆಗಳ ಕಲ್ಲು ರಸ್ತೆಯನ್ನು ಬಹಳ ಕಷ್ಟಪಟ್ಟು ಕುಲುಕಾಡಿ ಕುಲುಕಾಡಿ ಸಾಗಿ ಮಧುಬನಿ ತಲುಪಿದ ಮೇಲೆ ಅಲ್ಲಿನ ಕಲೆಯ ಜೀವಂತಿಕೆ ಕಂಡು ಬೆರಗಾದೆ. ಎಷ್ಟು ಅದ್ಭುತ!! ಅದೇ ರೀತಿ ಗುರುದ್ವಾರದಂತಹ ಪ್ರದೇಶಕ್ಕೆ ಹೋದಾಗ ವಿಧವೆಯರ ಸ್ಥಿತಿಯನ್ನು ಕಂಡು ದಿಗಲಾಯ್ತು. ಈ ಕಾಲದಲ್ಲೂ ಅವರು ತಲೆಬೋಳಿಸಿಕೊಂಡು ಸಾಮಾಜಿಕ ಸಂಸರ್ಗದಿಂದ ದೂರ ಉಳಿದು ಸೂರ್ಯೋದಯಕ್ಕೆ ಮುಂಚೆಯೇ ತಮ್ಮ ಕೆಲಸ ಮುಗಿಸಿಕೊಂಡು ಮನೆ ಸೇರಿ ಬಿಡ್ತಾರೆ. ಇದು ಎಂಥಾ ಶೋಚನೀಯ ಸ್ಥಿತಿ! ಎರಡೂ ಸ್ಥಳವೂ ಭಾರತವೇ!!

(ಲೋಕಸಭಾ ಚಾನೆಲ್‌ನಲ್ಲಿ 'ಹಿಂದೂಸ್ಥಾನ್' ಪತ್ರಿಕೆಯ ಸಂಪಾದಕಿ ಮೃಣಾಲ್ ಪಾಂಡೆಯವರು ನಡೆಸಿಕೊಡುವ 'ಬಾತೋ ಬಾತೋ ಮೇ' ಕಾರ್ಯಕ್ರಮದಲ್ಲಿ ಚಿತ್ರನಟಿ, ನಿರ್ದೇಶಕಿ ನಂದಿತಾ ದಾಸ್ ನೀಡಿದ ಸಂದರ್ಶನದಿಂದ ಆಯ್ದ ಭಾಗಗಳು)



‘ವಾಸ್ತವ ತೆರೆದಿಡುವ ಗಂಭೀರ ಸಿನಿಮಾ ಅಗ

ನಂದಿತಾ ದಾಸ್, ಖ್ಯಾತ ನಟಿ, ನಿರ್ದೇಶಕಿ

ಪ್ರ: ನೀವು ಹಲವು ನಿರ್ದೇಶಕರ ಬಳಿ ಕೆಲಸ ಮಾಡಿದ್ದೀರಿ. ರಾಷ್ಟ್ರೀಯ ಮಟ್ಟದ ಸಿನಿಮಾಗಳಲ್ಲಿ ಪ್ರಾದೇಶಿಕ ಸಿನಿಮಾಗಳಲ್ಲಿ ನಟಿಸಿದ್ದೀರಿ. ನಿಮ್ಮ ಅನುಭವಗಳೇನು? ಇದರ ನಡುವಲ್ಲೇನಾದರೂ ವ್ಯತ್ಯಾಸ ಇದೆಯಾ?

ಉ: ಹಾಗೇನಿಲ್ಲ, ನಾನು ಬಂಗಾಳದಲ್ಲಿ ರಿತುಪರ್ಣೋ ಘೋಷ್, ಹಿಂದಿಯಲ್ಲಿ ಶ್ಯಾಮ್ ಬೆನಗಲ್, ಮಲಯಾಳಂನಲ್ಲಿ ಅಡೂರು ಗೋಪಾಲಕೃಷ್ಣನ್, ಕನ್ನಡದಲ್ಲಿ ಕವಿತಾ ಲಂಕೇಶ್, ಇತ್ತೀಚಿಗೆ ಚಿತ್ರಾ ಪಾಳೇಕರ್‌ರ ಮರಾಠಿ ಸಿನಿಮಾದಲ್ಲೂ ನಟಿಸಿದ್ದೇನೆ. ಅದರಲ್ಲಿ ಯಾವುದೇ ವ್ಯತ್ಯಾಸವನ್ನು ನಾನು ಕಂಡಿಲ್ಲ. ನಾನು ಯಾವ ಪ್ರದೇಶಕ್ಕೆ ಹೋದರೂ ಅಲ್ಲಿಯವಳಾಗಿಯೇ ಹೋಗುತ್ತೇನೆ. ದೊಡ್ಡ ನಿರ್ದೇಶಕರಾಗಲೀ ಹೊಸದಾಗಿ ನಿರ್ದೇಶಿಸುವವರೇ ಆಗಲೀ ಯಾವ ತಾರತಮ್ಯವನ್ನು ಮಾಡುವುದಿಲ್ಲ. ಹೊಸ ನಿರ್ದೇಶಕರಿಗೂ ತಮ್ಮದೇ ಆದ ಹಲವು ಹೊಸ ರೀತಿಯ ಅನುಭವಗಳಿರುತ್ತವೆ. ತಾವು ಅನುಭವಿಸಿದ್ದನ್ನು, ನೋಡಿದ್ದನ್ನ, ಓದಿದ್ದನ್ನ ತೆರೆಯಮೇಲೆ ತರಬೇಕೆಂಬ ಹಂಬಲವಿರುತ್ತದೆ. ಆದಕ್ಕಾಗಿಯೇ ಅವರು ಸಿನಿಮಾ ಮಾಡುತ್ತಾರೆ.

ಪ್ರ: ನೀವು ಈಗ ನಿರ್ದೇಶನದಲ್ಲೂ ತೊಡಗಿದ್ದೀರಿ. . . .

ಉ: ಹೌದು, ನಾನೀಗ ‘ಫಿರಾಕ್’ ಎನ್ನುವ ಚಿತ್ರವನ್ನು ನಿರ್ದೇಶಿಸಿದ್ದೇನೆ. ಅದರಲ್ಲಿ ಐದು ವಿಭಿನ್ನ ಅನುಭವಗಳ ಕಥೆಗಳನ್ನ ಒಟ್ಟಾಗಿ ಹೆಣೆಯಲಾಗಿದೆ. ನಾನು ಹಾಗೂ ಶೃತಿ ಕೊಠಾರಿ ಒಟ್ಟಾಗಿ ಚಿತ್ರಕಥೆ ರಚಿಸಿದೆವು. ಅದು 2002 ರಲ್ಲಿ ಗೋದ್ರಾದಲ್ಲಿ ನಡೆದ ನರಮೇಧದ ಬಳಿಕ ಅಲ್ಲಿನ ಜನರ ಮನಸ್ಸಿನ ಮೇಲೆ ಉಂಟಾಗಿರುವ ಪ್ರಭಾವಗಳನ್ನು ಆಧಾರವಾಗಿಟ್ಟುಕೊಂಡು ನಿರೂಪಿಸಲಾದ ಕಥೆ.

ಪ್ರ: ಈ ಹಿಂದೆ ರಾಹುಲ್ ಢೋಲಾಕಿಯಾ ಎಂಬ ನಿರ್ದೇಶಕರ ಒಂದು ಚಿತ್ರ ‘ಪರ್ಜಾನಿಯಾ’ ಎಂಬುದು ಇಂತದೇ ಕಥೆಯನ್ನಿಟ್ಟುಕೊಂಡು ಬಂದಿತ್ತು. ಬಹಳ ವಿಮರ್ಶೆಗೂ ಈಡಾಯಿತು. ಹಲವರ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಯೆಂದರೆ ಜನರೇ ಗೋಧ್ರಾ ಘಟನೆಯನ್ನು ಮರೆತುಬಿಡುತ್ತಿರುವಾಗ ಈ ಸಿನಿಮಾ ಮಾಡಿ ಏಕೆ ಕೆದಕುತ್ತಾರೆ? ಎಂಬುದು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಉ: ಅರೆ! ಅದ್ಮ್ಯ ಹೇಗೆ ಸಾಧ್ಯ! ಇಡೀ ಬದುಕನ್ನೇ ಬರ್ಬರಗೊಳಿಸಿದ ಘಟನೆ ಅದು. ಸಾವಿರಾರು ಸಂಸಾರಗಳನ್ನು ಬುಡಮೇಲು ಮಾಡಿದ ಆ ಹಿಂಸಾಕಾಂಡವನ್ನು ನೇರವಾಗಿ ಕಂಡ, ಅನುಭವಿಸಿದ ಜನರು ಅದನ್ನು ಹೇಗೆ ಮರೆಯಲು ಸಾಧ್ಯ? ನಾವು ಬೇಕಾದರೆ ಅದನ್ನ ಮರೆತುಬಿಡಬಹುದು. ಜನರು ಖಂಡಿತಾ ಮರೆಯುವುದಿಲ್ಲ. ಆದರೂ ನಾವು ಆ ವಿಷಯಗಳನ್ನು ಕುರಿತು ಸಿನಿಮಾ ಮಾಡುವುದು ಆ ವಿಷಯವನ್ನು ಪದೇ ಪದೇ ಕೆದಕಿ ಜನರಿಗೆ ನೋವುಂಡು ಮಾಡುವುದಕ್ಕಲ್ಲ. ಬದಲಾಗಿ ಇಂತಹ ಘೋರ ಕೃತ್ಯವೊಂದು ನಡೆದಿದೆ. ಮತ್ತೆಂದೂ ಈ ರೀತಿ ನಡೆಯಲು ಆಸ್ಪದ ಕೊಡಬಾರದು ಎಂಬುದನ್ನು ಮನವರಿಕೆ ಮಾಡಿಕೊಡಲು.

ಪ್ರ: ಗುಜರಾತ್‌ನಂತಹ ಸ್ಥಳದಲ್ಲಿ ದೊಡ್ಡ ಹಿಂಸಾಕಾಂಡವೇ ನಡೆದಿದ್ದರೂ ಅಲ್ಲಿನ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ದೊಡ್ಡ ಐಕಾನ್ ಆಗಿ, ನಾಯಕನನ್ನಾಗಿ ಬಲಪಂಥಿಯರು ಬಿಂಬಿಸುತ್ತಿರುವ ಅರ್ಥವೇನು?

ಉ: ಅದು ಐಡೆಂಟಿಟಿ ಪಾಲಿಟಿಕ್ಸ್ ಬಿಟ್ಟು ಮತ್ತೇನೂ ಅಲ್ಲ. ಗುಜರಾತಿನಲ್ಲಿ ಮೋದಿ, ಮಹಾರಾಷ್ಟ್ರದಲ್ಲಿ ರಾಜ್‌ಠಾಕ್ರೆ ಮುಂತಾದವರೆಲ್ಲರೂ ನಡೆಸುವುದು ಇದನ್ನೇ. ಎಲ್ಲಿ, ಯಾರು ಪ್ರಜಾತಾಂತ್ರಿಕವಾಗಿ ಗೆಲ್ಲಲು ಸಾಧ್ಯವಿಲ್ಲವೋ ಅವರು ನಮ್ಮ ವಿವಿಧತೆಯನ್ನು ಬಳಸಿಕೊಂಡು ಜನಗಳನ್ನು ವಿಂಗಡನೆ ಮಾಡುವ ಮೂಲಕ ರಾಜಕೀಯ ಮಾಡುತ್ತಾರೆ. ಸುಪ್ರೀಂ ಕೋರ್ಟ್‌ನ ತೀರ್ಪನ್ನೇ ವಿರೋಧಿಸಿ ಅದಕ್ಕೆ ವಿರುದ್ಧವಾಗಿ ನಡೆಯುವ ರಾಜ್‌ಠಾಕ್ರೆಯವರಂತವರನ್ನು ಇಲ್ಲಿನ ವ್ಯವಸ್ಥೆ ಏನೂ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಅದಕ್ಕೆ ಶಕ್ತಿಯಿಲ್ಲ ಮತ್ತು ಅವರು ಬೋಧಿಸುವ ಐಡೆಂಟಿಟಿಯನ್ನು ನಾವ್ಯಾರೂ ಬಯಸುವುದಿಲ್ಲ. ಅದಾಗಿಯೇ ನಮಗೆ ಕೊಡಲ್ಪಟ್ಟಿರುತ್ತಿದೆ. ನಮ್ಮನ್ನು ಹಿಂದೂ, ಮುಸ್ಲಿಂ, ಕ್ರೈಸ್ತ, ಬಿಹಾರಿ, ಬಂಗಾಳಿ, ಅಸ್ಸಾಮಿ ಎಂದು ಗುರುತಿಸುವುದು ಈ ಆಧಾರದಲ್ಲಿದೆ.

ಪ್ರ: ಇಷ್ಟೆಲ್ಲಾ ವಿದ್ಯಮಾನಗಳು ನಮ್ಮ ಸುತ್ತಲೂ ಘಟಿಸುತ್ತಿರುವಾಗ ಚಿತ್ರರಂಗ ಯಾಕೆ ಅದಕ್ಕೆ ಸೂಕ್ತವಾಗಿ ಸ್ಪಂದಿಸಲಿಲ್ಲ?

ಉ: ನಾನು ಬಾಂಬೆಯ ಆ ‘ಬ್ಲಿಸ್’ ಪರಿವಾರದಿಂದ ಹೊರಗಿರುವುದರಿಂದ ಅದರ ಬಗ್ಗೆ ಏನೂ ಹೇಳಲು ಆಗುವುದಿಲ್ಲ. ಯಾಕೆಂದರೆ ಅಲ್ಲಿನ ಸಿನಿಮಾ ನೋಡುಗರ ಮೇಲೆ ಯಾವ ರೀತಿಯ ಪ್ರಭಾವ ಉಂಟುಮಾಡುತ್ತದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಸಿನಿಮಾದ ಮೂಲಕ ನಮಗನಿಸಿದ್ದನ್ನ ಯಾವ ಮುಜುಗರವೂ, ಹಿಂಜರಿಕೆ ಇಲ್ಲದೆ ನೇರವಾಗಿ ಹೇಳಬೇಕೆಂಬುದು ನನ್ನವಾದ.

ಪ್ರ: ನೀವು ಹಲವು ಸಿನಿಮಾ ಉತ್ಸವ (ಫಿಲಂ



ಫೆಸ್ಟಿವಲ್)ಗಳನ್ನು ನೋಡಿದ್ದೀರಿ. ಹಲವು ಫಿಲಂ ಫೆಸ್ಟಿವಲ್‌ಗಳಲ್ಲಿ ನಿಮ್ಮ ಸಿನಿಮಾಗಳು ಭಾಗವಹಿಸಿವೆ. ಈ ಕುರಿತು ನಿಮ್ಮ ಅನುಭವ ಏನು? ಹಾಗೂ ನಿಮಗೆ ಯಾವ ಫಿಲಂ ಫೆಸ್ಟಿವಲ್ ತುಂಬಾ ಇಷ್ಟವಾಯಿತು?

ಉ: ಚಲನಚಿತ್ರೋತ್ಸವಗಳು ಎಂದರೆ ಸಿನಿಮಾಗಳ ಪ್ರದರ್ಶನಕ್ಕಿರುವ ಮತ್ತೊಂದು ಪ್ಲಾಟ್‌ಫಾರಂ ಅಷ್ಟೆ. ಅಲ್ಲಿಗೆ ಹೋಗುವ ಫಿಲಂಗಳು ಸರ್ವಶ್ರೇಷ್ಠವಾದವು ಎಂಬ ಭ್ರಮೆ ಹೊಂದಬೇಕಾಗಿಲ್ಲ. ಇವತ್ತಿನ ಜಾಹಿರಾತು ಯುಗದಲ್ಲಿ ಒಂದು ಫಿಲಂನ ಬಗ್ಗೆ ದೊಡ್ಡ ಹೋರ್ಡಿಂಗ್ ಹಾಕಿಸಿ ಪ್ರಚಾರಮಾಡಬೇಕಾದರೆ ಅಥವಾ ಟಿ.ವಿ.ಯಲ್ಲಿ ಜಾಹೀರಾತು ನೀಡಬೇಕೆಂದರೆ ದೊಡ್ಡ ಮೊತ್ತದ ಹಣ

ಬೇಕಾಗುತ್ತದೆ. ನಮ್ಮ ಚಲನಚಿತ್ರಗಳ ಬಜೆ
ದೊಡ್ಡದಾಗಿರುವುದಿಲ್ಲ. ಅದಕ್ಕಾಗಿಯೇ
ಫೆಸ್ಟಿವಲ್‌ಗಳನ್ನು ಬಳಸಿಕೊಳ್ಳಲಾಗುತ್ತ
course ಅಲ್ಲಿ ಬರುವ ಚಿತ್ರಗಳಿಗೆ
ಆದಂತಹ ಸ್ಟಾಂಡರ್ಡ್ ಇರುತ್ತದೆ
ನಿರ್ದೇಶಕರು, ಸಿನಿಮಾ ಮಂದಿ ಹೋಗುವ
ಜಗತ್ತಿನ ಸಿನಿಮಾ ರಂಗದಲ್ಲಿ ಜರುಗ
ಬದಲಾವಣೆಯ ಬಗ್ಗೆ ಒಳ್ಳೆಯ Fee
ಸಿಗುತ್ತದೆ. ಅದಕ್ಕಾಗಿ ಅಲ್ಲಿಗೆ ಹೋಗುತ್ತಾರ
ಸಹ ನೂರಾರು ಚಿತ್ರೋತ್ಸವ
ಭಾಗವಹಿಸಿದ್ದೇನೆ. ಪ್ರತಿಯೊಂದೂ ಸಹ
ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ.

ಪ್ರ: ಫಿಲಂ ಫೆಸ್ಟಿವಲ್‌ಗಳಲ್ಲಿ
ಪ್ರದರ್ಶನವಾಗುವ ಸಿನಿಮಾಗಳ ಬಗ
ಬಾಲಿವುಡ್‌ನಲ್ಲೇ ಅಪಸ್ವರ ಇದೆಯ
ಅದು ಏನು?

ಉ: ಇಲ್ಲಿ ಒಂದು ವೈರುಧ್ಯವಿದೆ. ಸ
ಜನರ ಕಷ್ಟ-ಕಾರ್ಪಣ್ಯಗಳು, ನ
ನಲಿವುಗಳು, ದೈನಂದಿನ ಬದುಕಿನ
ಸಂಕೀರ್ಣ ವಿಚಾರಗಳು ಮುಂತಾದ
ಮಾಡಿದ ಸಿನಿಮಾಗಳು ಬದುಕಿ
ಘಟನೆಗಳನ್ನು ಹೇಳುತ್ತಿರುತ್ತವೆ. ಇಂತಹ
ಡಾಕ್ಯೂಮೆಂಟರಿ ಯಂತಿರ
ಪ್ರಶಸ್ತಿಗೋಸ್ಕರವೇ ಮಾಡಲಾಗ
ಅವುಗಳನ್ನು ಯಾರು ನೋಡು
ಪ್ರತಿಯೊಬ್ಬರ ಬದುಕಿನಲ್ಲೂ ಇವು ಘಟ
ಇರುತ್ತದೆ. ಇದರಲ್ಲಿ ಯಾವ ವಿಶೇಷವ
ಬದಲಾಗಿ ಜನ ತಮ್ಮ ಬದುಕಿನ ಜಂಜಾ
ಹೊರಬರಲು ಹೊಸದೊಂದು ಲೋ
ತೆರೆಯಮೇಲೆ ನೋಡಲು ಬಯಸು
ಎಂಬಂತಹ ವಾದಗಳಿವೆ. ಆದರೆ
ನಿಜವಾಗಲೂ ಸತ್ಯಗಳಲ್ಲ.

ಒಂದು ಚಲನಚಿತ್ರ
ಮಲೇಷಿಯಾದಲ್ಲೋ, ನ್ಯೂಯಾರ್ಕಿ
ಚಿತ್ರಿಸುವುದರಿಂದ ಜನ
ನೋಡಬಯಸುತ್ತಾರೆ ಎಂಬುದು ಶುದ್ಧ
ಅಮರಾವತಿ, ನಾಸಿಕ, ಪೂನಾ ಮುಂತಾದ
ಭಾಗದ ಜನರು ತಮ್ಮದೇ ಆದ ಆ
ವಿಚಾರಗಳನ್ನು ಹೊಂದಿರುತ್ತಾರೆ.
ಸುಲಭವಾಗಿ ಅವು ಬಿಟ್ಟು ಹೋಗು
ಬೇರೆಯದೇ ಸಂಸ್ಕೃತಿಗೆ ಮಾರುಹೋಗು
ಹಾಗಿದ್ದಲ್ಲಿ ಎಷ್ಟೋ ದೊಡ್ಡ ಥಿಯೇಟರ್
ಮುಚ್ಚಿಹೋಗಬೇಕಿತ್ತು? ಇನ್ನಷ್ಟು ಥಿಯೇಟ
ಖಾಲಿ ಹೊಡೆಯುತ್ತಿರುವುದೇಕೆ?

ಜನ ಟಿ.ವಿ. ಯಲ್ಲಿಯೇ
ಸಿನಿಮಾ ನೋಡುತ್ತಾರೆ. ಎಲ್ಲೊ

ಪುಟ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH